ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಃ

# ಸಂಸ್ಕೃತ ಭಾಷಾಭ್ಯಾಸ

## [ संस्कृतभाषाभ्यासः ]

ಭಾಗ - ೧

ಬರೆದವರು :

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ. 97

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

ದೂರವಾಣಿ : 08175-573820

**2004**

ವಿಷಯಾನುಕ್ರಮಣಿಕೆ

# ಸಂಸ್ಕೃತಭಾಷಾಭ್ಯಾಸ


ಮುನ್ನುಡಿ

ಓದುಗರಿಗೆ

ಸಂಸ್ಕೃತಭಾಷಾಭ್ಯಾಸ

ಸಂಸ್ಕೃತವರ್ಣಗಳ ವಿಂಗಡ

ಪಾಠಗಳು

1 2 3 4 5 6 7 8 9 10

11 12 13 14 15 16 17 18 19 20

21 22 23 24 25 26 27 28 29 30

31 32 33 34 35 36 37 38 39 40

41 42 43 44 45 46 47

ಶಬ್ದಕೋಶ

| | | |
|---|---|---|
| ಮೊದಲನೆಯ ಮುದ್ರಣ | 1958 | (500 ಪ್ರತಿಗಳು) |
| ತಿದ್ದಿದ ದ್ವಿತೀಯ ಮುದ್ರಣ | 1966 | (1000 ಪ್ರತಿಗಳು) |
| ಮೂರನೆಯ ಮುದ್ರಣ | 1974 | (2000 ಪ್ರತಿಗಳು) |
| ನಾಲ್ಕನೆಯ ಮುದ್ರಣ | 1988 | (2000 ಪ್ರತಿಗಳು) |
| ಐದನೆಯ ಮುದ್ರಣ | 1997 | (2000 ಪ್ರತಿಗಳು) |
| ಆರನೆಯ ಮುದ್ರಣ | 2004 | (3000 ಪ್ರತಿಗಳು) |

ಪುಟಗಳು : 4 + 78

**ಬೆಲೆ : ರೂ. 20/-**

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

(Registered under the Copy Right act of 1957)

ಅಕ್ಷರಜೋಡಣೆ
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ.45, ನಾಗಸಂದ್ರ
ತ್ಯಾಗರಾಜನಗರ ಪೋಸ್ಟ್
ಬೆಂಗಳೂರು- 560 028
ದೂರವಾಣಿ : 26764650

ಮುದ್ರಣಕಾರರು :
**ಸ್ಟ್ಯಾಂಡರ್ಡ್ ಪ್ರಿಂಟರ್ಸ್**
ಶಂಕರಮಠದ ರಸ್ತೆ, ಬೆಂಗಳೂರು - 4
ದೂ. : 26521527

# ಮುನ್ನುಡಿ

ಪ್ರಕಾಶಗೊಳಿಸುವ ಸಾಹಿತ್ಯವೆಲ್ಲವೂ ಮೂಲತಃ ಸಂಸ್ಕೃತಭಾಷೆಯಲ್ಲಿದೆ. ಎಷ್ಟೇ ಅನುವಾದ ಗ್ರಂಥಗಳು ಬೇರೆ ಬೇರೆಯ ಭಾಷೆಗಳಲ್ಲಿ ಹೊರಬಂದಿದ್ದರೂ ಸಂಸ್ಕೃತಭಾಷಾಮಾಧ್ಯಮದಿಂದಲೇ ಅಧ್ಯಾತ್ಮವಿದ್ಯೆಯನ್ನು ಅಭ್ಯಾಸಮಾಡಿ ಅನುಸಂಧಾನ ಮಾಡುವದು ಹೆಚ್ಚಿನ ಮಟ್ಟದ್ದೂ ಪರಿಪೂರ್ಣವೂ ಆಗಿದ್ದು ಜಿಜ್ಞಾಸುಗಳನ್ನು ಕೃತಾರ್ಥರನ್ನಾಗಿ ಮಾಡಬಲ್ಲದು - ಎಂಬ ನಿಜವನ್ನು ಸ್ವಾನುಭವದಿಂದ ಕಂಡುಕೊಂಡ ಬ್ರಹ್ಮೀಭೂತ **ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿ**ಗಳು ವೇದಾಂತರಸಿಕರಿಗೆ ಸಂಸ್ಕೃತಾಭಾಷಾ ಪರಿಚಯವನ್ನು ಸರಳವಾದ ರೀತಿಯಲ್ಲಿ ಕಲಿಸಿಕೊಡುವ ಉದ್ದೇಶದಿಂದ ಸಿದ್ಧಗೊಳಿಸಿರುವ **ಸಂಸ್ಕೃತಭಾಷಾಭ್ಯಾಸ** ಎಂಬ ಹೆಸರಿನ ಈ ಪುಸ್ತಕವು ಶ್ರೀಶ್ರೀಗಳವರ ಜೀವಿತಕಾಲದಲ್ಲಿಯೇ ಮೂರು ಭಾಗಗಳಲ್ಲಿ ಪ್ರಕಟವಾಯಿತು. ಇವುಗಳ ಉಪಯುಕ್ತತೆಯನ್ನು ಗಮನಿಸಿ ಕಾರ್ಯಾಲಯದವರು ಈಚೆಗೆ ಮೂರು ಭಾಗಗಳನ್ನೂ ಪುನರ್ಮುದ್ರಿಸಿ ಪ್ರಕಟಿಸಿರುತ್ತಾರೆ. ಈಗ ತಮ್ಮ ಕೈಯಲ್ಲಿರುವ **ಒಂದನೆಯ ಈ ಭಾಗವು ಆರನೆಯ ಬಾರಿಗೆ** ಪುನರ್ಮುದ್ರಿತವಾಗಿ ಹೊರಬಂದಿದೆ. **ಸಂಸ್ಕೃತಪ್ರಥಮಪುಸ್ತಕಮ್** ಎಂಬ ಮತ್ತೊಂದು ಸಂಸ್ಕೃತ ಅಭ್ಯಾಸ ಗ್ರಂಥವೂ ಶ್ರೀಶ್ರೀಗಳವರ ಕೃತಿಯೇ ಆಗಿದ್ದು ಅದೂ ಸಹ ಕಾರ್ಯಾಲಯದಲ್ಲಿ ದೊರಕುತ್ತದೆ.

ಓದುಗರಿಗಾಗಿ ಕೆಲವು ಸೂಚನೆಗಳನ್ನೂ ಗ್ರಂಥಕರ್ತರೇ ಕೊಟ್ಟಿದ್ದಾರೆ. ವಾಚಕರು ಈ ಗ್ರಂಥದ ಒಂದೊಂದೇ ಭಾಗವನ್ನು ಅಧ್ಯಯನಮಾಡಿ ಸಂಸ್ಕೃತಭಾಷಾ ಜ್ಞಾನವನ್ನು ಸಂಪಾದಿಸಿಕೊಂಡು ಅಧ್ಯಾತ್ಮಗ್ರಂಥಗಳನ್ನು ಓದಿ ಕೃತಾರ್ಥರಾಗುವಂತೆ ಸದ್ಗುರುಗಳು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಹೊಳೆನರಸೀಪುರ

ತಾ|| 15-07-2004

**ಪ್ರಕಾಶಕರು**

# ಓದುಗರಿಗೆ

೧. ಈ ಪುಸ್ತಕವನ್ನು ಹೊಸದಾಗಿ ಸಂಸ್ಕೃತವನ್ನು ಕಲಿಯುವವರಿಗಾಗಿ ಬರೆದಿದೆ. **ದೇವನಾಗರಿಯ ಲಿಪಿ**ಯನ್ನು ಓದುವ ಮತ್ತು ಬರೆಯುವ ಕ್ರಮವು ತಮಗೆ ತಿಳಿದಿದೆ ಎಂದು ಇಟ್ಟುಕೊಂಡಿದ್ದೇವೆ. ಹಾಗಿಲ್ಲದಿದ್ದರೆ ಕೂಡಲೇ ಅವನ್ನು ಅಭ್ಯಾಸಮಾಡಿ ಕೊಳ್ಳಿರಿ. ಇಲ್ಲಿ ದೇವನಾಗರಿಯ ಅಕ್ಷರಗಳನ್ನೂ ಕನ್ನಡದ ಅಕ್ಷರಗಳನ್ನೂ ಜೊತೆಜೊತೆ ಯಲ್ಲಿ ಬರೆದು ತೋರಿಸಿದ್ದೇವೆ. ಅವುಗಳನ್ನೂ ಬರೆದು ಓದಿ ಅಭ್ಯಾಸ ಮಾಡಬೇಕು. ಮೊದಮೊದಲು ದೇವನಾಗರಿಯ ವಾಕ್ಯಗಳನ್ನು ಕನ್ನಡದ ಲಿಪಿಯಲ್ಲಿ ಬರೆಯುವದು, ಪುಸ್ತಕವನ್ನು ನೋಡದೆ ದೇವನಾಗರಿಯಲ್ಲಿ ಬರೆಯುವದು, ಪುಸ್ತಕವನ್ನು ನೋಡಿ ತಿದ್ದಿಕೊಳ್ಳುವದು- ಹೀಗೆ ಮಾಡಿದರೆ ಬೇಗನೆ ಅಕ್ಷರಗಳನ್ನು ಗುರುತಿಸಬಹುದು.

೨. ಪಾಠಗಳನ್ನು ಈ ಕ್ರಮದಲ್ಲಿ ಗಟ್ಟಿಮಾಡಬೇಕು :- (೧) ಸಂಸ್ಕೃತ ವಾಕ್ಯಗಳನ್ನು ಸುಮ್ಮನೆ ಓದುವುದು; (೨) ಒಂದೊಂದು ವಾಕ್ಯವನ್ನು ಓದಿ ಕನ್ನಡದ ಅರ್ಥವನ್ನು ಊಹಿಸುವುದು, ಗೊತ್ತಾಗದಿದ್ದರೆ ಪುಸ್ತಕದಲ್ಲಿ ನೋಡುವುದು ; (೩) ಕನ್ನಡವಾಕ್ಯವನ್ನು ಬರೆದುಕೊಂಡು ಅವಕ್ಕೆ ಸಂಸ್ಕೃತವನ್ನು ಬರೆದು, ಪುಸ್ತಕದಲ್ಲಿ ನೋಡಿ ತಿದ್ದಿಕೊಳ್ಳುವುದು- ಹೀಗೆ ಮಾಡಿದರೆ ಬಲುಬೇಗನೆ ವಾಕ್ಯಗಳು ವಶವಾಗುತ್ತವೆ.

೩. ಅಭ್ಯಾಸಗಳಲ್ಲಿ ಪಾಠದ ಮಾತುಗಳನ್ನೇ ಕೊಟ್ಟಿದೆ. ಮೊದಲು ಸಂಸ್ಕೃತ ವಾಕ್ಯವನ್ನು ಓದಿ ಅರ್ಥವನ್ನು ಊಹಿಸಿರಿ. ಆಮೇಲೆ ಪಾಠದಲ್ಲಿ ಅದೇ ಮಾತುಗಳು ಎಲ್ಲಿ ಬಂದಿವೆ ನೋಡಿರಿ. ಕನ್ನಡದ ಅಭ್ಯಾಸಗಳಿಗೆ ಸ್ವಪ್ರಯತ್ನದಿಂದ ಮೊದಲು ಉತ್ತರವನ್ನು ಕಂಡುಕೊಳ್ಳಿರಿ ; ಆಮೇಲೆ ಇಂಥಿಂಥ ಕಡೆಯಲ್ಲಿ ಉತ್ತರವಿದೆ ಎಂತ ತಿಳಿಸಿರುವ ಕಡೆ ಉತ್ತರವನ್ನು ಹುಡುಕಿ ತಿದ್ದಿಕೊಳ್ಳಿರಿ.

ಗ್ರಂಥಕರ್ತ.

|| ॐ ||

# ಸಂಸ್ಕೃತಭಾಷಾಭ್ಯಾಸ

शुक्लाम्बरधरं विष्णुं शशिवर्णं चतुर्भुजम् ।
प्रसन्नवदनं ध्यायेत् सर्वविघ्नोपशान्तये || १ ||

ಶುಕ್ಲಾಮ್ಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾನ್ತಯೇ ॥

वागीशाद्याः सुमनसः सर्वार्थानामुपक्रमे ।
यं नत्वा कृतकृत्याः स्युस्तं नमामि गजाननम् || २ ||

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಮ್ ॥

वक्रतुण्ड महाकाय कोटिसूर्यसमप्रभ ।
अविघ्नं कुरु मे देव सर्वकार्येषु सर्वदा || ३ ||

ವಕ್ರತುಣ್ಡ ಮಹಾಕಾಯ ಕೋಟಿಸೂರ್ಯಸಮಪ್ರಭ
ಅವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ ।

सरस्वति नमस्तुभ्यं वरदे कामरूपिणि ।
विद्यारम्भं करिष्यामि सिद्धिर्भवतु मे सदा || ४ ||

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ ।
ವಿದ್ಯಾರಮ್ಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥

गुरुर्ब्रह्मा गुरुर्विष्णुः गुरुरेव महेश्वरः ।
गुरुः साक्षात् परं ब्रह्म तस्मै श्रीगुरवे नमः || ५ ||

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರೇವ ಮಹೇಶ್ವರಃ ।
ಗುರುಃ ಸಾಕ್ಷಾತ್ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥

# ಸಂಸ್ಕೃತವರ್ಣಗಳ ವಿಂಗಡ

## ಸ್ವರಗಳು

अ इ उ ऋ ऌ ಇವು ಹ್ರಸ್ವಸ್ವರಗಳು
ಅ ಇ ಉ ಋ ಌ

आ ई ऊ ॠ ए ऐ ओ औ ಇವು ದೀರ್ಘ ಸ್ವರಗಳು
ಆ ಈ ಊ ೠ ಏ ಐ ಓ ಔ

## ವರ್ಗೀಯ ವ್ಯಂಜನಗಳು

क ख ग घ ङ ಕವರ್ಗ
ಕ ಖ ಗ ಘ ಙ

च छ ज झ ञ ಚವರ್ಗ
ಚ ಛ ಜ ಝ ಞ

ट ठ ड ढ ण ಟವರ್ಗ
ಟ ಠ ಡ ಢ ಣ

त थ द ध न ತವರ್ಗ
ತ ಥ ದ ಧ ನ

प फ ब भ म ಪವರ್ಗ
ಪ ಫ ಬ ಭ ಮ

## ಅವರ್ಗೀಯ ವ್ಯಂಜನಗಳು

य र ल व श ष स ह
ಯ ರ ಲ ವ ಶ ಷ ಸ ಹ

ಂ (ಅನುಸ್ವಾರ), ಃ (ವಿಸರ್ಗ).

ವರ್ಣಗಳನ್ನು ಅಕಾರ (ಅ ಎಂಬ ವರ್ಣ), ಕಕಾರ, ಖಕಾರ - ಹೀಗೆ 'ಕಾರ' ಎಂಬ ಮಾತನ್ನು ಸೇರಿಸಿ ಹೆಸರಿಸುತ್ತಾರೆ. ರಕಾರಕ್ಕೆ ರೇಫ ಎಂದೂ ಹೆಸರುಂಟು.

## ಉಚ್ಚಾರಣೆ

೧. ವ್ಯಂಜನಗಳಿಗೆ ಉಚ್ಚಾರಣೆಗಾಗಿ ಅಕಾರವನ್ನು ಸೇರಿಸಿದೆ. ಶುದ್ಧವಾದ ವ್ಯಂಜನ ರೂಪವನ್ನು क्, ख्, ग्, घ्, ङ् - ಹೀಗೆ ಕೆಳಗೆ ಕಾಲು ಮುರಿದ ಚಿಹ್ನೆ ಹಾಕಿ ತೋರಿಸುವರು.

೨. ಸ್ವರಗಳು ಸೇರಿದ ವ್ಯಂಜನಗಳಿಗೂ **ಅಕ್ಷರ** ಎಂದು ಹೆಸರು.

೩. ಅನುಸ್ವಾರ, ವಿಸರ್ಗ- ಇವುಗಳ ಉಚ್ಚಾರಣೆಯನ್ನು ಬಲ್ಲವರಿಂದ ಕೇಳಿ ತಿಳಿದುಕೊಳ್ಳಬೇಕು (ಅನುಸ್ವಾರವನ್ನು म् ಎಂದೂ, ವಿಸರ್ಗವನ್ನು ಹ ಎಂದೂ ಉಚ್ಚರಿಸಬಾರದು).

## ಗುಣಿತಾಕ್ಷರಗಳು

| | | | | | | | |
|---|---|---|---|---|---|---|---|
| अ | आ | इ | ई | उ | ऊ | ऋ | ॠ |
| ಅ | ಆ | ಇ | ಈ | ಉ | ಊ | ಋ | ೠ |
| क | का | कि | की | कु | कू | कृ | कॄ |
| ಕ | ಕಾ | ಕಿ | ಕೀ | ಕು | ಕೂ | ಕೃ | ಕೄ |
| ऌ | ए | ऐ | ओ | औ | अं | अः | |
| ಌ | ಏ | ಐ | ಓ | ಔ | ಅಂ | ಅಃ | |
| कॢ | के | कै | को | कौ | कं | कः | |
| ಕ್ಲು | ಕೇ | ಕೈ | ಕೋ | ಕೌ | ಕಂ | ಕಃ | |
| ग | गा | गि | गी | गु | गू | गृ | गॄ |
| ಗ | ಗಾ | ಗಿ | ಗೀ | ಗು | ಗೂ | ಗೃ | ಗೄ |
| गॢ | गे | गै | गो | गौ | गं | गः | |
| ಗ್ಲು | ಗೇ | ಗೈ | ಗೋ | ಗೌ | ಗಂ | ಗಃ | |

ಗುಣಿತಾಕ್ಷರಗಳಲ್ಲಿ ऋ, ॠ, ऌ ಇವನ್ನು ಬರೆಯುವ ಕ್ರಮವನ್ನು ಲಕ್ಷ್ಯದಲ್ಲಿಡಿರಿ.

# ಸಂಯುಕ್ತಾಕ್ಷರಗಳು

ಸಂಯುಕ್ತಾಕ್ಷರವೆಂದರೆ ಒಂದಕ್ಕೊಂದು ಕೂಡಿ ಉಚ್ಚಾರವಾಗುವ ಅನೇಕ ವ್ಯಂಜನಗಳ ಸಮುದಾಯ ; ಅಲ್ಲಿ ಕೊನೆಯ ವ್ಯಂಜನಕ್ಕೆ ಮಾತ್ರ ಸ್ವರವು ಸೇರಿರುತ್ತದೆ ; ಮಿಕ್ಕವುಗಳಿಗೆ ಸಾ ಾನ್ಯವಾದ ನಿಡುಗೀಟನ್ನು ತೆಗೆದುಹಾಕಿರುತ್ತದೆ. ಇಲ್ಲಿ ಕೆಲವು ಮುಖ್ಯವಾದ ಉದಾ ರಣೆಗಳಿವೆ

| | | | | | | | | | | |
|---|---|---|---|---|---|---|---|---|---|---|
| क : | क्क | क्त | क्त्र | क्त्व | क्न | | | क्र | क्ल | |
| | ಕ್ಕ | ಕ್ತ | ಕ್ತ್ರ | ಕ್ತ್ವ | ಕ್ನ | ಕ್ಮ | ಕ್ಯ | ಕ್ರ | ಕ್ಲ | ಕ್ವ |
| | क्ष | क्ष्ण | क्ष्म | | क्ष्व | | | | | |
| | ಕ್ಷ | ಕ್ಷ್ಣ | ಕ್ಷ್ಮ | ಕ್ಷ್ಯ | ಕ್ಷ್ವ | | | | | |
| ख | ख्व | ख्य | ख्र | | | | | | | |
| | ಖ್ವ | ಖ್ಯ | ಖ್ರ | | | | | | | |
| ग : | ग्ध | ग्न | ग्म | ग्य | ग्र | ग्र्य | ग्ल | ग्व | | |
| | ಗ್ಧ | ಗ್ನ | ಗ್ಮ | ಗ್ಯ | ಗ್ರ | ಗ್ರ್ಯ | ಗ್ಲ | ಗ್ವ | | |
| घ : | घ्न | घ्य | घ्र | घ्व | | | | | | |
| | ಘ್ನ | ಘ್ಯ | ಘ್ರ | ಘ್ವ | | | | | | |

ಇ: ಲಕ್ಷ್ಯದಲ್ಲಿ ಕ್ಷ-ಇದು ಅಕ್ಷರವಾಗಿ ಕಾಣುತ್ತಿದೆ.

ङ्क ङ्क्त ङ्क्ष ङ्क्ष्व ङ्ख ङ्ख्य ङ्ग ङ्घ ङ्घ्र ङ्म ङ्य

ಙ್ಕ ಙ್ಕ್ತ ಙ್ಕ್ಷ ಙ್ಕ್ಷ್ವ ಙ್ಖ ಙ್ಖ್ಯ ಙ್ಗ ಙ್ಘ ಙ್ಘ್ಯ ಙ್ಘ್ರ ಙ್ಮ ಙ್ಯ

ಚ: च्च च्छ च्छ्र च्छ्व च्म च्य च्व

ಚ್ಚ ಚ್ಛ ಚ್ಛ್ರ ಚ್ಛ್ವ ಚ್ಮ ಚ್ಯ ಚ್ವ

ಜ: ज्ज ज्ज्व ज्झ ज्ञ ज्म ज्य ज्र ज्व ञ्च ञ्ज

ಜ್ಜ ಜ್ಜ್ವ ಜ್ಝ ಜ್ಞ ಜ್ಮ ಜ್ಯ ಜ್ರ ಜ್ವ ಞ್ಚ ಞ್ಜ

ज्ञ ज्ञ्य -ಇವನ್ನು ನೆನಪಿನಲ್ಲಿಡಿ. ಒಂದೇ ಅಕ್ಷರದಂತೆ ಕಾಣುತ್ತಿದೆ.

ಜ್ಞ ಜ್ಞ್ಯ

ಟ: ट्क ट्ट ट्य ट्व

ಟ್ಕ ಟ್ಟ ಟ್ಯ ಟ್ವ

ಠ: ठ्य ठ्र

ಠ್ಯ ಠ್ರ

ಡ: ड्ग ड्म ड्य ड्र ड्व

ಡ್ಗ ಡ್ಮ ಡ್ಯ ಡ್ರ ಡ್ವ

ಢ: ढ्य ढ्र
ಢ್ಯ ಢ್ರ

ಣ: ण्ट ण्ठ ण्ड ण्ड्य ण्ण ण्म ण्य ण्व
ಣ್ಟ ಣ್ಠ ಣ್ಡ ಣ್ಡ್ಯ ಣ್ಣ ಣ್ಮ ಣ್ಯ ಣ್ವ

ತ: त्क त्क्र त्त त्त्य त्त्र त्थ त्न त्न्य त्त्व त्प त्म त्म्य
ತ್ಕ ತ್ಕ್ರ ತ್ತ ತ್ತ್ಯ ತ್ತ್ರ ತ್ಥ ತ್ನ ತ್ನ್ಯ ತ್ತ್ವ ತ್ಪ ತ್ಮ ತ್ಮ್ಯ
त्य त्र त्र्य त्व त्स त्स्न्य त्स्य
ತ್ಯ ತ್ರ ತ್ರ್ಯ ತ್ವ ತ್ಸ ತ್ಸ್ನ್ಯ ತ್ಸ್ಯ

ಥ: थ्न थ्य
ಥ್ನ ಥ್ಯ

ದ: द्ग द्ग्र द्द द्ध द्ध्य द्ध्र द्ध्र्य द्ध्व द्न द्ब द्ब्र द्ब
ದ್ಗ ದ್ಗ್ರ ದ್ದ ದ್ಧ ದ್ಧ್ಯ ದ್ಧ್ರ ದ್ಧ್ರ್ಯ ದ್ಧ್ವ ದ್ನ ದ್ಬ ದ್ಬ್ರ ದ್ಬ
द्भ्र द्भ्य द्म द्य द्र्य द्र द्व द्व्र द्व्य
ದ್ಭ್ರ ದ್ಭ್ಯ ದ್ಮ ದ್ಯ ದ್ರ್ಯ ದ್ರ ದ್ವ ದ್ವ್ರ ದ್ವ್ಯ

| | | | | | | | | | | | |
|---|---|---|---|---|---|---|---|---|---|---|---|
| ಧ: | ध्न | ध्न्य | ध्म | ध्य | ध्र | ध्र्य | ध्व | | | | |
| | ಧ್ನ | ಧ್ನ್ಯ | ಧ್ಮ | ಧ್ಯ | ಧ್ರ | ಧ್ರ್ಯ | ಧ್ವ | | | | |
| ನ: | न्त | न्त्य | न्द | न्द्र | न्ध | न्ध्य | न्ध्र | न्न | न्म | न्य | |
| | ನ್ತ | ನ್ತ್ಯ | ನ್ದ | ನ್ದ್ರ | ನ್ಧ | ನ್ಧ್ಯ | ನ್ಧ್ರ | ನ್ನ | ನ್ಮ | ನ್ಯ | |
| | न्र | न्व | न्स | | | | | | | | |
| | ನ್ರ | ನ್ವ | ನ್ಸ | | | | | | | | |
| ಪ: | प्त | प्त्य | प्न | प्म | प्य | प्र | प्ल | प्व | प्स | प्स्य | प्स्व |
| | ಪ್ತ | ಪ್ತ್ಯ | ಪ್ನ | ಪ್ಮ | ಪ್ಯ | ಪ್ರ | ಪ್ಲ | ಪ್ವ | ಪ್ಸ | ಪ್ಸ್ಯ | ಪ್ಸ್ವ |
| ಬ: | ब्ज | ब्द | ब्ध | ब्न | ब्भ | ब्य | ब्र | ब्व | | | |
| | ಬ್ಜ | ಬ್ದ | ಬ್ಧ | ಬ್ನ | ಬ್ಭ | ಬ್ಯ | ಬ್ರ | ಬ್ವ | | | |
| ಭ: | भ्ण | भ्न | भ्य | भ्र | भ्ल | भ्व | | | | | |
| | ಭ್ಣ | ಭ್ನ | ಭ್ಯ | ಭ್ರ | ಭ್ಲ | ಭ್ವ | | | | | |
| ಮ: | म्न | म्प | म्प्र | म्भ | म्म | म्य | म्र | म्ल | म्व | | |
| | ಮ್ನ | ಮ್ಪ | | ಮ್ಭ | ಮ್ಮ | ಮ್ಯ | ಮ್ರ | ಮ್ಲ | ಮ್ವ | | |

| | | | | | | | | | | | |
|---|---|---|---|---|---|---|---|---|---|---|---|
| | य्य | य्व | | | | | | | | | |
| | ಯ್ಯ | ಯ್ವ | | | | | | | | | |
| ರ : | र्क | | र्ख | र्ग | र्ग्ब | र्ग्भ | र्घ्ब | र्ण्य | र्त | र्त्य | र्त्त्य |
| (ರೇಫ) | ರ್ಕ | ರ್ಕ್ಷ್ಯ | ರ್ಖ | ರ್ಗ | ರ್ಗ್ಬ | ರ್ಗ್ಭ | ರ್ಘ್ಬ | ರ್ಣ್ಯ | ರ್ತ | ರ್ತ್ಯ | ರ್ತ್ತ್ಯ |
| | र्द | र्द्ध | | | | | | | | | |
| | ರ್ದ | ರ್ದ್ಧ | | | | | | | | | |

ಋ : निर्ऋतिः (ನಿರ್ಋತಿಃ) ಇದನ್ನು ಬರೆ ುವ ಕ್ರಮವನ್ನು ಲಕ್ಷಿಸಿರಿ

| | | | | | | | |
|---|---|---|---|---|---|---|---|
| ಲ : | ल्क | ल्ग | ल्म | ल्य | ल्ल | ल्व | ल्ह |
| | ಲ್ಕ | ಲ್ಗ | ಲ್ಮ | ಲ್ಯ | ಲ್ಲ | ಲ್ವ | ಲ್ಹ |
| ವ : | व्ण | व्न | व्य | व्र | | | |
| | ವ್ಣ | ವ್ನ | ವ್ಯ | ವ್ರ | | | |

| | | | | | | | | | | | | |
|---|---|---|---|---|---|---|---|---|---|---|---|---|
| ಶ | श्च | श्छ | श्न | श्म | श्य | श्र | श्ल | श्व | | | | |
| | ಶ್ಚ | ಶ್ಛ | ಶ್ನ | ಶ್ಮ | ಶ್ಯ | ಶ್ರ | ಶ್ಲ | ಶ್ವ | | | | |
| ಷ | ष्क | ष्क्र | ष्ट | ष्ट्य | ष्ट्र | ष्ट्र्य | ष्ट्व | ष्ठ | ष्ण | ष्ण्य | ष्प | ष्प्र |
| | ಷ್ಕ | ಷ್ಕ್ರ | ಷ್ಟ | ಷ್ಟ್ಯ | ಷ್ಟ್ರ | ಷ್ಟ್ರ್ಯ | ಷ್ಟ್ವ | ಷ್ಠ | ಷ್ಣ | ಷ್ಣ್ಯ | ಷ್ಪ | ಷ್ಪ್ರ |
| | ष्म | ष्य | ष्व | | | | | | | | | |
| | ಷ್ಮ | ಷ್ಯ | ಷ್ವ | | | | | | | | | |
| ಸ | स्क | स्ख | स्त | स्त्य | स्त्र | स्त्व | स्थ | स्न | स्प | स्प्र | स्फ | स्म |
| | ಸ್ಕ | ಸ್ಖ | ಸ್ತ | ಸ್ತ್ಯ | ಸ್ತ್ರ | ಸ್ತ್ವ | ಸ್ಥ | ಸ್ನ | ಸ್ಪ | ಸ್ಪ್ರ | ಸ್ಫ | ಸ್ಮ |
| | स्य | स्र | स्व | स्व्र | स्स | | | | | | | |
| | ಸ್ಯ | ಸ್ರ | ಸ್ವ | ಸ್ವ್ರ | ಸ್ಸ | | | | | | | |
| ಹ | ह्ण | ह्न | ह्म | ह्य | ह्र | ह्ल | ह्व | | | | | |
| | ಹ್ಣ | ಹ್ನ | ಹ್ಮ | ಹ್ಯ | ಹ್ರ | ಹ್ಲ | ಹ್ವ | | | | | |

## ಸಂಯುಕ್ತಾಕ್ಷರಗಳ ಬರವಣಿಗೆ

೧. ಸಾಮಾನ್ಯವಾಗಿ ಅರ್ಧ ಉಚ್ಚಾರವಾಗುವ ವರ್ಣವನ್ನು ಅರ್ಧವಾಗಿ ಬರೆಯುತ್ತಾರೆ. ಕೊನೆಯ ವರ್ಣವು ಮಾತ್ರ ಪೂರ್ಣವಾಗಿರುತ್ತದೆ. ಉದಾ : **'स्वच्छम्'** ಇಲ್ಲಿ **व, छ** - ಇವುಗಳನ್ನು ಪೂರ್ಣವಾಗಿ ಬರೆದಿದೆ. ಸಂಯುಕ್ತಾಕ್ಷರಗಳಲ್ಲಿರುವ ವ್ಯಂಜನಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಬರೆಯುವುದೇ ರೂಢಿ. ಕೆಲವು ಕಡೆ ಮಾತ್ರ ಕನ್ನಡದಂತೆ ಕೊನೆಯ ವರ್ಣವು ಕೆಳಗಡೆ ಬರುತ್ತದೆ.

ಉದಾ : **'शुक्लम्'**, **'अग्निः'**

೨. ವರ್ಗದ ಕೊನೆಯ ಅಕ್ಷರಗಳಿಗೆ **ಅನುನಾಸಿಕ**ವೆಂದು ಹೆಸರು. ಪದಗಳ ನಡುವೆ ಅವುಗಳನ್ನು ಬರೆಯುವಾಗ ಅವಕ್ಕೆ ಬದಲು ಅನುಸ್ವಾರದ ಗುರುತನ್ನು (ಸೊನ್ನೆಯನ್ನು) ಹಾಕಬಾರದು ಕೊನೆಯ **ಮ**ಕಾರಕ್ಕೂ ಸೊನ್ನೆಯನ್ನು ಹಾಕಬಾರದು.

ಉದಾ : 'सङ्गः', 'सञ्चयः', 'मण्डपः', 'नन्दः', 'अम्बरम्' । ಇವನ್ನು संग, 'संचयः', 'मंडपः', ' नंदः', 'अंबरं' - ಎಂದು ಬರೆಯುವುದು ತಪ್ಪು

೩. **ಮ**ಕಾರಾಂತ ಪದದ ಮುಂದೆ ಸ್ವರವಿದ್ದರೆ ಅದಕ್ಕೆ ಸೊನ್ನೆಯನ್ನು ಹಾಕಬಾರದು.

ಉದಾ : किम् एवम् ? ಇದನ್ನು किं एवं ? ಎಂದು ಬರೆಯುವದು ತಪ್ಪು.

೪. **ಮ**ಕಾರಾಂತ ಪದದ ಮುಂದೆ ವ್ಯಂಜನವಿದ್ದರೆ ಅದಕ್ಕೆ ಸೊನ್ನೆಯನ್ನು ಬರೆಯಬಹುದು ; ಆದರೆ ಉಚ್ಚಾರಣೆಯನ್ನು ಸರಿಯಾಗಿ ಮಾಡಬೇಕು.

ಉದಾ : किं यमः ? अयं रामः । त्वं लक्ष्मणः । अहं वदामि । ಇಲ್ಲಿ ಅನುಸ್ವಾರದ ಉಚ್ಚಾರಣೆ ;

इदं कमलम् । अहं छात्रः । किं फलम् ? ಇಲ್ಲಿ ವರ್ಗೀಯವ್ಯಂಜನದ ಉಚ್ಚಾರಣೆ.

**ಈ ಶಬ್ದಗಳನ್ನು ದೇವನಾಗರೀ ಲಿಪಿಯಲ್ಲಿ ಬರೆಯಿರಿ :**

| | | | | |
|---|---|---|---|---|
| ಅಹಮ್ | ಕಮಲಮ್ | ಸಹ | ಪುಣ್ಯಮ್ | ಬುದ್ಧಿಮನ್ತಃ |
| ಆನಯ | ಕಾಶೀ | ಸಾಧುಃ | ಈಶ್ವರಃ | ಶತ್ರುಘ್ನಃ |
| ಇವ | ಕಿಮ್ | ಸಿಂಹಃ | ಕ್ಷೀರಮ್ | ಸ್ವಪ್ನಃ |
| ಈಶಃ | ಕೀಟಃ | ಸೀತಾ | ತಕ್ರಮ್ | ವ್ಯಾಘ್ರಃ |
| ಉದರಮ್ | ಕುಹಕಮ್ | ಸುಖಮ್ | ಪ್ರವಿಷ್ಟಃ | ಮಹಾತ್ಮ್ಯಮ್ |
| ಊಹಃ | ಕೂಪಃ | ಸೂಚೀ | ಮೂಷಕಃ | ವಾರ್ತಾಪತ್ರಮ್ |
| ಋಣಮ್ | ಕೃಶಃ | ಸೃಷ್ಟಿಃ | ಪುಚ್ಛಮ್ | ಲಕ್ಷ್ಮಣಃ |
| ಏಕಃ | ಕೇಶಃ | ಸೇನಾ | ಬ್ರಾಹ್ಮಣಃ | ಮತ್ಸ್ಯಃ |
| ಐಷಮಃ | ಕೈವರ್ತಃ | ಸೈನ್ಧವಮ್ | ಪ್ರಾಜ್ಞಃ | ಉಜ್ಜ್ವಲಮ್ |
| ಓಷಃ | ಕೋಕಿಲಃ | ಸೋಪಾನಮ್ | ಶ್ರೇಷ್ಠೀ | ರತ್ನಮ್ |
| ಔಷಧಮ್ | ಕೌಶಲಮ್ | ಸೌಲಭ್ಯಮ್ | ಭಗವದ್ಗೀತಾ | ಅಯೋಧ್ಯಾ |

**ಈ ಕೆಳಗಿನ ಶಬ್ದಗಳಲ್ಲಿ ಒತ್ತುಗಳು ಎಲ್ಲಿರಬೇಕೆಂಬುದನ್ನು ಲಕ್ಷ್ಯವಿಟ್ಟುಕೊಂಡು ದೇವನಾಗರೀ ಲಿಪಿಯಲ್ಲಿ ಬರೆಯಿರಿ :**

| | | | |
|---|---|---|---|
| ಪದ್ಮಾ | ವಿತ್ತಮ್ | ಪಿತ್ರ್ಯಮ್ | ದಾರಿದ್ರ್ಯಮ್ |
| ಕೃಷ್ಣಮ್ | ಕೃಷ್ಟಃ | ಪ್ರಹ್ಲಾದಃ | ಅಶ್ವಃ |
| ಶುಕ್ಲಮ್ | ಸಮ್ಪ್ರದಾಯಃ | ಬಾಹ್ಯಮ್ | ಆಮ್ಲಮ್ |
| ಉದ್ಯಾನಮ್ | ರುಕ್ಮಿಣೀ | ಸಮೃದ್ಧಿಃ | ಗಙ್ಗಾನದೀ |
| ಪಙ್ಕಮ್ | ಖಡ್ಗಃ | ಅಮ್ಬರಮ್ | ಪ್ರಾಜ್ಞಃ |

## ಒಂದನೆಯ ಪಾಠ

ಕನ್ನಡದಲ್ಲಿ ಸಂಸ್ಕೃತದ ಅನೇಕ ಶಬ್ದಗಳು ಬಳಕೆಯಲ್ಲಿವೆ. ಶಬ್ದಗಳ ರೂಪಭೇದಗಳನ್ನು ನೆನಪಿನಲ್ಲಿಟ್ಟುಕೊಳ್ಳುವದು ಮಾತ್ರ ಅವಶ್ಯ.

ನಾರಾಯಣನನ್ನು ನಮಸ್ಕರಿಸುತ್ತೇನೆ. - नारायणं नमामि

ನಾರಾಯಣನು ಭಗವಂತನು. - नारायणः भगवान् ।

ನರನನ್ನು ನಮಸ್ಕರಿಸುತ್ತೇನೆ. - नरं नमामि ।

ನರನು ನರೋತ್ತಮನು. - नरः नरोत्तमः ।

ಸರಸ್ವತಿಯನ್ನು ನಮಸ್ಕರಿಸುತ್ತೇನೆ. - सरस्वतीं नमामि ।

ಸರಸ್ವತಿಯು ದೇವಿಯು. - सरस्वती देवी ।

ವಾಕ್ಯಗಳ ಮುಂದೆ ಪೂರ್ಣವಿರಾಮವನ್ನು । ಹೀಗೆ ನಿಡುಗೀಟಿನಿಂದ ತೋರಿಸುತ್ತಾರೆ. ಸಂಸ್ಕೃತದಲ್ಲಿ ಶಬ್ದಗಳು ಕನ್ನಡದ ಅನುಕ್ರಮದಲ್ಲಿಯೇ ಇರಬೇಕಾದದ್ದಿಲ್ಲ ಈ ವಾಕ್ಯಗಳನ್ನು ನೋಡಿ **ನಮಾಮಿ ನಾರಾಯಣಮ್ । ನಮಾಮಿ ನರಮ್ । ನಮಾಮಿ ಸರಸ್ವತೀಮ್ ।**

ದ್ವಿತೀಯಾವಿಭಕ್ತಿಗೆ **'ಮ್'** ಎಂಬುದೇ ಗುರುತು. ಪದದ ಮುಂದೆ ವ್ಯಂಜನ ವಿದ್ದರೆ ಇದಕ್ಕೆ ಸೊನ್ನೆಯನ್ನು ಬರೆಯುವರು. ಉದಾ : ನಾರಾಯಣಂ ನಮಾಮಿ.

### ಅಭ್ಯಾಸ ೧

**पश्यामि** **क्षालयामि** (ತೊಳೆಯುತ್ತೇನೆ), **पठामि** (ಓದುತ್ತೇನೆ), **स्मरामि** (ಸ್ಮರಿಸುತ್ತೇನೆ), **पूजयामि** (ಪೂಜಿಸುತ್ತೇನೆ).

**ಈ ವಾಕ್ಯಗಳ ಅರ್ಥವನ್ನು ಊಹಿಸಿರಿ:** **१.** ब्राह्मणं पश्यामि । **२.** ब्राह्मणः पूज्यः । **३.** पादं क्षालयामि । **४.** नारायणं भजामि । **५.** देवं पूजयामि । **६.** परमेश्वरं नमामि । **७.** इतिहासं पठामि । **८.** कालं स्मरामि ।

**ಈ ವಾಕ್ಯಗಳನ್ನು ಸಂಸ್ಕೃತಕ್ಕೆ ತಿರುಗಿಸಿರಿ :**[1] ಪ್ರಥಮಾವಿಭಕ್ತಿಗೆ ವಿಸರ್ಗ, ದ್ವಿತೀಯಾವಿಭಕ್ತಿಗೆ ಸೊನ್ನೆ (ಅನುಸ್ವಾರ), ವಾಕ್ಯದ ಕೊನೆಯಲ್ಲಿದ್ದರೆ 'ಮ್' ಇರಲಿ.

೧. ಪರಮೇಶ್ವರನು ಪೂಜ್ಯನು. **೨.** ದೇವನನ್ನು ನಮಸ್ಕರಿಸುತ್ತೇನೆ.

**೩.** ನಾರಾಯಣನನ್ನು ಭಜಿಸುತ್ತೇನೆ. **೪.** ಆಚಾರ್ಯನನ್ನು ಸ್ಮರಿಸುತ್ತೇನೆ.

**೫.** ಇತಿಹಾಸವನ್ನು ಓದುತ್ತೇನೆ.

1. ಈ ಅಭ್ಯಾಸದ ಉತ್ತರಗಳು ೫ನೆಯ ಅಭ್ಯಾಸದಲ್ಲಿವೆ. ಅವನ್ನು ಹುಡಿಕಿ ನೋಡಿಕೊಳ್ಳಿರಿ.

## ಎರಡನೆಯ ಪಾಠ

ಸಂಸ್ಕೃತಶಬ್ದಗಳ ಲಿಂಗಗಳು ಕನ್ನಡಶಬ್ದಗಳ ಲಿಂಗಗಳೇ ಆಗಿರಬೇಕೆಂಬ ನಿಯಮವಿಲ್ಲ. ಉದಾಹರಣೆಗೆ, ಈ ಕೆಳಗಿನ ಶಬ್ದಗಳು **ಪುಲ್ಲಿಂಗ**:
**(१) देवः, रामः, सूर्यः, चन्द्रः, वृक्षः, धर्मः, कालः**

(ಗಂಡಸರ ಹೆಸರು ಪುಲ್ಲಿಂಗ, ಹೆಂಗಸರ ಹೆಸರು ಸ್ತ್ರೀಲಿಂಗ - ಎಂಬುದು ಕನ್ನಡದ ನಿಯಮ ; ಗಂಡುಪ್ರಾಣಿಗಳ ಹೆಸರುಗಳು ಪುಲ್ಲಿಂಗ, ಹೆಣ್ಣುಪ್ರಾಣಿಗಳ ಹೆಸರುಗಳು ಸ್ತ್ರೀಲಿಂಗವೆಂಬ ನಿಯಮವೂ ಸಂಸ್ಕೃತದಲ್ಲಿದೆ ; ನಿರ್ಜೀವವಸ್ತುಗಳ ಹೆಸರುಗಳು ಮೂರು ಲಿಂಗಗಳಲ್ಲಿ ಯಾವದಾದರೊಂದರಲ್ಲಿ ಇರಬಹುದು. ಆದರೂ ಶಬ್ದಗಳ ಲಿಂಗವನ್ನು ಅವುಗಳ ಅಂತ್ಯವರ್ಣಗಳಿಂದಲೇ ಬಲುಮಟ್ಟಿಗೆ ಗೊತ್ತುಮಾಡಬೇಕಾಗುತ್ತದೆ.)

**ಅಕಾರಾಂತ ಶಬ್ದಗಳು ಪುಲ್ಲಿಂಗ, ನಪುಂಸಕಲಿಂಗ - ಇವೆರಡರಲ್ಲಿ ಒಂದಾಗಿರುತ್ತದೆ.**

ಈ ಕೆಳಗೆ ಕೊಟ್ಟಿರುವ ಅಕಾರಾಂತ ಶಬ್ದಗಳು **ನಪುಂಸಕಲಿಂಗ**:
**(२) फलम्, पुण्यम्, पापम्, सत्यम्, अनृतम्, ज्ञानम्, महाभारतम्, पुस्तकम् ।**

ನಪುಂಸಕಲಿಂಗಗಳಿಗೆ ಪ್ರಥಮಾವಿಭಕ್ತಿ, ದ್ವಿತೀಯಾವಿಭಕ್ತಿ - ಇವೆರಡಕ್ಕೂ ಒಂದೇ ರೂಪ. फलम्,- ಹಣ್ಣು, ಹಣ್ಣನ್ನು ; अनृतम्- ಸುಳ್ಳು, ಸುಳ್ಳನ್ನು.

**करोति** (ಮಾಡುತ್ತಾನೆ, ಮಾಡುತ್ತಾಳೆ, ಮಾಡುತ್ತದೆ), **वदति** (ಹೇಳುತ್ತಾನೆ, ...ತ್ತಾಳೆ, ...ತ್ತದೆ); **नमति** (ನಮಸ್ಕರಿಸುತ್ತಾನೆ, ...ತ್ತಾಳೆ, ...ತ್ತದೆ); **पठति** (ಓದುತ್ತಾನೆ, ...ತ್ತಾಳೆ, ...ತ್ತದೆ); **प्रक्षालयति** (ತೊಳೆದುಕೊಳ್ಳುತ್ತಾನೆ, ...ತ್ತಾಳೆ, ...ತ್ತದೆ); **चरति** (ಆಚರಿಸುತ್ತಾನೆ, ಮಾಡುತ್ತಾನೆ, ...ತ್ತಾಳೆ, ...ತ್ತದೆ).

### ಅಭ್ಯಾಸ ೨

**ಈ ವಾಕ್ಯಗಳನ್ನು ಕನ್ನಡಿಸಿ : १.** रामः किं (ಏನನ್ನು) करोति ? दशरथं नमति । **२.** सीता किं करोति ? रामं नमति । **३.** ब्राह्मणः किं करोति ? जपं करोति । **४.** अहं देवं पश्यामि । **५.** महाभारतं पठामि, ब्राह्मणं पूजयामि, सूर्यं नमामि ।

**ಈ ವಾಕ್ಯಗಳನ್ನು ಸಂಸ್ಕೃತಕ್ಕೆ ತಿರುಗಿಸಿರಿ :**[1] **೧.** ಸರಸ್ವತಿಯನ್ನು ಪೂಜಿಸುತ್ತೇನೆ. **೨.** ಬ್ರಾಹ್ಮಣನು ಕಾಲನ್ನು (पादम्) ತೊಳೆದುಕೊಳ್ಳುತ್ತಾನೆ. **೩.** ರಾಮನು ಏನು ಮಾಡುತ್ತಾನೆ? ಸತ್ಯವನ್ನು ಹೇಳುತ್ತಾನೆ, ಧರ್ಮವನ್ನು ಆಚರಿಸುತ್ತಾನೆ (चरति). **೪.** ರಾವಣನು ಏನು ಮಾಡುತ್ತಾನೆ ? ಸುಳ್ಳನ್ನು ಹೇಳುತ್ತಾನೆ.

1. ಸಂಸ್ಕೃತವಾಕ್ಯಗಳು ೬ನೆಯ ಅಭ್ಯಾಸದಲ್ಲಿ ಸಿಕ್ಕುತ್ತವೆ; ಉತ್ತರವನ್ನು ಬರೆದ ಮೇಲೆ ನೋಡಿರಿ.

## ಮೂರನೆಯ ಪಾಠ

| | |
|---|---|
| ನಾನು ರಾಮಾಯಣವನ್ನು ಓದುತ್ತೇನೆ. | - अहं रामायणं पठामि । |
| ನೀನು ಏನನ್ನು ಓದುತ್ತೀಯೆ? | - त्वं किं पठसि ? |
| ನಾನು ಇತಿಹಾಸವನ್ನು ಓದುತ್ತೇನೆ. | - अहं इतिहासं पठामि । |
| ರಾಮನು ಏನು (ಏನನ್ನು) ಓದುತ್ತಾನೆ? | - रामः किं पठति ? |
| ಅವನು ಸ್ತೋತ್ರವನ್ನು ಓದುತ್ತಾನೆ. | - सः स्तोत्रं पठति । |
| ಸೀತೆಯು ಏನು ಹೇಳುತ್ತಾಳೆ? | - सीता किं वदति ? |
| ಅವಳು ಮಂತ್ರವನ್ನು ಜಪಿಸುತ್ತಾಳೆ. | - सा मन्त्रं जपति । |
| ಹಣ್ಣು ಬೀಳುತ್ತದೆಯೇನು? | - फलं पतति किम् ? |
| ನಾನು ಅದನ್ನು ತಿನ್ನುತ್ತೇನೆ. | - अहं तत् खादामि । |

'ನಾನು', 'ನೀನು', 'ಅವನು', 'ಅವಳು', 'ಅದು'- ಎಂಬ ಮಾತುಗಳನ್ನು ಸೇರಿಸದೆ 'ಓದುತ್ತೇನೆ', 'ಓದುತ್ತೀಯೆ', 'ಓದುತ್ತಾನೆ', 'ಜಪಿಸುತ್ತಾಳೆ', 'ಬೀಳುತ್ತದೆ'- ಎಂದಿಷ್ಟೇ ಕನ್ನಡದಲ್ಲಿ ಹೇಳಬಹುದಷ್ಟೆ? ಇದರಂತೆಯೇ ಸಂಸ್ಕೃತದಲ್ಲಿಯೂ ಕ್ರಿಯಾಪದವೊಂದನ್ನೇ ಪ್ರಯೋಗಿಸಬಹುದು.

'ಪಠಾಮಿ', 'ಪಠಸಿ', 'ಪಠತಿ', 'ಜಪತಿ', 'ಪತತಿ', 'ಕರೋಮಿ', 'ಕರೋಷಿ', 'ಕರೋತಿ'.

### ಅಭ್ಯಾಸ ೩

**ಕನ್ನಡಕ್ಕೆ ತಿರುಗಿಸಿರಿ : १.** अहं रामं पश्यामि । **२.** त्वं लक्ष्मणं पश्यसि किम् ? **३.** भरतं कः पश्यति ? **४.** कालं स्मरामि, परमेश्वरं भजामि । **५.** त्वं किं पश्यसि ? सूर्यं पश्यसि किम् ? **६.** सीता किं करोति ? **७.** सा रामं स्मरति, राममन्त्रं जपति ।

**ಸಂಸ್ಕೃತಕ್ಕೆ ತಿರುಗಿಸಿರಿ**[1] : ೧ ನಾನು ಪುಣ್ಯವನ್ನು ಮಾಡುತ್ತೇನೆ. **೨.** ನೀನು ಸುಳ್ಳನ್ನು ಹೇಳುತ್ತೀಯೇನು? **೩.** ಅವನು ಏನು ಹೇಳುತ್ತಾನೆ? **೪.** ನೀನು ಏನು ಮಾಡುತ್ತೀಯೆ? **೫.** ಅವಳು ಹಣ್ಣನ್ನು ತಿನ್ನುತ್ತಾಳೇನು?

---

1. ೭ನೆಯ ಅಭ್ಯಾಸದಲ್ಲಿರುವ ಸಂಸ್ಕೃತ ವಾಕ್ಯಗಳಲ್ಲಿ ಉತ್ತರವು ಸಿಕ್ಕುತ್ತದೆ.

## ನಾಲ್ಕನೆಯ ಪಾಠ

ಈ ವಾಕ್ಯಗಳಲ್ಲಿ **ಮ**ಕಾರಕ್ಕೆ ಅನುಸ್ವಾರವು ಬಂದಿರುವ ಸ್ಥಳಗಳನ್ನೂ, **ಸಃ** ಎಂಬುದರ ವಿಸರ್ಗವು ಹೋಗಿರುವ ಸ್ಥಳಗಳನ್ನೂ ಲಕ್ಷ್ಯದಲ್ಲಿಟ್ಟು ನೋಡಿರಿ :

| | |
|---|---|
| अहम् अत्र तिष्टामि । | - ನಾನು ಇಲ್ಲಿ ನಿಂತಿರುತ್ತೇನೆ. |
| त्वं आगच्छसि किम् ? | - ನೀನು ಬರುತ್ತೀಯೇನು ? |
| त्वं कुत्र उपविशासि ? | - ನೀನು ಎಲ್ಲಿ ಕುಳಿತಿರುತ್ತೀಯೆ ? |
| अहं तत्र उपविशामि । | - ನಾನು ಅಲ್ಲಿ ಕುಳಿತಿರುತ್ತೇನೆ. |
| स गच्छति किम् ? | - ಅವನು ಹೋಗುತ್ತಾನೇನು ? |
| स न गच्छति, न तिष्टति | - ಅವನು ಹೋಗುವದಿಲ್ಲ, ನಿಂತಿರುವದಿಲ್ಲ. |
| वानरः किं करोति ? | - ಕೋತಿ ಏನು ಮಾಡುತದೆ ? |
| स फलं खादति । | - ಅದು ಹಣ್ಣನ್ನು ತಿನ್ನುತ್ತದೆ. |

ವಾಕ್ಯದ ಕೊನೆಯಲ್ಲಿಯೂ, ಸ್ವರದ ಹಿಂದೆಯೂ **ಮ**ಕಾರವು ಹಾಗೆಯೇ ಇರುತ್ತದೆ ; ವ್ಯಂಜನದ ಹಿಂದೆ ಅದು ಅನುಸ್ವಾರವಾಗುತ್ತದೆ. ವ್ಯಂಜನದ ಹಿಂದುಗಡೆ ಇರುವ 'ಸಃ' ಎಂಬುದರ ವಿಸರ್ಗವು ಲೋಪವಾಗುತ್ತದೆ. (ಸಃ - ಅವನು ಅಥವಾ ಅದು).

### ಅಭ್ಯಾಸ ೪

**ಕನ್ನಡಿಸಿರಿ :** **१.**अत्र किं करोषि ? **२** अहं भारतं पठामि । **३.** स किं करोति? **४.** सूर्यं नमति । **५.** सीता रामं स्मरति किम् ? **६.** देवं स्मरसि किम् ? **७.** फलं कुत्र पतति (ಬೀಳುತ್ತದೆ) ? **८.** वानरः किं खादति ?

**ಸಂಸ್ಕೃತಕ್ಕೆ ತಿರುಗಿಸಿರಿ :**[1] ೧. ನೀನು ಎಲ್ಲಿ ಕುಳಿತಿರುತ್ತೀಯೆ? **೨.** ಅವಳು ಅಲ್ಲಿ ಏನು ಮಾಡುತ್ತಾಳೆ **೩.** ನಾನು ಇಲ್ಲಿ ಕುಳಿತಿರುತ್ತೇನೆ. **೪** ಅವಳು ಮಂತ್ರವನ್ನು ಜಪಿಸುತ್ತಿರುತ್ತಾಳೆ. **೫** ನೀನು ಹಣ್ಣನ್ನು ತಿನ್ನುವದಿಲ್ಲ. **೬** ನಾನು ಹೋಗುತ್ತೇನೆ, ನೀನು ಬರುತೀಯೇನು?

1. ಎಂಟನೆಯ ಅಭ್ಯಾಸದಲ್ಲಿರುವ ವಾಕ್ಯಗಳಿಂದ ಉತ್ತರವನ್ನು ಊಹಿಸಿಕೊಳ್ಳಬಹುದು.

## ಐದನೆಯ ಪಾಠ

ಈ ವಾಕ್ಯಗಳಲ್ಲಿ **अपि**- ಊ, **इव**- ಅಂತೆ, **एव**- ಏ ಎಂಬ ಅವ್ಯಯಗಳನ್ನು ಹಿಂದಿನ ಮಾತಿಗೆ ಸೇರಿಸಿರುವ ಬಗೆಯನ್ನು ಲಕ್ಷ್ಯದಲ್ಲಿಡಿರಿ :

| | |
|---|---|
| रामः सूर्यं नमति । | -ರಾಮನು ಸೂರ್ಯನನ್ನು ನಮಸ್ಕರಿಸುತ್ತಾನೆ. |
| त्वमपि (त्वम् अपि) सूर्यं नमसि किम् ? | - ನೀನೂ ಸೂರ್ಯನನ್ನು ನಮಸ್ಕರಿಸುತ್ತೀಯೇನು ? |
| रामः सत्यमेव (सत्यम् एव) वदति । | - ರಾಮನು ಸತ್ಯವನ್ನೇ ಹೇಳುತ್ತಾನೆ. |
| त्वमपि राम इव (रामः इव) सत्यं वदसि किम् ? | -ನೀನೂ ರಾಮನಂತೆ ಸತ್ಯವನ್ನೇ ಹೇಳುತ್ತೀಯೇನು ? |
| सा वार्तापत्रं पठति किम् ? | -ಅವಳು ವಾರ್ತಾಪತ್ರವನ್ನು ಓದುತ್ತಾಳೇನು? |
| सा किमपि (किम् अपि) नैव (न एव) पठति । | -ಅವಳು ಏನನ್ನೂ ಓದುವದೇ ಇಲ್ಲ. |

ಸಂಸ್ಕೃತವಾಕ್ಯದಲ್ಲಿ ಎರಡು ಪದಗಳು ಒಂದರ ಬಳಿ ಒಂದು ಇರುವಾಗ ಮೊದಲನೆಯ ಪದದ ಕೊನೆಯ ವರ್ಣವೂ ಎರಡನೆಯ ಪದದ ಮೊದಲನೆಯ ವರ್ಣವೂ ಒಂದಾನೊಂದು ನಿಯಮದಿಂದ ಸೇರುತ್ತವೆ. ಇದಕ್ಕೆ **'ಸಂಧಿ'** ಎಂದು ಹೆಸರು. ಈ ಪುಸ್ತಕದಲ್ಲಿ ಮೇಲೆ ಕೊಟ್ಟಿರುವ ಅವ್ಯಯಗಳನ್ನು ಸಂಧಿ ಮಾಡಿಯೇ ಬರೆಯುವೆವು. ಆದ್ದರಿಂದ ಇವುಗಳನ್ನು ಲಕ್ಷ್ಯದಲ್ಲಿಡಬೇಕು.

### ಅಭ್ಯಾಸ ೫

**ಕನ್ನಡಿಸಿರಿ :** **१.** परमेश्वरः पूज्यः । **२.** त्वं परमेश्वरं पूजयसि किम् ? **३.** त्वमपि फलं खादसि किम् ? **४.** स तत्र किं करोति ? **५.** स राम इव सत्यं वदति । **६.** त्वं किं करोषि ? **७.** देवं नमामि । **८.** अहं नारायणं भजामि, आचार्यं स्मरामि, इतिहासं पठामि । **९.** अहमपि त्वमिव करोमि । **१०.** त्वं किमपि नैव पठसि किम् ?

**ಸಂಸ್ಕೃತಕ್ಕೆ ತಿರುಗಿಸಿರಿ :**[1] ೧. ಲಕ್ಷ್ಮಣನು ರಾಮನಂತೆ ಸೂರ್ಯನನ್ನು ನಮಸ್ಕರಿಸುತ್ತಾನೆ. **೨.** ರಾಮನು ದಶರಥನನ್ನು ನಮಸ್ಕರಿಸುತ್ತಾನೆ. **೩.** ಲಕ್ಷ್ಮಣನು ರಾಮನನ್ನೇ ಅನುಸರಿಸುತ್ತಾನೆ (अनुसरति). **೪.** ಅವನು ಭಾರತವನ್ನು ಓದುತ್ತಾನೆ; ರಾಮಾಯಣವನ್ನೂ ಓದುತ್ತಾನೆ. **೫.** ನಾನು ಇಲ್ಲಿ ನಿಲ್ಲುತ್ತೇನೆ, ನೀನು ಇಲ್ಲಿಯೇ ನಿಲ್ಲುತ್ತೀಯೇನು ? **೬.** ಸೀತೆಯು ಯಾವಾಗಲೂ ರಾಮನನ್ನೇ ಸ್ಮರಿಸುತ್ತಾಳೆ. **೭.** ಕೋತಿಯೇ ಹಣ್ಣನ್ನು ತಿನ್ನುತ್ತದೆ.

1. ಸಂಸ್ಕೃತವಾಕ್ಯಗಳು ೯ನೆಯ ಅಭ್ಯಾಸದಲ್ಲಿವೆ ; ಉತ್ತರವನ್ನು ಬರೆದ ಮೇಲೆ ನೋಡಿ.

## ಆರನೆಯ ಪಾಠ

| | |
|---|---|
| ಗೋಪಾಲನೆ ಇಲ್ಲಿ ಬಾ. | - गोपाल अत्र आगच्छ। |
| ಅಲ್ಲಿ ಏನು ಮಾಡುತ್ತೀಯಪ್ಪ? | - तत्र किं करोषि भोः ? |
| ಎಲೈ ಬ್ರಾಹ್ಮಣನೆ, ಇಲ್ಲಿ ಕುಳಿತುಕೊ. | - भो ब्राह्मण, अत्र उपविश। |
| ಎಲೈ ಹುಡುಗನೆ, ನಿಜವನ್ನು ನುಡಿ, ಧರ್ಮವನ್ನು ಮಾಡು. | - हे बाल, सत्यं वद, धर्मं चर। |
| ಎಲಾ, ಏಕೆ ಸುಳ್ಳನ್ನು ಹೇಳುತ್ತೀಯೆ? | -रे, किम्[1] अनृतं वदसि ? |
| ಎಲೌ ಸೀತೆಯೆ, ರಾಮನೆಲ್ಲಿ? | - हे सीते, रामः कुत्र ? |

ಒಬ್ಬರನ್ನು ಕರೆಯುವದಕ್ಕೆ **ಹೇ, ಭೋಃ, ರೇ**- ಎಂಬ ಅವ್ಯಯಗಳನ್ನು ಬಳಸುವದುಂಟು. **ಭೋಃ** ಎಂಬುದು ಗೌರವವನ್ನು ಸೂಚಿಸುತ್ತದೆ ; **ರೇ** ಎಂಬುದು ನಮಗಿಂತ ಕಡಿಮೆಯ ಅಂತಸ್ತಿನವರನ್ನು ಸಂಬೋಧಿಸುವಾಗ ಉಪಯೋಗಿಸತಕ್ಕ ಮಾತು; **ಹೇ** ಎಂಬುದನ್ನು ಎಲ್ಲರಿಗೂ ಸಾಮಾನ್ಯವಾಗಿ ಉಪಯೋಗಿಸಬಹುದು. ಅಕಾರಾಂತ ಶಬ್ದಗಳಿಗೆ ಸಂಬೋಧನಾವಿಭಕ್ತಿಗೆ ಯಾವ ಪ್ರಯತ್ನವೂ ಸೇರಿರುವದಿಲ್ಲ.

### ಅಭ್ಯಾಸ ೬

**ಕನ್ನಡಿಸಿರಿ :** **१.** रे मूढ, गोविन्दं भज। **२.** रे रे दुष्ट, तत्रैव तिष्ठ। **३.** रामायणं पठ, रामं भज। **४.** अहं सरस्वतीं पूजयामि। **५.** रावणः किं करोति ? अनृतं वदति, पापं करोति। **६.** त्वं किं करोषि भोः ? **७.** ब्राह्मणःपादं प्रक्षालयति। **८.** रामः सत्यं वदति, धर्मं चरति। **९.** वानर, फलं खाद। **१०.** रामः किं करोति, लक्ष्मणः किं करोति ?

**ಸಂಸ್ಕೃತಕ್ಕೆ ತಿರುಗಿಸಿರಿ :**[2] ೧. ಎಲೈ ಮರವೆ, ಹಣ್ಣು ಎಲ್ಲಿ? ೨. ಗೋವಿಂದ ಎಲ್ಲಿ ಕುಳಿತಿದೀಯ ? **೩.** ನಾನು ಹೋಗುವದೇ ಇಲ್ಲ ; ಎಲಾ ದುಷ್ಟ, ಏನು ಮಾಡುತ್ತೀಯೆ? **೪.** ನನ್ನಂತೆ ನೀನೂ ರಾಮಮಂತ್ರವನ್ನು ಜಪಿಸು. **೫.** ಅವನು ಏನನ್ನೂ ಓದುವದಿಲ್ಲವೇನು ? **೬.** ಆಚಾರ್ಯನನ್ನು ಪೂಜಿಸು, ನಾರಾಯಣನನ್ನು ಸ್ಮರಿಸು.

1. ಕಿಮ್ ಎಂಬುದಕ್ಕೆ ಏನು, ಏನನ್ನು, ಏತಕ್ಕೆ - ಎಂಬ ಮೂರು ಅರ್ಥಗಳಿವೆ.
2. ೧೦ನೆಯ ಅಭ್ಯಾಸದಲ್ಲಿರುವ ಸಂಸ್ಕೃತ ವಾಕ್ಯಗಳಿಂದ ಉತ್ತರವನ್ನು ಊಹಿಸಬಹುದು.

## ಏಳನೆಯ ಪಾಠ

| | |
|---|---|
| ಅಲ್ಲಿ ಏನೇನು ಇದೆ? | - तत्र किं किम् अस्ति ? |
| ನಾನು ಇದೇನೆ, ನೀನು ಇದೀಯೆ. | - अहम् अस्मि, त्वं असि । |
| ಸೀತೆ ಎಲ್ಲಿ ಇದಾಳೆ? | - सीता कुत्र अस्ति ? |
| ಅವಳು ಈಗ ಇಲ್ಲಿ ಇದಾಳೆ. | - सा इदानीम् अत्र अस्ति । |
| ಇಂದು ಆದಿತ್ಯವಾರ. | - अद्य भानुवासरः । |
| ಸೋಮವಾರ ಯಾವಾಗ ಆಗುತದೆ? | - इन्दुवासरः कदा भवति ? |
| ಈಶ್ವರನು ಯಾವಾಗಲೂ ಎಲ್ಲೆಲ್ಲಿಯೂ ಇರುತ್ತಾನೆ. | -ईश्वरः सदा सर्वत्र भवति। |
| ನಾಳೆ ಶನಿವಾರ, ನಿನ್ನೆ ಗುರುವಾರ. | -श्वः स्थिरवासरः ह्यः गुरुवासरः । |
| ಆಗ ನಾನೂ ರಾಮನನ್ನು ಸ್ಮರಿಸುತ್ತೇನೆ. | -तदा अहमपि रामं स्मरामि । |

ವಾರಗಳ ಹೆಸರುಗಳನ್ನು ಇಲ್ಲಿ ಬರೆದಿದೆ ; ಗಟ್ಟಿ ಮಾಡಿಕೊಳ್ಳಿರಿ :

**ಭಾನುವಾಸರಃ, ಇನ್ದುವಾಸರಃ, ಕುಜವಾಸರಃ, ಸೌಮ್ಯವಾಸರಃ, ಗುರುವಾಸರಃ, ಭೃಗುವಾಸರಃ, ಸ್ಥಿರವಾಸರಃ ।**

### ಅಭ್ಯಾಸ ೭

**ಕನ್ನಡಿಸಿರಿ :** **१.** अद्य रामनवमी ; रामायणं पठ । **२.** भगवद्गीतामपि पठसि किम् ? **३.** श्व किं पठसि ? **४.** त्वं कदा क्षीरं (ಹಾಲು) पिबसि ? **५.** अद्य जलमेव पिबामि, श्वः क्षीरं पिबामि । **६.** ह्यः स्थिरवासरः किम् ? **७.** इदानीं त्वं किं करोषि? **८.** अहं सदा शिवमन्त्रं जपामि । **९.** अहं पुण्यं करोमि । **१०.** त्वम् अनृतं वदसि किम् ? **११.** स किं वदति ? **१२.** सा फलं खादति किम् ?

**ಸಂಸ್ಕೃತಕ್ಕೆ ತಿರುಗಿಸಿ :**[1] ೧. ಇಂದು ಸೋಮವಾರ, ಶಿವನನ್ನು ಪೂಜಿಸುತ್ತೇನೆ. ೨. ನೀನು ಪಂಡಿತನಂತೆ ಓದುತ್ತೀಯೆ. ೩. ಈಗ ಎಲ್ಲೆಲ್ಲಿಯೂ ಬಿಸಿಲು (आतपः). ೪ ಆಕೆಯು ಯಾವಾಗಲೂ ನಗುತ್ತಾಳೆ (हसति) ೫ ರಾಮನು ಯಾವಾಗ ಬರುತ್ತಾನೆ ? ನೀನು ಯಾವಾಗ ಬರುತ್ತೀಯೆ ?

1. ೧೨ನೆಯ ಅಭ್ಯಾಸದಲ್ಲಿರುವ ಸಂಸ್ಕೃತ ವಾಕ್ಯಗಳಲ್ಲಿ ಉತ್ತರವು ಸಿಕ್ಕುತ್ತದೆ.

## ಎಂಟನೆಯ ಪಾಠ

ಇಲ್ಲಿ ಯಾರಪ್ಪ? - कोऽत्र (कः अत्र) भोः ?

ಅಯ್ಯ, ಈ(ಇಗೊ)ನಾನು ಇದೇನೆ. - आर्य, अयमहमस्मि (अयम् अहम् अस्मि)।

ಆಳು ಎಲ್ಲಿ ಇರುತ್ತಾನೆ? - सेवकः कुत्रास्ति (कुत्र अस्ति)।

ಇಲ್ಲಿಯೇ ಇರುತ್ತಾನೆ. - अत्रैवास्ति (अत्रैव अस्ति)।

ಅಡಿಗೆಯವನು ಎಲ್ಲಿ? - पाचकः कुत्र ?

ಎಲಾ, ಮನೆಯಲ್ಲಿ ಹಾಲು ಇದೆಯೊ ಇಲ್ಲವೊ? - रे, किं क्षीरमस्ति गृहे, किं वा नास्ति ?

ಏನಾಗುತ್ತದೆ? - किं भवति ?

ಆಹಾ! ಇವನು ಅಡಿಗೆಯವನಲ್ಲ.[1] - अहो! अयं (एषः) न पाचकः।

ವಿಶೇಷ :- (೧) 'ಕೋಽತ್ರ', 'ಕುತ್ರಾಸ್ತಿ', 'ಅತ್ರೈವಾಸ್ತಿ', 'ನಾಸ್ತಿ'- ಪದಗಳನ್ನು ಕೂಡಿಸಿರುವ ಬಗೆಯನ್ನು ಲಕ್ಷಿಸಿರಿ. (೨) 'ಅಯಮ್', 'ಏಷಃ'- ಇವೆರಡಕ್ಕೂ 'ಇವನು' ಎಂದೇ ಅರ್ಥ ; **'ಏಷಃ'** ಎಂಬುದನ್ನು ತೀರ ಹತ್ತಿರವಿರುವದಕ್ಕೆ ಬಳಸುತ್ತಾರೆ. ಈ ಪುಸ್ತಕದಲ್ಲಿ ಈ ಶಬ್ದವನ್ನೇ ಹೆಚ್ಚು ಬಳಸಿರುತ್ತದೆ.

### ಅಭ್ಯಾಸ ೮

**ಕನ್ನಡಿಸಿರಿ :** - अद्य त्वं भोजनं करोषि किम् ? **२.** तत्र कोऽस्ति (कः अस्ति)? **३.** त्वं कुत्र उपविशसि ? **४.** सा तत्र किं करोति ? **५.** सेवकः कदा आगच्छति ? ६. फलं किं पतति, किं वा न पतति ? **७.** त्वं फलं न खादसि। **८.** अहो! इदं न फलम्। **९.** अहम् अद्य गच्छामि, त्वमपि आगच्छसि किम् ? **१०.** अहम् अत्र उपविशामि। **११.** सा मन्त्रं जपति।

**ಸಂಸ್ಕೃತಕ್ಕೆ ತಿರುಗಿಸಿ :**[2] ೧ ಆಗ ನೀನು ಎಲ್ಲಿ ಕುಳಿತಿರುತ್ತೀಯೆ? **೨.** ಈಗ ಇಲ್ಲಿ ರಾಮಾಯಣವನ್ನು ಓದುತ್ತೇನೆ. **೩.** ನಾನು ಇಲ್ಲಿಯೇ ನಿಂತಿರುತ್ತೇನೆ, ನೀನು ಹೋಗು. **೪.** ಅಸುರನು ಯಾವಾಗಲೂ ಸುಳ್ಳನ್ನೇ ಹೇಳುತ್ತಾನೆ. **೫.** ಅಲ್ಲಿ ಎಲ್ಲೆಲ್ಲಿಯೂ ನೀರೇ. **೬.** ಇದು ಕೋತಿಯಲ್ಲ. **೭.** ಇವನು ರಾಮನಲ್ಲ.

1. 'ನ' ಇಲ್ಲ, ಅಲ್ಲ; ಕ್ರಿಯಾಪದಕ್ಕೆ ಸೇರಿದಾಗ 'ಇಲ್ಲ' ಎಂದೂ, ನಾಮಪದಕ್ಕೆ ಸೇರಿದಾಗ 'ಅಲ್ಲ' ಎಂದೂ ಕನ್ನಡಿಸಿಕೊಳ್ಳಬೇಕು.

2. ಉತ್ತರವನ್ನು ಬರೆದ ಮೇಲೆ ೧೭ನೆಯ ಪಾಠವನ್ನು ನೋಡಿರಿ. ಅಲ್ಲಿ ಸಂಸ್ಕೃತವಾಕ್ಯಗಳು ಸಿಕ್ಕುತ್ತವೆ.

## ಒಂಬತ್ತನೆಯ ಪಾಠ

| | |
|---|---|
| ಇದು ಯಾರ ಮನೆ ? | - इदं (एतत्) कस्य गृहम् ? |
| ಇದು ರಾಮನ ಮನೆ. | - इदं (एतत्) रामस्य गृहम्। |
| ರಾಮನು ಯಾರ ಮಗನು ? | - रामः कस्य पुत्रः ? |
| ನಿನ್ನ ಪುಸ್ತವು ಎಲ್ಲಿದೆ? | - तव पुस्तकं कुत्रास्ति ? |
| ಇದು ನಿನ್ನ ಪುಸ್ತಕವೊ, ಅಥವಾ ಅನದೋ? | - किं इदं (एतत्) तव पुस्तकम्, किं वा तस्य ? |
| ಬೇಗನೆ ಪುಸ್ತಕವನ್ನು ತೆರೆ. | - झटिति पुस्तकम् उद्घाटय। |
| ಮನೆಯಲ್ಲಿ ಏನೇನಿದೆ? | - गृहे किं किम् अस्ति ? |
| ಇವಳು ಯಾರು ? ಅವಳು ಸೀತೆ. | - इयं (एषा) का ? सा सीता। |
| ಸೀತೆ ಯಾರ ಮಗಳು? | - सीता कस्य पुत्री ? |

ಹತ್ತಿರವಿರುವ ವಸ್ತುವನ್ನು ಅಥವಾ ಜರನ್ನು ತಿಳಿಸುವದಕ್ಕೆ **'ಇದಮ್', 'ಏತತ್'** - ಎರಡು ಶಬ್ದಗಳನ್ನು ಬಳಸುತ್ತಾರೆ. **'ಏತತ್'** ಎಂಬುದು **'ಏಷ'** ಎಂಬುದರ ನಪುಂಸಕಲಿಂಗದ ರೂಪ; **'ಏಷಾ'** ಎಂಬುದು ಸ್ತ್ರೀಲಿಂಗರೂಪ.

### ಅಭ್ಯಾಸ ೯

**ಕನ್ನಡಿಸಿರಿ :** **१.** कृष्णः कस्य पुत्रः ? **२.** एतत् फलं कस्य वृक्षस्य ? **३.** एतस्य गृहं कुत्रास्ति ? **४.** गोविन्द, शीघ्रम् आगच्छ। **५.** हे वृक्ष, तव फलं कुत्र ? **६.** किमेष (=किम् एषः) लक्ष्मणः, किं वा रामः ? **७.** लक्ष्मणः राम इव सूर्यं नमति। **८.** लक्ष्मणः राममेव अनुसरति। **९.** सः भारतं पठति, रामायणमपि पठति। **१०.** त्वं कुत्र तिष्ठसि ? **११.** अहम् अत्र तिष्ठामि, त्वमपि अत्रैव तिष्ठसि किम् ? **१२.** सीता रामस्य पत्नी। **१३.** सा सदा राममेव स्मरति। **१४.** वृक्षे फलम् अस्ति किम् ? **१५.** रामः दशरथं नमति ? **१६.** वानर एव फलं खादति।

**ಸಂಸ್ಕೃತಕ್ಕೆ ತಿರುಗಿಸಿ :**[1] ೧. ನೀನು ಯಾರ ಮಗನು ? ೨. ನಿಮ್ಮ[2] ಮನೆ ಎಲ್ಲಿದೆ ? ೩. ಈ ಪುಸ್ತಕವು ಯಾರದು ? ೪. ಇವನು ಯಾರ ಮಗನು ? ೫. ನಾನು ಈ ಪುಸ್ತಕವನ್ನು ಓದುವದೇ ಇಲ್ಲ.

1. ಉತ್ತರವನ್ನು ಬರೆದ ಮೇಲೆ ೧೭ನೆಯ ಅಭ್ಯಾಸವನ್ನು ನೋಡಿ.
2. ಇಂಥ ಸಂದರ್ಭದಲ್ಲಿ **ನಿನ್ನ** ಎಂಬರ್ಥದಲ್ಲಿಯೇ **ನಿಮ್ಮ** ಎಂಬ ಮಾತನ್ನು ಬಳಸುವರು.

## ಹತ್ತನೆಯ ಪಾಠ

| | |
|---|---|
| ನೀನು ಏತರಿಂದ ಬರೆಯುತ್ತೀಯೆ? | -त्वं केन लिखसि ? |
| ಬಾವಿಯನ್ನು ಏತರಿಂದ ಅಗೆಯುತ್ತೀಯೆ? | - कूपं केन खनसि ? |
| ನಮ್ಮಜ್ಜನು ಈಗಲೂ ಕಡ್ಡಿಯಿಂದಲೇ ಬರೆಯುತ್ತಿದಾನೆ. | - मम पितामहः अद्यापि कलमेनैव लिखति |
| ಕುರುಡನಿಗೆ ದೀಪದಿಂದ ಏನು ಪ್ರಯೋಜನ ? | -अन्धस्य दीपेन किं प्रयोजनम् ? |
| ರಾಮನು ಯಾರೊಡನೆ ಕಾಡನ್ನು ಪ್ರವೇಶಿಸುತ್ತಾನೆ? | - रामः केन सह वनं प्रविशति ? |
| ನಿನ್ನ ಮಗನು ಕೃಷ್ಣನೊಡನೆ ಅಂಗಳದಲ್ಲಿ ಆಡುತ್ತಿದ್ದಾನೆ. | -तव पुत्रः कृष्णेन सह अङ्गणे क्रीडति । |
| ಪುಣ್ಯದಿಂದ ಸ್ವರ್ಗವನ್ನು ಕಾಣುತ್ತಾನೆ. | -पुण्येन स्वर्गं पश्यति । |
| ಪಾಪದಿಂದ ನರಕದಲ್ಲಿ ಬೀಳುತ್ತಾನೆ. | - पापेन नरके पतति । |
| ಸುಖವಾಗುತ್ತದೆಯೊ, ದುಃಖವಾಗುತ್ತದೆಯೋ? | - किं सुखं भवति, किं वा दुःखं भवति ? |
| ಕುದುರೆಯಿಂದ(ಕುದುರೆಯ ಮೇಲೆ) ಬರುತ್ತಾನೋ ಗಾಡಿಯ ಮೇಲೆ ಬರುತ್ತಾನೋ ? | - अश्वेन आगच्छति वा, रथेन आगच्छति वा ? |

**ವಿಶೇಷ**- (೧) **'ಸಹ'** ಎಂಬ ಮಾತಿನ ಜೊತೆಗೆ ತೃತೀಯಾವಿಭಕ್ತಿಯೇ ಇರಬೇಕು. (೨) **'ಆಗಚ್ಛತಿ'** - ಬರುತ್ತಾನೆ, ಬರುತ್ತಿದಾನೆ ; **'ಹಸತಿ'** - ನಗುತ್ತಾನೆ, ನಗುತ್ತಿದಾನೆ, ಹೀಗೆ ಎಲ್ಲಾ ವರ್ತಮಾನ ಕ್ರಿಯಾಪದಗಳನ್ನೂ ಎರಡು ಬಗೆಯಲ್ಲಿ ಕನ್ನಡಿಸಿಕೊಳ್ಳಬಹುದು.

### ಅಭ್ಯಾಸ ೧೦

**ಕನ್ನಡಿಸಿರಿ : १.** स ईदानीं किं पुस्तकं पठति, किं वा क्रीडति ? **२.** सायंकाले क्रीडति, प्रातःकाले पठति । **३.** गोविन्द, कुत्र उपविशसि ? **४.** अहं तेन सह नैव गच्छामि ; रे दुष्ट, किं करोषि ? **५.** गृहेण किम् धनेन किम् ? **६.** अहमिव त्वमपि राममन्त्रं जप, आचार्यं पूजय, नारायणं स्मर । **७.** तेन सुखं भवति किम् ? **८.** स किमपि न पठति किम् ? **९.** हे वृक्ष, फलं कुत्र ?

**ಸಂಸ್ಕೃತಕ್ಕೆ ತಿರುಗಿಸಿ : ೧.** ಲಕ್ಷ್ಮಣನು ರಾಮನೊಡನೆ ಭೋಜನವನ್ನು ಮಾಡುತ್ತಿದಾನೆ ? **೨.** ಅವನು ಈಗಲೂ ಓದುತ್ತಿದಾನೇನು ? **೩.** ಅವನು ಆಚಾರ್ಯನೊಡನೆ ಏನು ಮಾಡುತ್ತಿದಾನೆ ? **೪.** ಇಲ್ಲಿಗೆ ಬರುತ್ತೀಯೋ, ಇಲ್ಲವೊ? **೫.** ಅದರಿಂದ ಏನಾಗುತದೆ?

## ಹನ್ನೊಂದನೆಯ ಪಾಠ

ಅವನು ವಸಿಷ್ಠನು. -स वसिष्ठः।
ವಸಿಷ್ಠನು ನಮ್ಮ ಆಚಾರ್ಯನು - वसिष्ठः अस्माकम् आचार्यः।
ನಾವು ಅವನ ಶಿಷ್ಯರು. -वयं तस्य शिष्याः।
ಬ್ರಾಹ್ಮಣರು ಪೂಜ್ಯರು -ब्राह्मणाः पूज्याः।
ಆಚಾರ್ಯನು (ಶಿಷ್ಯರನ್ನು ಕುರಿತು) ಶಿಷ್ಯರಿಗೆ ಹೇಳುತ್ತಾನೆ. - आचार्यः शिष्यान् वदति।
ನೀವು (ನನ್ನನ್ನು ಕುರಿತು) ನನಗೆ ಏನು ಹೇಳುತ್ತೀರಿ? - यूयं मां किं वदथ ?
ಅವರು ರಾಮನನ್ನು ನಮಸ್ಕರಿಸುತ್ತಾರೆ. - ते रामं नमन्ति।
ನಾನು ನಿನ್ನನ್ನು ಕೇಳುತ್ತೇನೆ. - अहं त्वा पृच्छामि।
ನಾವು ಅವನನ್ನು ಭಜಿಸುತ್ತೇವೆ. - वयं तं भजामः।
ಇವು ಯಾವ ಮರದ ಹಣ್ಣುಗಳು. - एते कस्य वृक्षस्य फलानि।
ರಾಕ್ಷಸರು (ಆಶ್ರಮವನ್ನು ಕುರಿತು) ಆಶ್ರಮಕ್ಕೆ ಹೋಗುತ್ತಾರೆ.- राक्षसाः आश्रमं गच्छन्ति।

**ವಿಶೇಷ :** 'ಹೇಳು, 'ಹೋಗು' - ಎಂಬರ್ಥದ ಕ್ರಿಯಾಪದಗಳಿಗೆ ಸಂಸ್ಕೃತದಲ್ಲಿ ದ್ವಿತೀಯಾವಿಭಕ್ತಿ ಬರುತ್ತದೆ ; ಕನ್ನಡದಂತೆ ಚತುರ್ಥಿ ಬರುವದಿಲ್ಲ.

### ಅಭ್ಯಾಸ ೧೧

**ಕನ್ನಡಿಸಿರಿ :** अहं तत्र गच्छामि। वयं तत्र गच्छामः। त्वं गृहं गच्छसि। यूयं गृहं गच्छथ। स वनं गच्छति। ते वनं गच्छन्ति। सः क्षीरं पिबति। ते क्षीरं पिबन्ति किम्? त्वं किं क्षीरं पिबसि, किं वा जलं पिबसि ? अहं जलमेव पिबामि। वयमपि जलमेव पिबामः।

**ಇಲ್ಲಿರುವ ಬಹುವಚನಗಳನ್ನು ಏಕವನಚದಲ್ಲಿ ಬರೆದು ವಾಕ್ಯಗಳನ್ನು ಮಾಡಿರಿ:** **१.** वानराः फलानि खादन्ति। **२.** ते वृक्षं पश्यन्ति। **३.** यूयं मां किं पृच्छथ? **४.** शिष्याः कुत्र तिष्ठन्ति ? **५.** वयम् अत्रैव उपविशामः। **६.** सर्पाः बिलं प्रविशन्ति। **७.** वयं गृहं गच्छामः। **८.** यूयं तत्र किं पश्यथ ?

**ಇವುಗಳ ಅರ್ಥವನ್ನು ಸಂಸ್ಕೃತದಲ್ಲಿ ಬರೆಯಿರಿ :** ೧. ನಾವು ನಾರಾಯಣನ ಭಕ್ತರು. ೨ ನೀವು ರಾಮನನ್ನು ನಮಸ್ಕರಿಸುತ್ತೀರೇನು ? ೩ ನಾವು ನಿನ್ನನ್ನು ಕೇಳುತ್ತೇವೆ. ೪ ಅವನನ್ನು ಏನು ಕೇಳುತ್ತಿದ್ದೀರಿ ? ೫ ಅವರು ಅಂಗಳದಲ್ಲಿ ಆಡುತ್ತಿರುತ್ತಾರೆ. ೬. ಮನೆಗೆ ಹೋಗುತ್ತೇನೆ.

## ಹನ್ನೆರಡನೆಯ ಪಾಠ

ನೀವು ಯಾರು? - के यूयम् ?

ನಾವು ದಶರಥನ ಮಕ್ಕಳು. - वयं दशरथस्य पुत्राः ।

ನೀವು ಯಾವ ದೇವತೆಗಳನ್ನು ಪೂಜಿಸುತ್ತೀರಿ? - यूयं कान् देवान् पूजयथ ?

ನಾವು ಸೂರ್ಯನನ್ನೇ ನಮಸ್ಕರಿಸುತ್ತೇವೆ, ಭಜಿಸುತ್ತೇವೆ. - वयं सूर्यमेव नमामः, भजामः ।

ಹುಡುಗರು ಏನು ಮಾಡುತ್ತಿದ್ದಾರೆ? -बालकाः किं कुर्वन्ति ?

ಅವರು ಈಗ ಅಂಗಳದಲ್ಲಿ ಆಡುತ್ತಿದ್ದಾರೆ. -ते इदानीम् अङ्गणे क्रीडन्ति।

ವಸಿಷ್ಠನು ಯಾರು? ठः कः ?

ಅವನು ನಮ್ಮ ಆಚಾರ್ಯನು. -अस्माकम् आचार्यः सः ।

### ಅಭ್ಯಾಸ ೧೨

**ಕನ್ನಡಿಸಿರಿ :** **१.** गृहे के के सन्ति ? **२.** वसिष्ठः शिष्यान् किं पृच्छति ?

**३.** अस्माकं पुस्तकानि कुत्र ? **४.** अद्य इन्दुवासरः, शिवं भजामि ।

**५.** यूयं स्थिरवासरे रामं भजथ किम् ? **६.** त्वं पण्डित इव पठसि ।

**७.** ते देवालयं गच्छन्ति किम् ? **८.** इदानीं सर्वत्रापि आतपः ।

**९.** सा सदा हसति । **१०.** रामः कदा आगच्छति ?

**११.** त्वं कदा आगच्छसि ?

**ಸಂಸ್ಕೃತಕ್ಕೆ ತಿರುಗಿಸಿ :** ೧. ಕಾಡಿನಲ್ಲಿ ಯಾವ ಮರಗಳನ್ನು ಕಾಣುತ್ತೀರಿ ?

೨. ಅಲ್ಲಿ ಅವರು ನಾಳೆ ಏನು ಮಾಡುತ್ತಾರೆ ?

೩. ಅವರು ಓದುವದಿಲ್ಲ, ಬರೆಯುವದಿಲ್ಲ.

೪. ಅವರು ಭಾವಿಯನ್ನು ಏತರಿಂದ ಅಗೆದು ತೋಡುತ್ತಾರೆ ?

೫. ನಾನು ಕುರುಡನು, ಸೂರ್ಯನಿಂದ ಏನು ? ಚಂದ್ರನಿಂದ ಏನು ?

## ಹದಿಮೂರನೆಯ ಪಾಠ

ರಾಮನಿಗೆ ನಮಸ್ಕಾರ. - रामाय नमः

ಮತ್ತೊಬ್ಬರಿಗೆ ಮಾಡುವ ಉಪಕಾರವು ಪುಣ್ಯಕ್ಕೆ, ಮತ್ತೊಬ್ಬರನ್ನು ಪೀಡಿಸುವದು ಪಾಪಕ್ಕೆ. - परोपकारः पुण्याय, पापाय परपीडनम् ।

ಈ ಹಣ್ಣನ್ನು ಯಾರಿಗೆ ಕೊಡುತ್ತೀಯೆ? -एतत् फलं कस्मै यच्छसि ?

ರಾಮನಿಗೆ ಅಥವಾ ಕೃಷ್ಣನಿಗೆ. -रामाय वा कृष्णाय वा ।

ಮರದಿಂದ ಹಣ್ಣು ಬೀಳುತ್ತದೆ. - वृक्षात् फलं पतति ।

ಊರಿನಿಂದ ಯಾರು ಬರುತ್ತಾರೆ? - ग्रामात् के आगच्छन्ति ।

ಬಿಲದಿಂದ ಸರ್ಪವು ಹೊರಟುಬರುತ್ತದೆಯೇನು? -बिलात् सर्पः किं निर्गच्छति?

**ವಿಶೇಷ :-** (೧) ಯಾರಿಗೆ ಕೊಡುತ್ತೇವೆಯೋ ಅವರ ಹೆಸರು ಚತುರ್ಥೀವಿಭಕ್ತಿಯಲ್ಲಿರುತ್ತದೆ. **ನಮಃ** ಎಂಬ ಮಾತಿಗೆ ಚತುರ್ಥೀವಿಭಕ್ತಿ ಬೇಕು. (೨) ಯಾವದನ್ನು ಬಿಟ್ಟು ಅಗಲುತ್ತಾರೋ ಅದರ ಹೆಸರಿಗೆ ಪಂಚಮೀವಿಭಕ್ತಿಯು ಬರುತ್ತದೆ.

### ಅಭ್ಯಾಸ ೧೩

**ಕನ್ನಡಿಸಿರಿ :** **१.** भटः अश्वात् पतति । **२.** चोरः गृहात् निर्गच्छति । **३.** धनं ब्राह्मणाय यच्छामः । **४.** बालकाय किं यच्छथ । **५.** केशवाय नमः, नारायणाय नमः । **६.** रामः अयोध्यानगरात् वनं गच्छति । **७.** ग्रामे नास्ति देवालयः । **८.** भिक्षुकः गृहात् गृहम् अटति ।

**ಸಂಸ್ಕೃತಕ್ಕೆ ತಿರುಗಿಸಿ :** (**ಇಂದ** ಎಂಬ ಮಾತನ್ನು ತೃತೀಯಾವಿಭಕ್ತಿಯಿಂದ ಅಥವಾ ಪಂಚಮೀವಿಭಕ್ತಿಯಿಂದ ಸಂಸ್ಕೃತಕ್ಕೆ ತಿರುಗಿಸಬೇಕಾಗುತ್ತದೆ. ಇದನ್ನು ಲಕ್ಷ್ಯದಲ್ಲಿಟ್ಟಿರಿ.)

೧ ನೀವು ಕಡ್ಡಿಯಿಂದ (कलमेन) ಬರೆಯುತ್ತೀರೇನು ? ೨ ಮರದಿಂದ ಹಣ್ಣುಗಳು ಬೀಳುತ್ತವೆಯೇನು? ೩. ಹಾವು ಬಿಲದಿಂದ ಹೊರಕ್ಕೆ ಬರುತ್ತದೆ, ಇಲಿಯು ಬಿಲವನ್ನು ಹೋಗುತ್ತದೆ. ೪ ಹಾಲನ್ನು ಯಾರಿಗೆ ಕೊಡುತ್ತೀರಿ ? ೫ ನಾವು ಮನೆಯಿಂದ ಹೊರಕ್ಕೆ ಹೊರಡುತ್ತೇವೆ.

## ಹದಿನಾಲ್ಕನೆಯ ಪಾಠ

| | |
|---|---|
| बालः - ಹುಡುಗ(ನು) | फलम् - ಹಣ್ಣು |
| हे बाल - ಎಲೈ ಹುಡುಗನೆ | हे फल - ಎಲೆ ಹಣ್ಣೆ |
| बालम् - ಹುಡುಗನನ್ನು | फलम् - ಹಣ್ಣನ್ನು |
| बालेन - ಹುಡುಗನಿಂದ | फलेन - ಹಣ್ಣಿನಿಂದ |
| बालाय - ಹುಡುಗನಿಗೆ | फलाय - ಹಣ್ಣಿಗೆ |
| बालात् - ಹುಡುಗನ ಕಡೆಯಿಂದ | फलात् - ಹಣ್ಣಿನ ಕಡೆಯಿಂದ |
| बालस्य - ಹುಡುಗನ | फलस्य - ಹಣ್ಣಿನ |
| बाले - ಹುಡುಗನಲ್ಲಿ | फले - ಹಣ್ಣಿನಲ್ಲಿ |

**ವಿಶೇಷ :-** (೧) **ಸ್ವರ್ಗ, ಲೋಕ, ದೇವ, ಸೂರ್ಯ, ಚನ್ದ್ರ, ವೃಕ್ಷ, ಧರ್ಮ, ಕಾಲ** - ಮುಂತಾದ ಪುಲ್ಲಿಂಗ ಶಬ್ದಗಳೆಲ್ಲ **ಬಾಲ** ಶಬ್ದದಂತೆ. ಉದಾಹರಣೆಗೆ **ಲೋಕ** ಶಬ್ದಕ್ಕೆ ರೂಪಗಳು ಹೀಗೆ : **ಲೋಕಃ, ಹೇ ಲೋಕ, ಲೋಕಮ್, ಲೋಕೇನ, ಲೋಕಾಯ, ಲೋಕಾತ್, ಲೋಕಸ್ಯ, ಲೋಕೇ ।**

(೨) **ಫಲ, ಪುಷ್ಪ, ಪುಣ್ಯ, ಪಾಪ, ಸತ್ಯ, ಅನೃತ, ಜ್ಞಾನ** - ಮುಂತಾದ ನಪುಂಸಕ ಶಬ್ದಗಳಿಗೆಲ್ಲ **ಫಲ** ಶಬ್ದದಂತೆ ರೂಪ. ಉದಾ : **ಪುಷ್ಪಮ್** - ಹೂವು, ಹೂವನ್ನು ; **ಪುಣ್ಯಮ್** - ಪುಣ್ಯವು, ಪುಣ್ಯವನ್ನು ; **ಪಾಪಮ್** - ಪಾಪವು, ಪಾಪವನ್ನು ; **ಸತ್ಯಮ್** - ಸತ್ಯವು, ಸತ್ಯವನ್ನು ; **ಅನೃತಮ್** - ಸುಳ್ಳು, ಸುಳ್ಳನ್ನು ; **ಜ್ಞಾನಮ್** - ಜ್ಞಾನ, ಜ್ಞಾನವನ್ನು, ತೃತೀಯಾ ವಿಭಕ್ತಿಯಿಂದ ಮುಂದಕ್ಕೆ ನಪುಂಸಕಲಿಂಗಶಬ್ದಗಳಿಗೂ ಪುಲ್ಲಿಂಗಶಬ್ದಗಳಂತೆಯೇ ರೂಪಗಳಾಗುವವು.

### ಅಭ್ಯಾಸ ೧೪

**ಇಲ್ಲಿರುವ ಅಕಾರಾಂತಶಬ್ದಗಳ ಎಲ್ಲಾ ರೂಪಗಳನ್ನೂ ಮೇಲೆ ಕೊಟ್ಟಿರುವಂತೆ ಮಾಡಿಕೊಳ್ಳಿರಿ :** **१.** पुण्यं करोति । **२.** स्वर्गं पश्यति । **३.** अनृतं वदति । **४.** परमेश्वरं नमति । **५.** वार्तापत्रं पठति । **६.** वृक्षात् फलं पतति ।

**ಸಂಸ್ಕೃತದಲ್ಲಿ ಈ ವಾಕ್ಯಗಳನ್ನು ಬರೆಯಿರಿ :** ೧. ಪುಣ್ಯವು ಸ್ವರ್ಗಲೋಕಕ್ಕೆ ಆಗುತ್ತದೆ ೨ ಸ್ವರ್ಗದಿಂದ ಈ ಲೋಕವನ್ನು ಹೋಗುತ್ತಾರೆ (विशन्ति). **೩.** ಪುಣ್ಯದಿಂದ ಸ್ವರ್ಗಲೋಕಕ್ಕೆ ಹೋಗುತ್ತಾರೆ. **೪.** ಸ್ವರ್ಗದಲ್ಲಿ ದುಃಖವಿರುವದಿಲ್ಲ. **೫.** ಹಣ್ಣಿನ ಬೀಜವೆಲ್ಲಿ?

## ಹದಿನೈದನೆಯ ಪಾಠ

| | |
|---|---|
| ಬ್ರಾಹ್ಮಣನು ಪೂಜ್ಯನು. | - ब्राह्मणः पूज्यः । |
| ಪೂಜ್ಯನಾದ ವಸಿಷ್ಠನನ್ನು ನಮಸ್ಕರಿಸುತ್ತೇವೆ. | - पूज्यं वसिष्ठं नमामः । |
| ಸಿಪಾಯಿಯು ಶೂರನು. | - भटः शूरः । |
| ಶೂರನಾದ ಸಿಪಾಯಿ ಚೀನಾದೇಶವನ್ನು ಪ್ರವೇಶಿಸುತ್ತಾನೆ. | - शूरः भटः चीनं प्रविशति । |
| ಬಟ್ಟೆ ಬಿಳಿಯದು. | - अम्बरं श्वेतम् । |
| ಶ್ರಮಣನು ಬಿಳಿಯ ಬಟ್ಟೆಯನ್ನು ಉಡುತ್ತಾನೆ. | - श्वेतम् अम्बरं धारयति श्रमणः । |
| ಕರಿಯ ಗಡಿಗೆಯಿಂದ ನೀರು ಸೋರುತ್ತಿದೆ. | - नीलात् घटात् जलं स्रवति । |

ಸಂಸ್ಕೃತದಲ್ಲಿ ವಿಶೇಷ್ಯದ ಲಿಂಗವಚನವಿಭಕ್ತಿರೂಪಗಳೇ ವಿಶೇಷಣಕ್ಕೂ ಇರಬೇಕು. ಕನ್ನಡದಂತೆಯೇ ಅವು ಸಾಕ್ಷಾದ್ವಿಶೇಷಣ (Attributive)ಗಳಾಗಿರಬಹುದು. ವಿಧೇಯವಿಶೇಷಣ (Predicative)ವೂ ಆಗಿರಬಹುದು. ಉದಾಹರಣೆ :

೧. ಶೂರಃ, ಭಟಃ, ಹೇ ಶೂರ ಭಟ, ಶೂರಂ ಭಟಮ್, ಶೂರೇನ ಭಟೇನ, ಶೂರಾಯ ಭಟಾ, ಶೂರಾತ್ ಭಟಾತ್, ಶೂರಸ್ಯ ಭಟಸ್ಯ, ಶೂರೇ ಭಟೇ. ೨. ಕೋಮಲಂ ಕಮಲಮ್, ಹೇ ಕೋಮಲ ಕಮಲ, ಕೋಮಲಂ ಕಮಲಮ್, ಕೋಮಲೇನ ಕಮಲೇನ, ಕೋಮಲಾಯ ಕಮಲಾಯ, ಕೋಮಲಾತ್ ಕಮಲಾತ್, ಕೋಮಲಸ್ಯ ಕಮಲಸ್ಯ, ಕೋಮಲೇ ಕಮಲೇ.

ಒಂದನೆಯ ಉದಾಹರಣೆಯಲ್ಲಿ ಎಲ್ಲಾ ವಿಶೇಷಣಗಳಿಗೂ 'ಶೂರನಾದ' ಎಂದೇ ಅರ್ಥ ; ಎರಡನೆಯ ಉದಾಹರಣೆಯಲ್ಲಿ 'ಕೋಮಲವಾದ, ಮೃದುವಾದ' ಎಂದೇ ಅರ್ಥ.

### ಅಭ್ಯಾಸ ೧೫

ಇಲ್ಲಿರುವ ವಾಕ್ಯಗಳಲ್ಲಿ ನೇರಾದ ವಿಶೇಷಣಗಳಿಗೆ 'ಆದ' ಎಂದು **ಕನ್ನಡಿಸಬೇಕು;** ವಿಧೇಯವಿಶೇಷಣಗಳಿಗೆ 'ಆದ' ಇದು ಬೇಕಿಲ್ಲ. ಉದಾ: गृहं वि ಮನೆ ವಿಸ್ತಾರ(ವಾದದ್ದು) ; विशाले गृहे के के सन्ति ? - ವಿಸ್ತಾರವಾದ ಮನೆಯಲ್ಲಿ ಯಾರು ಯಾರು ಇದ್ದಾರೆ?

**१.** फलं मधुरम् (ಸಿಹಿ) । **२.** मधुरं फलं त्वं न खादसि किम् ? **३.** सरोवरे कोमलानि कमलानि पश्यामः । **४.** भिक्षुकः अन्धः । **५.** अन्धाय भिक्षुकाय किं यच्छामः ?

**ಸಂಸ್ಕೃತಕ್ಕೆ ತಿರುಗಿಸಿರಿ :** ೧. ನಾನು ಹುಳಿಯಾದ (आम्ल) ಹಣ್ಣನ್ನು ತಿನ್ನುವದಿಲ್ಲ. ೨.ಮಜ್ಜಿಗೆ ಹುಳಿ, ಸಿಹಿಯಲ್ಲ. ೩. ಹಣ್ಣು ಹುಳಿಯೊ, ಸಿಹಿಯೊ? ೪. ನೀರು ಬಿಸಿ (उष्णम्) ಯೇನು?

## ಹದಿನಾರನೆಯ ಪಾಠ

ಇಲ್ಲಿ ರಾಮನಿದಾನೆ. -अत्र रामोऽस्ति (रामः अस्ति)।
ನಾನು ಹುಡುಗನಿದೇನೆ. - अहं बालोऽस्मि (बालः अस्मि)।
ನೀನು ಮೂಢನಿದೀಯೆ - त्वं मूढोऽसि (मूढः असि)।
ಹೀಗೆ ಕಾಲವು ಹೋಗುತ್ತದೆ. - एवं कालो गच्छति।
ಬೆಕ್ಕು ತುಪ್ಪವನ್ನು ಕುಡಿಯುತ್ತದೆಯೆ? - मार्जारो घृतं पिबति किम् ?
ರಾಮನು ದಶರಥನ ಮಗನು. - रामो दशरथस्य पुत्रः।
ಜಿಪುಣನು ಹಣವನ್ನು ಬಿಡುವದಿಲ್ಲ. - कृपणो धनं न त्यजति।
ರಾಮನು ಹುಡುಗನು, ದಶರಥನು ಮುದುಕನು. - रामो बालः, दशरथो वृद्धः।
ಶೂರನಾದ ಭಟನು ಕತ್ತಿಯನ್ನು ಒಯ್ಯುತ್ತಾನೆ. - शूरो भटः खड्गं वहति
ಮೂಕನಾದ ಮನುಷ್ಯನು ಏನನ್ನುತ್ತಾನೆ (ಹೇಳುತ್ತಾನೆ?) - मूको मनुष्यः किं वा वदति ?
ಪಾಪಿಯು ಯಮನನ್ನು ಕಾಣುತ್ತಾನೆ. -पापो यमं पश्यति।
ಭರತನು ರಾಮನನ್ನು ಕಾಣುತ್ತಾನೆ. - भरतो रामं पश्यति।
ರಾಮನು ಲಕ್ಷ್ಮಣನನ್ನು ಅಪ್ಪಿಕೊಳ್ಳುತ್ತಾನೆ. - रामो लक्ष्मणं कुस्यति।
ಆಳು ಕಾಡಿಗೆ ಹೋಗುತ್ತಾನೆ. - सेवको वनं गच्छति।
ಲಕ್ಷ್ಮಣನು ನಗುತ್ತಾನೆ. - लक्ष्मणो हसति।

ವಿಸರ್ಗದ ಹಿಂದೆ **ಅಕಾರ**ವಿದ್ದು ಮುಂದೆ **ಅಕಾರ**ವಾಗಲಿ **ಮೃದುವರ್ಣಗಳಾಗಲಿ** ಬಂದರೆ **ವಿಸರ್ಗ**ವೂ ಅದರ ಹಿಂದಿನ **ಅ**ಕಾರವೂ ಸೇರಿ **ಓ**ಕಾರವಾಗುತ್ತದೆ. ಮೃದು ವರ್ಣಗಳೆಂದರೆ ವರ್ಗದ ಕೊನೆಯ ಮೂರಕ್ಷರಗಳು (ಗ ಘ ಙ, ಜ ಝ ಞ ಮುಂತಾದವು), ಯ ರ ಲ ವ ಹ ಇವು. ಅವಗ್ರಹ (ऽ) ಚಿಹ್ನೆಯು ಅಕಾರವು ಲೋಪವಾಗಿದೆ ಎಂಬುದನ್ನು ಸೂಚಿಸುತ್ತದೆ.[1]

### ಅಭ್ಯಾಸ ೧೬

**ಕನ್ನಡಿಸಿರಿ :** **१.**शूरो भटः अश्वात् न पतति। **२.** रामः किमपि नैव करोति। **३.** स नीले घटे जलं पश्यति। **४.** अहं मधुरं फलं खादामि, शीतं जलं पिबामि। **५.** मूढः पुरुषो धर्मं त्यजति, प्राज्ञः पुरुषो धर्ममेव चरति। **६.** मूको न किमपि वदति। **७.** पापो दरिद्रो भवति।

**ಈ ವಾಕ್ಯಗಳನ್ನು ಸಂಸ್ಕೃತಕ್ಕೆ ತಿರುಗಿಸಿರಿ :** ೧. ಮುದುಕನು ಬೀಳುತ್ತಾನೆ, ಹುಡುಗನು ನಗುತ್ತಾನೆ. **೨.** ಭರತನು ಕಾಡಿಗೆ ಹೋಗುತ್ತಾನೆ, ರಾಮನನ್ನು ಕಾಣುತ್ತಾನೆ. **೩.** ರಾಮನು ಲಕ್ಷ್ಮಣನನ್ನು ಅಪ್ಪಿಕೊಳ್ಳುತ್ತಾನೆ. **೪.** ಬ್ರಾಹ್ಮಣನು ಸಿಹಿ ಹಣ್ಣುಗಳನ್ನು ತಿನ್ನುತ್ತಾನೆ.

1. ಈ ಪುಸ್ತಕದಲ್ಲಿರುವ ಸಂಧಿ ನಿಯಮಗಳನ್ನು ಗಟ್ಟಿ ಮಾಡಬೇಕಾದ್ದಿಲ್ಲ.

## ಹದಿನೇಳನೆಯ ಪಾಠ

ಆಗ ನೀನು ಎಲ್ಲಿ ಕುಳಿತಿರುತ್ತೀಯೆ ? - तदा त्वं कुत्र उपविशसि ?

ನೀನು ಏನು ಓದುತ್ತೀಯೆ ? ರಾಮಾಯಣವನ್ನೊ? ಭಾರತವನ್ನೊ? - त्वं किं पठसि ? रामायणं वा, भारतं वा ?

ನಾನು ಈಗ ಇಲ್ಲಿ ರಾಮಾಯಣವನ್ನು ಓದುತ್ತೇನೆ. - अहमिदानीम् अत्र रामायणं पठामि

ಇಲ್ಲಿ ನಿಂತಿರುತ್ತೀಯೊ, ಅಲ್ಲಿಗೆ ಹೋಗುತ್ತೀಯೊ? - अत्र तिष्ठसि वा, तत्र गच्छसि वा ?

ಅವನ ಮಾತು ಸುಳ್ಳೊ, ದಿಟವೊ? - तस्य वचनम् अनृतं वा, सत्यं वा ?

ಅಸುರನು ಯಾವಾಗಲೂ ಸುಳ್ಳನ್ನೇ ಹೇಳುತ್ತಾನೆ.- असुरः सदा अनृतमेव वदति ।

ಅಲ್ಲಿ ನೀರು ಇದೆಯೊ? - तत्र जलम् अस्ति वा ?

ಅಲ್ಲಿ ಎಲ್ಲೆಲ್ಲಿಯೂ ನೀರೆ. - तत्र सर्वत्र जलमेव ।

ಇವನು ರಾಮನಲ್ಲ. - अयं न रामः ।

ಇದೇನು ಕೊತಿಯೊ, ಮನುಷ್ಯನೊ ? - किमयं वानरो वा, नरो वा ?

ಇದು ಕೋತಿಯಲ್ಲ, ಬೆಕ್ಕೇ. - एष न वानरः, मार्जार एव ।

**ವಿಶೇಷ :** ಮೇಲಿನ ವಾಕ್ಯಗಳಲ್ಲಿ **ವಾ** ಎಂಬ ಅವ್ಯಯವನ್ನು ಉಪಯೋಗಿಸಿರುವ ರೀತಿಯನ್ನು ನೋಡಿರಿ.

### ಅಭ್ಯಾಸ ೧೭

**ಕನ್ನಡಿಸಿರಿ :** **१.** त्वं कस्य पुत्रः ? दशरथस्य वा जनकस्य वा ? **२.** तव गृहं कुत्रास्ति ? ग्रामे वा पत्तने वा ? **३.** एतत् पुस्तकं कस्य ? तस्य वा, तवैव वा ? **४.** एष कस्य पुत्रः ? **५.** एतत् पुस्तकं पठसि वा, गोविन्दाय यच्छसि वा ? **६.** अहम् एतत् पुस्तकं नैव पठामि ।

**ಸಂಸ್ಕೃತಕ್ಕೆ ತಿರುಗಿಸಿರಿ :** ೧. ರಾಮನ ಬಟ್ಟೆ ಬಿಳಿಯೋ, ಹಳದಿಯೊ (पीतम्) ? ೨ ಮಜ್ಜಿಗೆಯು (तक्रम्) ಹುಳಿಯೊ, ಸಿಹಿಯೊ ? ೩ ಬರುತ್ತೀಯೋ, ಇಲ್ಲಿಯೇ ನಿಂತಿರುತೀಯೊ ?

## ಹದಿನೆಂಟನೆಯ ಪಾಠ

ಸಂಸ್ಕೃತ ವಾಕ್ಯಗಳಲ್ಲಿ ಪದಗಳು ಕನ್ನಡದ ಕ್ರಮದಲ್ಲಿಯೇ ಇರಬೇಕಾದ್ದಿಲ್ಲವೆಂಬುದನ್ನು ನೆನಪಿಡಬೇಕು.

ನಾರಾಯಣನನ್ನೂ ನರನನ್ನೂ ನಮಸ್ಕರಿಸುತ್ತೇನೆ. - नारायणं च नरं च नमामि ।

- नमामि नारायणं च नरं च ।

ಅಲ್ಲಿ ಹೊಸ ಪುಸ್ತಕವಿಲ್ಲ. - तत्र नवीनं पुस्तकं नास्ति ।

ಅಲ್ಲಿ ಹೊಸ ಪುಸ್ತಕವಿಲ್ಲ. - तत्र नास्ति नवीनं पुस्तकम् ।

ಅಲ್ಲಿ ಹೊಸ ಪುಸ್ತಕವಿಲ್ಲ. - नास्ति तत्र नवीनं पुस्तकम् ।

ಹಣ್ಣನ್ನೋ ಹೂವನ್ನೋ ತೆಗೆದುಕೊಂಡು ಬಾ. - फलं पुष्पं वा आनय ।

ಹಣ್ಣನ್ನೋ ಹೂವನ್ನೋ ತೆಗೆದುಕೊಂಡು ಬಾ. - आनय फलं पुष्पं वा ।

ಗೋವಿಂದನನ್ನು ಭಜಿಸು. - गोविन्दं भज

ಗೋವಿಂದನನ್ನು ಭಜಿಸು. - भज गोविन्दम् ।

ಗರ್ವವನ್ನು ಮಾಡಬೇಡ. - गर्वं मा कुरु ।

ಗರ್ವವನ್ನು ಮಾಡಬೇಡ. - मा कुरु गर्वम् ।

**ವಿಶೇಷ : ವಾ, ಚ** - ಇವುಗಳು ಕೂಡಿಸುವ ಎರಡು ಮಾತುಗಳಿಗೂ ಸೇರಿರಬೇಕು ; ಅಥವಾ ಕೊನೆಯ ಮಾತಿಗೊಂದಕ್ಕೇ ಸೇರಿದ್ದರೂ ಆಗುತ್ತದೆ. **ರಾಮಂ ಚ ಲಕ್ಷ್ಮಣಂ ಚ** ಅಥವಾ **ರಾಮಂ ಲಕ್ಷ್ಮಣಂ ಚ ; ರಾಮೋ ವಾ ಲಕ್ಷ್ಮಣೋ ವಾ** ಅಥವಾ **ರಾಮೋ ಲಕ್ಷ್ಮಣೋ ವಾ. ನ** - ಇಲ್ಲ, ಅಲ್ಲ ; **ಮಾ** - ಬೇಡ.

### ಅಭ್ಯಾಸ ೧೮

**ಕನ್ನಡಿಸಿರಿ : १.** अनृतं मा वद । **२.** पापं मा कुरु । **३.** पादं स्वच्छेन जलेन क्षालय । **४.** मधुरं फलं खाद । **५.** त्वम् अत्रैव तिष्ठ, ग्रामं गच्छ वा । **६.** शूरो भव, धीरो भव । **७.** पुष्पं च फलं च आनय ।

**ಸಂಸ್ಕೃತಕ್ಕೆ ತಿರುಗಿಸಿರಿ : ೧.** ಅಲ್ಲಿಗೆ ಹೋಗಬೇಡ. **೨** ಯಾವಾಗಲೂ ನಗಬೇಡ. **೩.** ನಾರಾಯಣನನ್ನು ಸ್ಮರಿಸು. **೪.** ಅಸುರನಲ್ಲಿ ಸತ್ಯವಾಗಲಿ ಧರ್ಮವಾಗಲಿ ಇರುವದಿಲ್ಲ. **೫.** ಹಣ್ಣುಗಳನ್ನೂ ಹೂಗಳನ್ನೂ ಇಲ್ಲಿ ಇಡು (रक्ष).

## ಹತ್ತೊಂಭತ್ತನೆಯ ಪಾಠ

ನಾನು ಹೀಗೆ ಮಾಡುವದಿಲ್ಲ. - अहम् एवं न करोमि ।

ಎಲೈ ದೇವನೆ, ನನ್ನನ್ನು ಹಾಗೆ ರಕ್ಷಿಸು. - हे देव, मां तथा रक्ष ।

ಹೀಗೆಂದು ನನ್ನನ್ನು ಕುರಿತು (ನನಗೆ) ಹೇಳುತ್ತಾನೆ. - इति मां वदति ।

ನನ್ನೊಡನೆ ಹೇಗೆ ಹೋಗುತ್ತೀಯೆ? - मया सह कथं गच्छसि ?

ನನಗೆ ಏನು ಕೊಡುತ್ತೀಯೆ? - मह्यं किं यच्छसि ?

ನನ್ನಲ್ಲಿಂದ ಅವರು ಹೋಗುತ್ತಾರೆ. - मत् ते गच्छन्ति ।

ನನ್ನ ಪುಸ್ತಕವೆಲ್ಲಿ? - मम पुस्तकं कुत्र ?

ನನ್ನಲ್ಲಿ ದೇವನ ಅನುಗ್ರಹವಿಲ್ಲವೇನು? - मयि देवस्य अनुग्रहो नास्ति किम्?

**ವಿಶೇಷ :-** ಮೇಲಿನ ವಾಕ್ಯಗಳಲ್ಲಿರುವ **ಅಸ್ಮಚ್ಛಬ್ದ**ದ (ನಾನು ಎಂಬರ್ಥದ **ಅಹಂ** ಶಬ್ದದ) ರೂಪಗಳನ್ನೂ ಅವ್ಯಯಗಳನ್ನೂ ನೆನಪಿನಲ್ಲಿಟ್ಟಿರಬೇಕು.

### ಅಭ್ಯಾಸ ೧೯

**ಕನ್ನಡಿಸಿರಿ :** **१.** रामायणं भारतं च पठ । **२.** धर्मं कदापि मा त्यज ।

**३.** अहमेव तत्र गच्छामि । **४.** रामं च लक्ष्मणं च पश्यामि ।

**५.** मह्यं ते किं यच्छन्ति ? **६.** मम नवीनं गृहं सुन्दरम् ।

**७.** भिक्षुकाः ग्रामात् ग्रामं गच्छन्ति । **८.** मयि नास्ति अपराधः ।

**ಸಂಸ್ಕೃತಕ್ಕೆ ತಿರುಗಿಸಿರಿ :**

೧. ನನ್ನಲ್ಲಿಗೆ (ನನ್ನನ್ನು ಕುರಿತು) ಭಿಕ್ಷುಕರು ಏತಕ್ಕೆ (किमिति) ಬರುತ್ತಿದ್ದಾರೆ?

೨. ನೀವೂ ನನ್ನೊಡನೆ ಬರುತ್ತೀರೇನು?

೩. ನನ್ನ ಹತ್ತಿರ (समीपे) ಹೊಸ ಪುಸ್ತಕವಿಲ್ಲ.

೪. ನನಗೆ ನಿನ್ನ ಪುಸ್ತಕವನ್ನೇ ಕೊಡು.

೫. ಹಾಗೇ ಹೇಳಬೇಡ. ೬. ನನ್ನಲ್ಲಿ ಧನವೇ ಇಲ್ಲ.

೭. ದಶರಥನು ರಾಮನನ್ನೂ ಲಕ್ಷ್ಮಣನನ್ನೂ ಅಪ್ಪಿಕೊಳ್ಳುತ್ತಾನೆ.

## ಇಪ್ಪತ್ತನೆಯ ಪಾಠ

ಇಲ್ಲಿ ಕೆಲವು ಭೂತಕೃದಂತಗಳನ್ನು (Past Participles) ಕೊಟ್ಟಿರುತ್ತದೆ. ಇವುಗಳನ್ನು ನೆನಪಿನಲ್ಲಿಟ್ಟಿರಿ. ಭೂತಕಾಲದ ಕ್ರಿಯಾಪದಗಳಂತೆಯೇ ಇವನ್ನು ಉಪಯೋಗಿಸಿಕೊಳ್ಳಬಹುದು.

ಹೀಗೆ ಕಾಲವು ಹೋಯಿತು. - एवं कालो गतः ।

ಹುಡುಗರು ಎಲ್ಲಿಗೆ ಹೋದರು? - बालकाः कुत्र गताः ।

ಸೀತೆ ರಾಮನೊಡನೆಯೇ ಹೋದಳು. - सीता रामेण सहैव गता ।

ಹೋದ ಕಾಲವು ತಿರುಗಿ ಬರುತ್ತದೆಯೇನು? - गतः कालः प्रत्यगच्छति किम्?

ರಾಮನು ಕಾಡಿನಿಂದ ಹಿಂದಕ್ಕೆ ಬಂದನು. - रामो वनात् प्रत्यागतः ।

ಹಿಂತಿರುಗಿ ಬಂದ ರಾಮನನ್ನು ಭರತನು ಕಾಣುತ್ತಾನೆ. -प्रत्यागतं रामं पश्यति भरतः ।

ಈಗ ಭಟನ ಬಲವು ಹೋಯಿತು. - इदानीं भटस्य बलं गतम् ।

ಹೋದ ಧನವು ಹಿಂದಕ್ಕೆ ಬರುವದಿಲ್ಲ. - गतं धनं न प्रत्यागच्छति ।

ಆಚಾರ್ಯನು ಮಣೆಯ ಮೇಲೆ ಕುಳಿತನು. - आचार्यः पीठे उपविष्टः ।

ಕುಳಿತುಕೊಂಡ ಆಚಾರ್ಯನನ್ನು ಪೂಜಿಸುತ್ತೇನೆ. - उपविष्टम् आचार्यं पूजयामि ।

ಇಲಿಯು ಬಿಲವನ್ನು ಹೊಕ್ಕಿತು. - मूषको बिलं प्रविष्टः ।

ಇಲಿ ಬಿಲದಿಂದ ಯಾವಾಗ ಹೊರಕ್ಕೆ ಬಂತು? - मूषको बिलात् कदा निर्गतः?

**ವಿಶೇಷ**:- ಭೂತಕೃದಂತವಿಶೇಷಣಗಳ ರೂಪಗಳನ್ನು ಇಲ್ಲಿ ತೋರಿಸುತ್ತೇವೆ :

**ಪು.** ಗತಃ, ಗತ, ಗತಮ್, ಗತೇನ, ಗತಾಯ, ಗತಾತ್, ಗತಸ್ಯ, ಗತೇ.

**ನ.** ಗತಮ್, ಗತ, ಗತಮ್, ಗತೇನ, ಗತಾಯ, ಗತಾತ್, ಗತಸ್ಯ, ಗತೇ.

ಪುಲ್ಲಿಂಗ ಅಕಾರಾಂತಕೃದಂತಗಳು 'ಬಾಲ' ಶಬ್ದದಂತೆಯೂ, ನಪುಂಸಕಲಿಂಗ ಅಕಾರಾಂತ ಕೃದಂತಗಳು 'ಫಲ' ಶಬ್ದದಂತೆಯೂ ನಡೆಯುತ್ತದೆ. (೨೫ನೆಯ ಪುಟವನ್ನು ನೋಡಿ).

### ಅಭ್ಯಾಸ ೨೦

**ಕನ್ನಡಿಸಿರಿ** : **१.** परमेश्वरं पूजय, गतं पापम् । **२.** उपविष्टस्य ब्राह्मणस्य पादं क्षालयन्ति ते । **३.** तेऽपि मया सह आगताः । **४.** भरतः तत्रैव स्थित (ನಿಂತಿದ್ದನು.) । **५** चोरः कथं गृहं प्रविष्टः ? **६** सर्पो बिलात् निर्गतः किम् ? **७.** चोरः कुत्र प्रधावितः ?

## ಇಪ್ಪತ್ತೊಂದನೆಯ ಪಾಠ

ಈ ಕೆಳಗಿನ ವಾಕ್ಯಗಳಲ್ಲಿ ಭೂತಕೃದಂತಗಳಿಗೆ ಕನ್ನಡದಲ್ಲಿ ಅರ್ಥವನ್ನು ಮಾಡಿರುವ ರೀತಿಯನ್ನು ಲಕ್ಷಿಸಿರಿ :

अहं देवस्य समीपे उपविष्टः । - ನಾನು ದೇವನ ಹತ್ತಿರ ಕುಳಿತೆನು.

मया पूजितो देवः । - ನನ್ನಿಂದ ದೇವನು ಪೂಜಿಸಲ್ಪಟ್ಟನು.

त्वं कदा आगतः ? - ನೀನು ಯಾವಾಗ ಬಂದೆ ?

देव, त्वा अहं पूजयामि । - ದೇವನೆ, ನಿನ್ನನ್ನು ನಾನು ಪೂಜಿಸುತ್ತೇನೆ.

त्वया किं कृतम् ? - ನಿನ್ನಿಂದ ಏನು ಮಾಡಲ್ಪಟ್ಟಿತು ?

तुभ्यं देवेन किं दत्तम् ? - ನಿನಗೆ ದೇವನಿಂದ ಏನು ಕೊಡಲ್ಪಟ್ಟಿತು ?

मम पुस्तकं कुत्र गतम् ? - ನನ್ನ ಪುಸ್ತಕವು ಎಲ್ಲಿ ಹೋಯಿತು?

तव पुस्तकं मया नैव दृष्टम् । - ನಿನ್ನ ಪುಸ್ತಕವು ನನ್ನಿಂದ ನೋಡಲ್ಪಡಲೇ ಇಲ್ಲ.

दृष्ट धन न मया स्पृष्टम् । - ನೋಡಲ್ಪಟ್ಟ ಹಣವು ನನ್ನಿಂದ ಮುಟ್ಟಲ್ಪಡಲಿಲ್ಲ.

त्वयि नास्ति अपराधः । - ನಿನ್ನಲ್ಲಿ ತಪ್ಪಿಲ್ಲ.

**ವಿಶೇಷ :** (೧) ಸಂಸ್ಕೃತದಲ್ಲಿ ಕರ್ಮಣಿಪ್ರಯೋಗವು (Passive Voice) ಬಹಳ ಪ್ರಚುರವಾಗಿರುತ್ತದೆ. ಇದನ್ನು ತಿಳಿಸುವದಕ್ಕಾಗಿ **'ಅಲ್ಪಡು'** ಎಂದು ಕನ್ನಡಿಸುತ್ತಾರೆ.[1] ಸಕರ್ಮಕಧಾತುಗಳ ಭೂತಕೃದಂತಗಳಿಗೆಲ್ಲ ಹೀಗೆಯೇ ಅರ್ಥ. ಈ ಉದಾಹರಣೆಗಳನ್ನು ನೋಡಿರಿ :

ಪುಸ್ತಕಂ ಗತಂ - ಪುಸ್ತಕವು ಹೋಯಿತು.

ಪುಸ್ತಕಂ ಕೃತಮ್ - ಪುಸ್ತಕವು ಮಾಡಲ್ಪಟ್ಟಿತು.

ಪತಿತಂ ಫಲಂ ವಾನರೇಣ ಖಾದಿತಮ್ - ಬಿದ್ದ ಹಣ್ಣು ಕೋತಿಯಿಂದ ತಿನ್ನಲ್ಪಟ್ಟಿತು.

---

1. ಕನ್ನಡದಲ್ಲಿ ಕರ್ತರಿ ಪ್ರಯೋಗವಿದ್ದರೂ ಕರ್ಮಕ್ಕೆ (object) ಪ್ರಾಧಾನ್ಯವಿರುವಾಗ ಸಂಸ್ಕೃತದಲ್ಲಿ ಕರ್ಮಣಿ ಪ್ರಯೋಗವನ್ನೇ ಬಳಸಬೇಕು.

(೨) 'ನೀನು' ಎಂಬರ್ಥದ (ತ್ವಮ್) ಸರ್ವನಾಮದ ಏಕವಚನರೂಪಗಳನ್ನೆಲ್ಲ ಮೇಲಿನ ವಾಕ್ಯಗಳಲ್ಲಿ ಕೊಟ್ಟಿದೆ.

## ಅಭ್ಯಾಸ ೨೧

ಇಲ್ಲಿ ಕೊಟ್ಟಿರುವ ವಾಕ್ಯಗಳನ್ನು **ಸಂಸ್ಕೃತಕ್ಕೆ ತಿರುಗಿಸಿರಿ** ; ಇವುಗಳ ಕೆಳಗೆ ಸಂಸ್ಕೃತವಾಕ್ಯಗಳನ್ನು ಕೊಟ್ಟಿದೆ, ಅವನ್ನು ಹುಡುಕಿರಿ :

೧. ಹೋದ ಹಣವು ಎಂದಿಗೂ ಹಿಂದಿರುಗಿ ಬರುವದಿಲ್ಲ.

೨. ನಿನ್ನೆ ಓದಲ್ಪಟ್ಟ (ಓದಿದ) ಪಾಠವನ್ನು ನೆನಪಿಟ್ಟಿದ್ದೀಯೇನು?

೩. ಬಿಲವನ್ನು ಹೊಕ್ಕ ಇಲಿಯನ್ನು ಬೆಕ್ಕು ನೋಡುತ್ತದೆ.

೪ ನನ್ನಿಂದ ಸ್ವಪ್ನದಲ್ಲಿ ಇಂದ್ರನ ಕುದುರೆಯು ನೋಡಲ್ಪಟ್ಟಿತು (ನನಗೆ ಕನಸಿನಲ್ಲಿ ಇಂದ್ರನ ಕುದುರೆ ಕಾಣಿಸಿಕೊಂಡಿತು).

೫. ತಿರುಗಿ ಬಂದ ಬ್ರಾಹ್ಮಣನಿಗೆ ಏನು ಕೊಡುತ್ತೀಯೆ?

೬. ಅವನಿಂದ ನಿನಗೆ ಏನು ಕೊಡಲ್ಪಟ್ಟಿತು ?

೭. ಹೋದದ್ದು ಹೋಗಿಯೇ ಹೋಯಿತು.

೮. ನಿನ್ನ ಧನವು ಕಳ್ಳನಿಂದ ಏನು ಮಾಡಲ್ಪಟ್ಟಿತು (ನಿನ್ನ ಹಣವನ್ನು ಕಳ್ಳನು ಏನು ಮಾಡಿದನು)?

೯. ನಿನ್ನಲ್ಲಿ ನನಗೆ ವಿಶ್ವಾಸವಿದೆ.

**ಕನ್ನಡಿಸಿರಿ :**

१. त्वयि मम विश्वसोऽस्ति। २. बिलं प्रविष्टं मूषकं मार्जारः पश्यति।

३. प्रत्यागताय ब्राह्मणाय किं यच्छसि ? ४. तेन तुभ्यं किं दत्तम् ?

५. गतं गतमेव। ६. तव धनं चोरेण किं कृतम् ?

७. गतं धनं कदापि न प्रत्यागच्छति।

८. ह्यः पठितं पाठं स्मरसि किम् ? ९. मया स्वप्ने इन्द्रस्य अश्वः दृष्टः।

## ಇಪ್ಪತ್ತೆರಡನೆಯ ಪಾಠ

**कः, सः, एषः-** ಈ ಸರ್ವನಾಮಗಳ ರೂಪಗಳನ್ನು ಕೆಳಗೆ ಕೊಟ್ಟಿದೆ :

कः ? कम् ? केन ? कस्मै ? कस्मात् ? कस्य ? कस्मिन् ?

सः । तम् । तेन । तस्मै । तस्मात् । तस्य । तस्मिन् ।

एषः । एतम् । एतेन । एतस्मै । एतस्मात् । एतस्य । एतस्मिन् ।

ಇವುಗಳ ರೂಪಗಳು ದ್ವಿತೀಯೆಯಿಂದ ಹಿಡಿದು ಎಲ್ಲಾ ವಿಭಕ್ತಿಗಳಲ್ಲಿಯೂ ಒಂದೇ ರೂಪದಲ್ಲಿವೆ ಎಂಬುದನ್ನು ಲಕ್ಷ್ಯದಲ್ಲಿಡಿರಿ. ನಪುಂಸಕಲಿಂಗದಲ್ಲಿ ತೃತೀಯೆಯಿಂದ ಹಿಡಿದು ಪುಲ್ಲಿಂಗದಂತೆಯೇ ರೂಪಗಳು :

ಕಿಮ್ ? ಕಿಮ್ ? ಕೇನ ? ಕಸ್ಮೈ ? ಕಸ್ಮಾತ್ ? ಕಸ್ಯ ? ಕಸ್ಮಿನ್ ?

**ಈ ಸರ್ವನಾಮಗಳನ್ನು ವಿಶೇಷಣವಾಗಿಯೂ ಉಪಯೋಗಿಸಬಹುದು :**

ಈ ಪುಸ್ತಕವನ್ನು ಯಾವನಿಗೆ ಕೊಡುತ್ತೀಯೆ? - एतत् पुस्तकं कस्मै यच्छसि ?

ಆ ಹಣ್ಣು ಯಾವ ಬ್ರಾಹ್ಮಣನಿಗೆ ಕೊಡಲ್ಪಟ್ಟಿತು? - तत् फलं कस्मै ब्राह्मणाय दत्तम् ?

ಯಾವ ದೇವಾಲಯದಲ್ಲಿ ಜಪವನ್ನು ಮಾಡುತ್ತೀಯೆ? - कस्मिन् देवालये जपं करोषि ?

ಆ ಬ್ರಾಹ್ಮಣನು ಯಾರು ? - स[1] ब्राह्मणः कः ?

ಈ ಮರವು ಯಾರದು ? - एष वृक्षः कस्य ?

ಅವನು ಯಾವ ಮಾರ್ಗದಿಂದ ಹೋದನು ? -केन मार्गेण गतः सः ?

### ಅಭ್ಯಾಸ ೨೨

**ಕನ್ನಡಿಸಿರಿ : १.**देवः किं करोति ? **२.** देवो भक्तं रक्षति । **३.** स कुत्र गतः ? **४.** स बालः पुरातनं देवालयं प्रविष्टः । **५.** को दशरथस्य पुत्रः ? **६.** एष बालो दशरथस्य पुत्रः । **७.** त्वं किं पुस्तकं पठसि ? **८.** अहं मम नवीनं पुस्तकं पठामि । **९.** स कम् आचार्यं नमति ? **१०.** तस्य आचार्यो वसिष्ठः । **११.** त्वया खड्गः कस्मै दत्तः ? **१२.** स खड्गः एतस्मै शूराय दत्तः । **१३.** तत् फलं कुत्र गतम् ? **१४.** तत् वानरेण खादितम् । **१५.** स ग्रन्थः केन कृतः ? **१६.** स व्यासेन कृतः । **१७.** दशरथः कस्मिन् नगरे वसति ? **१८.** एतत् पुस्तकं कस्य ? **१९.** केन कारणेन एवं वदन्ति ?

**ಸಂಸ್ಕೃತಕ್ಕೆ ತಿರುಗಿಸಿರಿ : ೧.** ಆ ಊರಿನಲ್ಲಿ ಯಾವ ಬ್ರಾಹ್ಮಣನು ವಾಸಮಾಡುತ್ತಾನೆ? **೨** ಆ ಜಿಪುಣನು ನಿನಗೆ ಏನನ್ನು ಕೊಡುತ್ತಾನೆ? **೩.** ಆ ಸುಂದರವಾದ ಚಿತ್ರವು ಯಾರ ಮನೆಯಲ್ಲಿ ಇದೆ ? **೪** ಅವನಿಂದ ಏನು ನೋಡಲ್ಪಟ್ಟಿತು ? **೫.** ಆ ಪುಸ್ತಕವನ್ನು ಯಾವಾಗ ಓದುತ್ತೀಯೆ ?

1. **ಸಃ, ಏಷಃ** - ಇವುಗಳ ವಿಸರ್ಗವು ವ್ಯಂಜನಗಳ ಹಿಂದೆ ಇರುವಾಗ ಲೋಪವಾಗುತ್ತದೆ.

# ಇಪ್ಪತ್ತುಮೂರನೆಯ ಪಾಠ

ಅಕಾರಾಂತಪುಲ್ಲಿಂಗದ ಮತ್ತು ನಪುಂಸಕಲಿಂಗದ ಶಬ್ದಗಳ ಬಹುವಚನ ರೂಪಗಳನ್ನು ಈ ಕೆಳಗೆ ಕೊಟ್ಟಿದೆ :

| | | | |
|---|---|---|---|
| देवाः | - ದೇವತೆಗಳು | फलानि | - ಹಣ್ಣುಗಳು |
| हे देवाः | - ಎಲೈ ದೇವತೆಗಳೆ | हे फलानि | - ಎಲೈ ಹಣ್ಣುಗಳೆ |
| देवान् | - ದೇವತೆಗಳನ್ನು | फलानि | - ಹಣ್ಣುಗಳನ್ನು |
| देवैः | - ದೇವತೆಗಳಿಂದ | फलैः | - ಹಣ್ಣುಗಳಿಂದ |
| देवेभ्यः | - ದೇವತೆಗಳಿಗೆ | फलेभ्यः | - ಹಣ್ಣುಗಳಿಗೆ |
| देवेभ्यः | - ದೇವತೆಗಳ ಕಡೆಯಿಂದ | फलेभ्यः | - ಹಣ್ಣುಗಳ ಕಡೆಯಿಂದ |
| देवानाम् | - ದೇವತೆಗಳ | फलानाम् | - ಹಣ್ಣುಗಳ |
| देवेषु | - ದೇವತೆಗಳಲ್ಲಿ | फलेषु | - ಹಣ್ಣುಗಳಲ್ಲಿ |

**ವಿಶೇಷ :** (೧) ಚತುರ್ಥೀ, ಪಂಚಮೀ - ಈ ವಿಭಕ್ತಿಗಳೆರಡಕ್ಕೂ ಒಂದೇ ರೂಪ ; ನಪುಂಸಕಲಿಂಗದಲ್ಲಿ ತೃತೀಯಾವಿಭಕ್ತಿಯಿಂದ ಏಕವಚನದಂತೆ ಬಹುವಚನ ದಲ್ಲಿಯೂ ವಿಭಕ್ತಿರೂಪಗಳು ಪುಲ್ಲಿಂಗಶಬ್ದಗಳ ರೂಪದಂತೆಯೇ ಇರುವವು. (೨೫ ನೆಯ ಪುಟವನ್ನು ನೋಡಿ).

(೨) ವಿಶೇಷಣಗಳಿಗೂ ವಿಶೇಷ್ಯಗಳಂತೆಯೇ ರೂಪ : **ಶೂರಾಃ ಪುರುಷಾಃ** - ಶೂರರಾದ ಪುರುಷರು, **ಶೂರಾನ್ ಪುರುಷಾನ್** - ಶೂರರಾದ ಪುರುಷರನ್ನು, **ಸುನ್ದರಾಣಿ ಚಿತ್ರಾಣಿ** - ಸುಂದರವಾದ ಚಿತ್ರಗಳು, ಸುಂದರವಾದ ಚಿತ್ರಗಳನ್ನು.

## ಅಭ್ಯಾಸ ೨೩

**ಈ ವಾಕ್ಯಗಳಲ್ಲಿರುವ ನಾಮಪದಗಳ ಏಕವಚನವನ್ನು ಬಹುವಚನವಾಗಿ ತಿರುಗಿಸಿ ಅರ್ಥವನ್ನು ಹೇಳಿ :**

१. कृष्णः सर्पः सरति पुरातने देवालये । **२.** शूरो भटो न पतति अश्वात् । **३.** बालकाय फलं यच्छामः । **४.** विशाले सरोवरे तत्र कोमलं कमलं पश्यामः । **५.** अन्धः पुरुषो दीपेन किं करोति ? **६.** उपविष्टाय ब्राह्मणाय त्वया किं दत्तम् ? **७.** ब्राह्मणेन यक्षो दृष्टः ।

**ಸಂಸ್ಕೃತಕ್ಕೆ ತಿರುಗಿಸಿರಿ :** ೧. ಬೆಕ್ಕುಗಳು ಇಲಿಗಳನ್ನು ನೋಡುತ್ತವೆ. **೨.** ಇಲಿಗಳು ಬಿಲಗಳನ್ನು ಪ್ರವೇಶಿಸುತ್ತವೆ. **೩.** ಮರಗಳ ಕಡೆಯಿಂದ ಹಣ್ಣುಗಳು ಬೀಳುತ್ತವೆ. **೪.** ಕಿವುಡರಿಗೆ (बधिराणां) ಸಂಗೀತದಿಂದ ಏನು ಪ್ರಯೋಜನ ? **೫.** ಆಕಾಶದಲ್ಲಿ ಕರಿಯ ಮೋಡಗಳು ಸಂಚರಿಸುತವೆ.

## ಇಪ್ಪತ್ತುನಾಲ್ಕನೆಯ ಪಾಠ

ಹತ್ತೊಂಬತ್ತನೆಯ ಪಾಠದಲ್ಲಿನ ಸಂಸ್ಕೃತವಾಕ್ಯಗಳಲ್ಲಿರುವ **'ಅಹಮ್'** ಎಂಬ ಶಬ್ದದ ರೂಪಗಳನ್ನು ಇಲ್ಲಿ ಬಹುವಚನವಾಗಿ ತಿರುಗಿಸಿ ಬರೆಯುತ್ತೇವೆ ; ಆದ್ದರಿಂದ ಕ್ರಿಯಾಪದಗಳೂ ಬಹುವಚನಗಳಾಗಿವೆ. **ಅರ್ಥವನ್ನು ಊಹಿಸಿರಿ :**

**१.** वयम् एवं न कुर्मः । **२.** हे देव, अस्मान् तथा रक्ष । **३.** इति अस्मान् वदति । **४.** अस्माभिः सह कथं गच्छथ ? **५.** अस्मभ्यं किं यच्छसि ? **६.** अस्मात्[1] ते गच्छन्ति । **७.** अस्माकं पुस्तकानि कुत्र ? **८.** अस्मासु देवानाम् अनुग्रहो नास्ति किम् ?

### ಅಭ್ಯಾಸ ೨೪

**ಸಂಸ್ಕೃತಕ್ಕೆ ತಿರುಗಿಸಿರಿ :** ೧. ನಾವು ಮೂಢರಾದ ಹುಡುಗರು. ೨. ನಮ್ಮಲ್ಲಿ ಆಚಾರ್ಯನ ಅನುಗ್ರಹವಿದೆ. ೩. ನಮ್ಮಿಂದ ಪುಸ್ತಕವು ಓದಲ್ಪಡಲಿಲ್ಲ. ೪. ನಮಗೆ ಸಿಹಿಯಾದ ಪಾನಕವನ್ನು ಕೊಡುತ್ತಾರೆ. ೫. ನಮ್ಮೊಡನೆ ನೀನು ಬರುತ್ತೀಯೇನು ? ೬. ನಮ್ಮಗಳ ಮನೆಗಳು ಹೊಳೆನರಸೀಪುರದಲ್ಲಿ ಇವೆ (सन्ति). ೭. ನಮ್ಮಗಳ ಕಡೆಯಿಂದ (अस्मत्सकाशात्) ಇಲಿಗಳು ಓಡಿ ಹೋಗುತ್ತವೆ. ೮. ನಮ್ಮಲ್ಲಿ ತಪ್ಪು ಇದೆಯೆ?

## ಇಪ್ಪತ್ತೈದನೆಯ ಪಾಠ

ಈ ಕೆಳಗೆ त्वम् (ನೀನು) ಎಂಬ ಮಾತಿನ ಬಹುವಚನ ರೂಪಗಳನ್ನೊಳಗೊಂಡ ಶಬ್ದಗಳಿರುವ ವಾಕ್ಯಗಳಿವೆ. ಇಪ್ಪತ್ತೊಂದನೆಯ ಪಾಠದಲ್ಲಿರುವ ವಾಕ್ಯಗಳಲ್ಲಿ ಇದೇ ಶಬ್ದದ ಏಕವಚನಗಳಿವೆ. **ಅರ್ಥವನ್ನೂಹಿಸಿ ಬರೆಯಿರಿ :**

**१.** यूयं (ನೀವು) कदा आगताः? **२.** भो देवाः, युष्मान् (ನಿಮ್ಮನ್ನು) वयं पूजयामः । **३.** युष्माभिः (ನಿಮ್ಮಿಂದ) किं कृतम् ? **४.** युष्मभ्यं (ನಿಮಗೆ) देवैः किं दत्तम् ? **५** युष्मत्सकाशात् (ನಿಮ್ಮ ಕಡೆಯಿಂದ) स कुत्र गतः ? **६.** युष्माकं (ನಿಮ್ಮ) पुस्तकानि मया नैव दृष्टानि । **७.** युष्मासु (ನಿಮ್ಮಲ್ಲಿ) नास्ति अपराधः । **८.** सत्यं वदत (ಹೇಳಿರಿ) धर्मं चरत (ಮಾಡಿರಿ) ।

**ವಿಶೇಷ: ಚರತ-** ಆಚರಿಸಿರಿ, ಮಾಡಿರಿ; **ಚರಥ-** ಆಚರಿಸುತ್ತೀರಿ, ಮಾಡುತ್ತೀರಿ.

### ಅಭ್ಯಾಸ ೨೫

**ಸಂಸ್ಕೃತಕ್ಕೆ ತಿರುಗಿಸಿರಿ :** ೧. ನೀವು ಇನ್ನೂ (अद्यापि) ಹುಡುಗರು. ೨. ನಿಮ್ಮನ್ನು ಯಾರು ಕಾಪಾಡುತಾರೆ ? ೩. ನಿಮಗೆ ಒಂದು ಪುಸ್ತಕವನ್ನು ಕೊಡುತ್ತೇನೆ.

1. **'ಅಸ್ಮತ್ಸಕಾಶಾತ್'** ಎಂಬ ಸಮಸ್ತಪದವನ್ನು ಈ ಅರ್ಥದಲ್ಲಿ ಉಪಯೋಗಿಸುವರು. ಹೀಗೆಯೇ **'ಭೀತಾ ವಯಂ ತ್ವತ್ಸಕಾಶಮಾಗತಾಃ'**- ಹೆದರಿದ ನಾವು ನಿನ್ನ ಬಳಿಗೆ ಬಂದೆವು ಎಂದು ಪ್ರಯೋಗಿಸಬಹುದು.

೪. ನಿಮ್ಮಿಂದ ಹಣ್ಣುಗಳು ಏನು ಮಾಡಲ್ಪಟ್ಟವು (कृतानि) ? ೫. ನಿಮ್ಮೊಡನೆ ನಾವು ಬರುವದಿಲ್ಲ. ೬. ನಿಮ್ಮಲ್ಲಿಂದ ಯಾರು ಬರುತ್ತಾರೆ ? ೭. ನಿಮ್ಮಲ್ಲಿ ಚಿತ್ರಗಳಿವೆಯೇನು? ೮. ನಿಮ್ಮ ಆಚಾರ್ಯರು ಯಾರು ? ೯. ನಿಮ್ಮ ಪುಸ್ತಕವನ್ನು ತನ್ನಿರಿ (आनयथ) ।

## ಇಪ್ಪತ್ತಾರನೆಯ ಪಾಠ

**किम्, तत्** - ಈ ಶಬ್ದಗಳ ಪುಲ್ಲಿಂಗ ಬಹುವಚನಗಳನ್ನು ಕೆಳಗೆ ಕೊಟ್ಟಿದೆ. ಇವುಗಳ ಏಕವಚನ ರೂಪಗಳು ಇಪ್ಪತ್ತೆರಡನೆಯ ಪಾಠದಲ್ಲಿವೆ ; ನೋಡಿರಿ.

**के** - ಯಾರು? **कान्** - ಯಾರನ್ನು, **कैः** - ಯಾರಿಂದ ? **केभ्यः** - ಯಾರಿಗೆ? **केभ्यः** - ಯಾರ ಕಡೆಯಿಂದ ? **केषाम्** - ಯಾರ ? **केषु**- ಯಾರಲ್ಲಿ ?

**ते** - ಅವರು, **तान्** - ಅವರನ್ನು, **तैः** - ಅವರಿಂದ, **तेभ्यः** - ಅವರಿಗೆ, **तेभ्यः** - ಅವರ ಕಡೆಯಿಂದ, **तेषाम्** - ಅವರ, **तेषु** - ಅವರಲ್ಲಿ.

**ವಿಶೇಷ** : (೧) ಇವುಗಳನ್ನು ಪುಲ್ಲಿಂಗ ಶಬ್ದಗಳಿಗೆಲ್ಲ ಹೊಂದುವಂತೆ ಉಪಯೋಗಿಸಬಹುದು. ಉದಾ : ವಾನರಾಃ ಕೇ ? - ಕಪಿಗಳು ಯಾವವು? ಕೇ ವೃಕ್ಷಾಃ ?- ಯಾವ ಮರಗಳು ? ತೇ ಚೋರಾಃ - ಅವರು ಕಳ್ಳರು, ಆ ಕಳ್ಳರು . ಕೇಷು ಗೃಹೇಷು ? - ಯಾವ ಮನೆಗಳಲ್ಲಿ ? ತೇಷು ವೃಕ್ಷೇಷು - ಆ ಮರಗಳಲ್ಲಿ. (೨) ನಪುಂಸಕದಲ್ಲಿ ಕಾನಿ (ಯಾವವು ? ಯಾವವನ್ನು ?), ತಾನಿ (ಅವು, ಅವನ್ನು) ; ಮಿಕ್ಕ ರೂಪಗಳೆಲ್ಲ ಪುಲ್ಲಿಂಗದಂತೆ. ಕಾನಿ ಫಲಾನಿ ? - ಯಾವ ಹಣ್ಣುಗಳು? (ಅಥವಾ) ಯಾವ ಹಣ್ಣುಗಳನ್ನು? (೩) 'ಏತತ್' ಎಂಬ ಶಬ್ದಕ್ಕೆ ''ತತ್' ಶಬ್ದದಂತೆ ರೂಪಗಳು. ಏತೇ, ಏತಾನ್, ಏತೈಃ - ಇತ್ಯಾದಿ.

### ಅಭ್ಯಾಸ ೨೬

**ಕನ್ನಡಿಸಿರಿ :** **१.** के एते ? **२.** ते दशरथस्य पुत्राः । **३.** देवालये के के सन्ति ? **४.** के के ब्राह्मणाः ? **५.** तानि फलानि केभ्यः केभ्यो यच्छसि ? **६.** केषु गृहेषु बालका न सन्ति ? **७.** तस्मिन् ग्रामे के वसन्ति ? **८.** कस्मिन् नगरे सुन्दराणि गृहाणि सन्ति ? **९.** ते उद्याने (ಹೂದೋಟದಲ್ಲಿ) कदा सञ्चरन्ति ?

**ಸಂಸ್ಕೃತಕ್ಕೆ ತಿರುಗಿಸಿರಿ**[1] : ೧. ಈ ಹುಡುಗರು ಯಾರು ? ೨. ಎಲೈ ಬಾಲಕರೆ, ಇಲ್ಲಿ ಬನ್ನಿರಿ. ೩. ನನ್ನ ಪುಸ್ತಕವನ್ನು ನೋಡಿರಿ. ೪. ನೀವು ಯಾವ ಪುಸ್ತಕಗಳನ್ನು ಓದುತ್ತೀರಿ? ೫ ಆ ಪುಸ್ತಕಗಳಲ್ಲಿ ಸುಂದರವಾದ ಚಿತ್ರಗಳಿವೆಯೆ ? ೬. ಈ (एतानि) ಚಿತ್ರಗಳನ್ನು ನೋಡಿರಿ. ೭. ನೀವು ಆ ಹಣ್ಣುಗಳನ್ನು ನೋಡುತ್ತೀರೇನು ? ೮. ಆ ಊರಿನಲ್ಲಿ ಯಾವ ಯಾವ ದೇವಾಲಯಗಳಲ್ಲಿ ಬ್ರಾಹ್ಮಣರು ದೇವತೆಗಳನ್ನು ಪೂಜಿಸುತ್ತಾರೆ ? ೯. ಯಾವ ಮರಗಳಿಂದ (೫)* ಹಣ್ಣುಗಳು ಬೀಳುತ್ತವೆ ? ೧೦. ಅವರು ನಿಮಗೆ (೨)* ಏನೆಂದು ಹೇಳುತ್ತಾರೆ ? ೧೧. ಯಾವ ಊರುಗಳಲ್ಲಿ ದೇವಾಲಯಗಳಿಲ್ಲ ?

1. ಸಂಸ್ಕೃತವಾಕ್ಯಗಳು ೨೮ನೆಯ ಅಭ್ಯಾಸದಲ್ಲಿ ಸಿಕ್ಕುತ್ತವೆ; ಬರೆದ ಮೇಲೆ ನೋಡಿಕೊಳ್ಳಿರಿ.

* ಇಲ್ಲಿ ಕಂಸದಲ್ಲಿ ಹಾಕಿರುವ ಸಂಖ್ಯೆಗಳು ಆಯಾ ವಿಭಕ್ತಿರೂಪವು ಬೇಕೆಂದು ಸೂಚಿಸುತ್ತದೆ.

## ಇಪ್ಪತ್ತೇಳನೆಯ ಪಾಠ

ಸಂಸ್ಕೃತದಲ್ಲಿ ಒಂದು ಪದಾರ್ಥವನ್ನು ಹೇಳುವದಕ್ಕೆ ಏಕವಚನ, ಎರಡನ್ನು ಹೇಳುವದಕ್ಕೆ ದ್ವಿವಚನ, ಎರಡಕ್ಕಿಂತ ಹೆಚ್ಚಾಗಿರುವ ವಸ್ತುಗಳನ್ನು ತಿಳಿಸುವದಕ್ಕೆ ಬಹುವಚನ - ಹೀಗೆ ಪ್ರಯೋಗಿಸುತ್ತಾರೆ. ಇಲ್ಲಿರುವ ವಾಕ್ಯಗಳನ್ನು ನೋಡಿರಿ :

| | |
|---|---|
| ನಾನೊಬ್ಬ ಹುಡುಗ. | - अहम् एकः बालकः । |
| ನಾವಿಬ್ಬರೂ ವಿಶ್ವಾಮಿತ್ರನ ಶಿಷ್ಯರು. | - आवाम् उभौ विश्वामित्रस्य शिष्यौ । |
| ನಾವಿಬ್ಬರೂ ಕಾಡಿನಲ್ಲಿ ಸಂಚರಿಸುತ್ತೇವೆ. | - आवां वने सञ्चरावः । |
| ನೀವಿಬ್ಬರೂ ಯಾವಾಗ ಓದುತ್ತೀರಿ? | - युवां कदा पठथः ? |
| (ಎರಡು) ಗಡಿಗೆಗಳನ್ನು ಏತಕ್ಕೆ ಒಯ್ಯುತ್ತೀರಿ ? | - घटौ किं (किमर्थं) नयथः ? |
| ಮರದಿಂದ (ಎರಡು) ಹಣ್ಣುಗಳು ಬೀಳುತ್ತವೆ. | - वृक्षात् फले पततः |
| ಬ್ರಾಹ್ಮಣರಿಬ್ಬರೊಡನೆ (ನಾವಿಬ್ಬರೂ) ಹೋಗುತ್ತೇವೆ. | - ब्राह्मणाभ्यां सह गच्छावः |
| (ಎರಡು) ಗಡಿಗೆಗಳಲ್ಲಿ ನೀರು ನಿರ್ಮಲವಿಲ್ಲ. | - घटयोः जलं न स्वच्छम् । |

**ವಿಶೇಷ** : 'ಎರಡು' ಎಂಬ ಮಾತನ್ನು ಸೇರಿಸದಿದ್ದರೂ ದ್ವಿವಚನರೂಪ ದಿಂದಲೇ ಎರಡೆಂದು ತಿಳಿಯುತ್ತದೆ. ಕನ್ನಡದಲ್ಲಿ ದ್ವಿವಚನದ ರೂಪವಿಲ್ಲ ; ಸಂಸ್ಕೃತ ದಲ್ಲಿ ಬರೆಯುವಾಗ ಎರಡು ಎಂಬುದನ್ನು ತಿಳಿಸುವದಕ್ಕೆ ದ್ವಿವಚನವನ್ನೇ ಬಳಸಬೇಕು.

ಈ ಕೆಳಗಿನ ವಾಕ್ಯಗಳನ್ನು ನೆನಪಿಟ್ಟುಕೊಂಡು ಮುಂದಿನ ಅಭ್ಯಾಸಕ್ಕೆ ಉತ್ತರವನ್ನು ಕಂಡುಕೊಳ್ಳುವದಕ್ಕೆ ಪ್ರಯತ್ನಿಸಿರಿ :

| | | |
|---|---|---|
| स बालः गच्छति । | तौ बालो गच्छतः | ते बालाः गच्छन्ति । |
| त्वं गच्छसि । | युवां गच्छथः । | यूयं गच्छथ । |
| अहं गच्छामि । | आवां गच्छावः । | वयं गच्छामः । |

ಬಾಲಕಾಭ್ಯಾಮ್- (ಇಬ್ಬರು) ಹುಡುಗರಿಂದ, ಹುಡುಗರಿಗೆ, ಹುಡುಗರ ಕಡೆಯಿಂದ.

### ಅಭ್ಯಾಸ ೨೭

ಕ್ರಿಯಾಪದಗಳ ದ್ವಿವಚನರೂಪಗಳನ್ನು ಲಕ್ಷ್ಯವಿಡಿರಿ: ಪಠತಃ, ಪಠಥಃ, ಪಠಾವಃ-

**ಕನ್ನಡಿಸಿರಿ : १.** एतयोः गृहयोः जनाः न सन्ति । **२.** तौ बालौ कदापि न हसतः । **३.** आवाम् अनृतं न वदावः । **४.** युवां कुत्र उपविशथः ? **५.** वृद्धः पुत्राभ्यां सह प्रत्यागतः । **६.** फले कुत्र पतिते ? **७.** तेन ब्राह्मणाभ्यां किमपि न दत्तम् । **८.** युवां तत्र किं कुरुथः । **९.** आवाम् इतिहासं पठावः, तौ किमपि न कुरुतः । **१०.** कृष्णः सर्पः सरति, आवां पलायनं कुर्वः । **११.** युवाम् ते फले खादथः किम् ?

ಇಲ್ಲಿರುವವೆಲ್ಲ ದ್ವಿವಚನಗಳೆಂದು ಇಟ್ಟುಕೊಂಡು **ಸಂಸ್ಕೃತಕ್ಕೆ ತಿರುಗಿಸಿ :** ೧ ಆ ಹುಡುಗರು ದಶರಥನ ಮಕ್ಕಳು. ೨ ಅವನ ಮಕ್ಕಳು ಜಾಣರು (ಕುಶಲ). ೩ ನಿಮ್ಮ ಪುಸ್ತಕಗಳನ್ನು ಏನು ಮಾಡುತ್ತೀರಿ ? ೪ ಅವರು ನಾರಾಯಣನನ್ನು ನಮಸ್ಕರಿಸುತ್ತಾರೆ. ೫ ಆ ಮನೆಗಳು ಯಾರವು ?

## ಇಪ್ಪತ್ತೆಂಟನೆಯ ಪಾಠ

ಈ ಕೆಳಗಿನ ವಾಕ್ಯಗಳಲ್ಲಿ **च, वा** - ಎಂಬ ಅವ್ಯಯಗಳನ್ನು ಉಪಯೋಗಿಸಿರುವ ಬಗೆಯನ್ನೂ ಕ್ರಿಯಾಪದಗಳ ಪುರುಷ ವಚನಗಳನ್ನೂ ಲಕ್ಷ್ಯವಿಟ್ಟು ನೋಡಿ :[1]

त्वं च अहं च गच्छावः । रामश्च (रामः च) लक्ष्मणश्च (लक्ष्मणः च) गच्छतः । त्वं च बालकाश्च गच्छथ । त्वं च वयं च गच्छाम) । यूयं च वयं च गच्छामः । त्वं वा रामो वा गच्छति । रामो वा त्वं वा गच्छसि ।

**ವಿಶೇಷ : 'ಚ'** ಎಂಬ ಅವ್ಯಯದಿಂದ ಬೇರೆ ಬೇರೆ ಪುರುಷದ (person) ಉದ್ದೇಶಗಳನ್ನು (subjects) ಕೂಡಿಸಿದರೆ ಕ್ರಿಯಾಪದವನ್ನು ಕನ್ನಡದಂತೆಯೇ ಪ್ರಯೋಗಿಸಬಹುದು. ಆದರೆ **'ವಾ'** ಎಂಬ ಅವ್ಯಯವಿದ್ದರೆ ಕ್ರಿಯಾಪದಕ್ಕೆ ಹತ್ತಿರವಿರುವ ಉದ್ದೇಶದ ಪುರುಷವಚನಗಳೇ ಇರುತ್ತವೆ. ಆಗ ವಾಕ್ಯಗಳ ಅರ್ಥವನ್ನು ಕನ್ನಡಕ್ಕೆ ತಕ್ಕಂತೆಯೇ ಹೇಳಿಕೊಳ್ಳಬೇಕು. **'ತ್ವಂ ವಾ ರಾಮೋ ವಾ ಗಚ್ಛತಿ'** - ಇಲ್ಲಿ ರಾಮಃ ಎಂಬ ಉದ್ದೇಶವು ಹತ್ತಿರವಿದೆ; ಆದ್ದರಿಂದ ಗಚ್ಛತಿ ಎಂಬ (ಪ್ರಥಮಪುರುಷದ) ರೂಪವನ್ನೇ ಉಪಯೋಗಿಸಿದೆ. ಅರ್ಥವನ್ನು ಮಾತ್ರ 'ನೀನಾಗಲಿ ರಾಮನಾಗಲಿ' ಎಂದೇ ಹೇಳಬೇಕು.

### ಅಭ್ಯಾಸ ೨೮

ಇಲ್ಲಿರುವ ಸಂಸ್ಕೃತವಾಕ್ಯಗಳಿಗೆ ಅರ್ಥವನ್ನು ಇವುಗಳ ಮುಂದೆಯೇ ಬರೆದಿದೆ. ಆದರೆ ವಾಕ್ಯಗಳ ಕ್ರಮವನ್ನು ಬದಲಾಯಿಸಿದೆ. **ಅವನ್ನು ಹುಡುಕಿಕೊಂಡು ಅರ್ಥವನ್ನು ಹೇಳಿರಿ :**

**१.** कृष्णश्च अर्जुनश्च (कृष्णः अर्जुनश्च) सहैव गच्छतः । **२.** अहं च रामश्च मधुरे फले खादावः । **३.** वयं च यूयं च तस्मिन् उद्याने सञ्चरामः । **४.** अहं क्षीरं वा जलं वा (=क्षीरं जलं वा) पिबामि । **५.** गृहे क्षीरं वा जलं वा नास्ति । **६.** अहम् अत्र तिष्ठामि, तत्र वा गच्छामि (=अहम् अत्र तिष्ठामि, अथवा तत्र गच्छामि) । **७.** क्षीरम् उष्णं वा शीतं वा ? **८.** हे बालाः, अत्र आगच्छथ । **९.** मम पुस्तकं पश्यत । **१०.** यूयं कानि पुस्तकानि पठथ ? **११.** तेषु पुस्तकेषु सुन्दराणि चित्राणि सन्ति किम् ? **१२.** तस्मिन् ग्रामे केषु केषु देवालयेषु ब्राह्मणाः पूजयन्ति देवान् ? **१३.** केभ्यो वृक्षेभ्यः फलानि पतन्ति ? **१४.** ते युष्मान् किं वदन्ति ? **१५.** के एते बालाः ? **१६.** एतानि चित्राणि पश्यत । **१७.** किं यूयं तानि फलानि पश्यथ ? **१८.** केषु ग्रामेषु देवालयाः न सन्ति ?

---

1. ಹದಿನೆಂಟನೆಯ ಪಾಠವನ್ನು ಇನ್ನೊಮ್ಮೆ ಓದಿಕೊಳ್ಳಿರಿ.

೧. ನಾನೂ ರಾಮನೂ ಸಿಹಿಯಾದ (ಎರಡು) ಹಣ್ಣುಗಳನ್ನು ತಿನ್ನುತ್ತೇವೆ. ೨. ಮನೆಯಲ್ಲಿ ಹಾಲಾಗಲಿ ನೀರಾಗಲಿ ಇಲ್ಲ. ೩. ಕೃಷ್ಣನೂ ಅರ್ಜುನನೂ ಜೊತೆಯಲ್ಲಿ ಹೋಗುತ್ತಿದ್ದಾರೆ. ೪. ಹಾಲು ಬಿಸಿಯೊ, ತಣ್ಣಗಿದೆಯೊ ? ೫. ನಾವೂ ನೀವೂ ಆ ಉದ್ಯಾನದಲ್ಲಿ ಓಡಾಡುತ್ತಿರುತ್ತೇವೆ. ೬. ನಾನು ಇಲ್ಲಿ ನಿಂತಿರುತ್ತೇನೆ ಅಥವಾ ಅಲ್ಲಿಗೆ ಹೋಗುತ್ತೇನೆ. ೭. ಆ ಪುಸ್ತಕಗಳಲ್ಲಿ ಸುಂದರವಾದ ಚಿತ್ರಗಳಿವೆಯೇನು? ೮. ನಾನು ಹಾಲನ್ನಾಗಲಿ ನೀರನ್ನಾಗಲಿ ಕುಡಿಯುತ್ತೇನೆ. ೯. ಯಾವ ಮರಗಳಿಂದ ಹಣ್ಣುಗಳು ಬೀಳುತ್ತಿವೆ ? ೧೦. ಎಲೈ ಹುಡುಗರಿರಾ, ಇಲ್ಲಿ ಬನ್ನಿರಿ. ೧೧. ನನ್ನ ಪುಸ್ತಕವನ್ನು ನೋಡಿರಿ. ೧೨. ನೀವೂ ಯಾವ ಪುಸ್ತಕಗಳನ್ನು ಓದುತ್ತೀರಿ ? ೧೩. ಆ ಊರಿನಲ್ಲಿ ಯಾವ ದೇವಾಲಯಗಳಲ್ಲಿ ಬ್ರಾಹ್ಮಣರು ದೇವತೆಗಳನ್ನು ಪೂಜಿಸುತ್ತಾರೆ ? ೧೪. ಅವರು ನಿಮಗೆ ಏನು ಹೇಳುತ್ತಾರೆ ? ೧೫. ಈ ಹುಡುಗರು ಯಾರು ? ೧೬. ಈ ಚಿತ್ರಗಳನ್ನು ನೋಡಿರಿ. ೧೭. ನೀವು ಆ ಹಣ್ಣುಗಳನ್ನು ಕಾಣುತ್ತಿದೀರೊ? ೧೮. ಯಾವ ಊರುಗಳಲ್ಲಿ ದೇವಾಲಯಗಳಿಲ್ಲ ?

## ಇಪ್ಪತ್ತೊಂಬತ್ತನೆಯ ಪಾಠ

ಪದದ ಕೊನೆಯಲ್ಲಿರುವ ವಿಸರ್ಗವು ತನ್ನ ಹಿಂದಿನ ಅಕಾರದೊಡನೆ ಸೇರಿ ಓಕಾರವಾಗುವ ಉದಾಹರಣೆಗಳನ್ನು ಹದಿನಾರನೆಯ ಪಾಠದಿಂದ ಈವರೆಗೆ ಬಹಳವಾಗಿ ಕೊಟ್ಟಿರುತ್ತೇವೆ. ಈಗ ವಿಸರ್ಗವು ಲೋಪವಾಗುವ ಕೆಲವು ಉದಾಹರಣೆಗಳನ್ನು ಕೊಡುವೆವು.

राम आगच्छति वा न वा ? कृष्ण इतिहासं पठति । मार्जार उष्णं क्षीरं पिबति । भरत ऊर्मिलां पश्यति । वृद्ध ऋषिः । मम कृष्ण एव गतिः । स दरिद्र ऐश्वर्यम् इच्छति । सूद (ಅಡಿಗೆಯವನು) ओदनं पचति । रुग्ण (ರೋಗಿಯು) औषधं न पिबति । वानरा आगताः । आचार्या इति वदन्ति । भक्ता ईश्वरं भजन्ति । आचार्य आगच्छति, शिष्या उत्तिष्ठन्ति । दासा ऊर्मिलाया वस्त्राणि क्षालयन्ति । रुग्णा औषधेन स्वस्था भवन्ति । ब्राह्मणा गच्छन्ति देवालयम् । मार्जारा घृतं पिबन्ति । मूषका दशन्ति (ಕಡಿಯುತ್ತವೆ) वस्त्राणि । दरिद्रा धनम् इच्छन्ति । किमर्थं ते बाला हसन्ति ? अद्यापि तस्य पुत्रा बालाः । चारा (ಸೇವಕರು) भवनं गताः । एते बाला मधुरं भोजनम् इच्छन्ति । पापा यमदूतान् पश्यन्ति । वानरा लक्ष्मणं नमन्ति । बाला वृद्धम् एवम् वदन्ति ।

### ಅಭ್ಯಾಸ ೨೯

ಮೇಲೆ ಕೊಟ್ಟಿರುವ ವಾಕ್ಯಗಳಲ್ಲಿ ಬಿಟ್ಟಿರುವ ವಿಸರ್ಗಗಳನ್ನು ಸೇರಿಸಿಕೊಂಡು ಓದಿರಿ. **ಇವನ್ನು ಕನ್ನಡಿಸಿರಿ.**

## ಮೂವತ್ತನೆಯ ಪಾಠ

ಇಲ್ಲಿ ಸಂಧಿಯಾಗಿರುವ ಸ್ಥಳಗಳನ್ನು ಗುರ್ತಿಸಿರಿ. **ಅರ್ಥವನ್ನು ಊಹಿಸಿರಿ :**

**१.** रामश्च लक्ष्मणश्च भरतश्च शत्रुघ्नश्च दशरथस्य पुत्राः । **२.** दशरथस्तेषां तातः । **३.** दशरथो भूपः । **४.** वसिष्ठस्तस्य पुरोहितः । **५.** वसिष्ठ इदानीम् अत्राऽऽगतः । **६.** दशरथस्य पुत्रा उत्तिष्ठन्ति । **७.** आचार्य आसने उपविष्टः । **८.** बालकास्तिष्ठन्त्येव । **९.** आचार्यः शिष्येभ्यः पुस्तकं यच्छति । **१०.** आचार्य इदानीं रामं लक्ष्मणं च पाठयति (ಓದಿಸುತ್ತಾನೆ) । **११.** तौ तम् अनु (ಅವನನ್ನನುಸರಿಸಿ, ಅವನ ಹಿಂದೆಯೇ) पठन्ति । **१२.** शिष्याष्टीकां पठन्ति ।

**ರಾಮಶ್ಚ (ರಾಮಃ ಚ)** - ರಾಮನೂ ; **ದಶರಥಸ್ತೇಷಾಂ (ದಶರಥಃ ತೇಷಾಂ)** - ದಶರಥನು ಅವರ ; **ಅತ್ರಾऽऽಗತಃ (ಅತ್ರ ಆಗತಃ)** ಇಲ್ಲಿಗೆ ಬಂದನು ; **ತಿಷ್ಠನ್ತ್ಯೇವ (ತಿಷ್ಠನ್ತಿ ಏವ)** - ನಿಂತೇ ಇದಾರೆ ; **ಶಿಷ್ಯಾಷ್ಟೀಕಾಂ (ಶಿಷ್ಯಾಃ ಟೀಕಾಂ)** - ಶಿಷ್ಯರು ಟೀಕೆಯನ್ನು.

## ಮೂವತ್ತೊಂದನೆಯ ಪಾಠ

ಇದುವರೆಗೆ ನೀವು ಕಲಿತಿರುವ ಮುಖ್ಯ ಶಬ್ದರೂಪಗಳನ್ನು ಇಲ್ಲಿ ಬರೆದಿದೆ. ಇವುಗಳನ್ನು ಕ್ರಮಕ್ರಮವಾಗಿ ಕಂಠಪಾಠಮಾಡಿಕೊಳ್ಳಿ, ಸಂಸ್ಕೃತವಾಕ್ಯಗಳನ್ನು ಬರೆಯ ಬೇಕಾದಾಗ ಈ ರೂಪಗಳನ್ನು ನೋಡಿಕೊಳ್ಳಿ.

| ಅಕಾರಾನ್ತ ಪುಲ್ಲಿಂಗ | | | ಅಕಾರಾನ್ತ ನಪುಂಸಕಲಿಂಗ | | |
|---|---|---|---|---|---|
| **१.** देवः | देवौ | देवाः | **१.** अम्बरम् | अम्बरे | अम्बराणि |
| सं. देव | देवौ | देवाः | सं. अम्बर | अम्बरे | अम्बराणि |
| **२.** देवम् | देवौ | देवान् | **२.** अम्बरम् | अम्बरे | अम्बराणि |
| **३.** देवेन | देवाभ्याम् | देवैः | **३.** अम्बरेण | अम्बराभ्याम् | अम्बरैः |
| **४.** देवाय | देवाभ्याम् | देवेभ्यः | **४.** अम्बराय | अम्बराभ्याम् | अम्बरेभ्यः |
| **५.** देवात् | देवाभ्याम् | देवेभ्यः | **५.** अम्बरात् | अम्बराभ्याम् | अम्बरेभ्यः |
| **६.** देवस्य | देवयोः | देवानाम् | **६.** अम्बरस्य | अम्बरयोः | अम्बराणाम् |
| **७.** देवे | देवयोः | | **७.** अम्बरे | अम्बरयोः | |

**ವಿಶೇಷ :-** (೧) ವಿಶೇಷಣಗಳು ಪುಲ್ಲಿಂಗದಲ್ಲಿ 'ದೇವ' ಶಬ್ದದಂತೆ, ನಪುಂಸಕಲಿಂಗದಲ್ಲಿ 'ಅಮ್ಬರ' ಶಬ್ದದಂತೆ.

(೨) ನಪುಂಸಕಲಿಂಗಶಬ್ದಗಳಿಗೆ ತೃತೀಯಾವಿಭಕ್ತಿಯಿಂದ ಹಿಡಿದು ಕೊನೆಯ ವರೆಗೂ ಪುಲ್ಲಿಂಗಶಬ್ದದಂತೆಯೇ ರೂಪಗಳು.

| ನೀಲಃ (ಮೇಘಃ) | | | ನೀಲಮ್ (ಅಮ್ಬರಮ್) | | |
|---|---|---|---|---|---|
| १. नीलः | नीलौ | नीलाः | १. नीलम् | नीले | नीलानि |
| सं. नील | नीलौ | नीलाः | सं. नील | नीले | नीलानि |
| २. नीलम् | नीलौ | नीलान् | २. नीलम् | नीले | नीलानि |
| ३. नीलेन | नीलाभ्याम् | नीलैः | ३. नीलेन | नीलाभ्याम् | नीलैः |
| ४. नीलाय | नीलाभ्याम् | नीलैभ्यः | ४. नीलाय | नीलाभ्याम् | नीलेभ्यः |
| ५. नीलात् | नीलाभ्याम् | नीलेभ्यः | ५. नीलात् | नीलाभ्याम् | नीलेभ्यः |
| ६. नीलस्य | नीलयोः | नीलानाम् | ६. नीलस्य | नीलयोः | नीलानाम् |
| ७. नीले | नीलयोः | नीलेषु | ७. नीले | नीलयोः | नीलेषु |

## ಸರ್ವನಾಮಗಳು

| ಅಸ್ಮದ್ (ನಾನು) | | | ಯುಷ್ಮದ್ (ನೀನು) | | |
|---|---|---|---|---|---|
| १. अहम् | आवाम् | वयम् | १. त्वम् | युवाम् | यूयम् |
| २. माम् | आवाम् | अस्मान् | २. त्वाम् | युवाम् | युष्मान् |
| मा | नौ | नः | त्वा | वाम् | वः |
| ३. मया | आवाभ्याम् | अस्माभिः | ३. त्वया | युवाभ्याम् | युष्माभिः |
| ४. मह्यम् | आवाभ्याम् | अस्मभ्यम् | ४. तुभ्यम् | युवाभ्याम् | युष्माभ्यम् |
| मे | नौ | नः | ते | वाम् | वः |
| ५. मत् | आवाभ्याम् | अस्मत् | ५. त्वत् | युवाभ्याम् | युष्मत् |
| ६. मम | आवयोः | अस्माकम् | ६. तव | युवयोः | युष्माकम् |
| मे | नौ | नः | ते | वाम् | वः |
| ७. मयि | आवयोः | अस्मासु | ७. त्वयि | युवयोः | युष्मासु |

| ಕಿಮ್ (ಪುಲ್ಲಿಂಗ) | | | ಕಿಮ್ (ನಪುಂಸಕಲಿಂಗ) | | |
|---|---|---|---|---|---|
| १. कः | कौ | के | १. किम् | के | कानि |
| २. कम् | कौ | कान् | २. किम् | के | कानि |
| ३. केन | काभ्याम् | कैः | ३. केन | काभ्याम् | कैः |
| ४. कस्मै | काभ्याम् | केभ्यः | ४. कस्मै | काभ्याम् | केभ्यः |
| ५. कस्मात् | काभ्याम् | कैभ्यः | ५. कस्मात् | काभ्याम् | केभ्यः |
| ६. कस्य | कयोः | केषाम् | ६. कस्य | कयोः | केषाम् |
| ७. कस्मिन् | कयोः | केषु | ७. कस्मिन् | कयोः | केषु |

| ತತ್ - ಪುಲ್ಲಿಂಗ | | | ತತ್ - ನಪುಂಸಕಲಿಂಗ | | |
|---|---|---|---|---|---|
| १. सः | तौ | ते | १. तत् | ते | तानि |
| २. तम् | तौ | तान् | २. तत् | ते | तानि |
| ३. तेन | ताभ्याम् | तैः | ३. तेन | ताभ्याम् | तैः |
| ४. तस्मै | ताभ्याम् | तेभ्यः | ४. तस्मै | ताभ्याम् | तेभ्यः |
| ५. तस्मात् | ताभ्याम् | तेभ्यः | ५. तस्मात् | ताभ्याम् | तेभ्यः |
| ६. तस्य | तयोः | तेषाम् | ६. तस्य | तयोः | तेषाम् |
| ७. तस्मिन् | तयोः | तेषु | ७. तस्मिन् | तयोः | तेषु |

### ಏತತ್ - ಪುಲ್ಲಿಂಗ

१. एषः, एतौ, एते । २. एतम्-एनम्, एतौ-एनौ, एतान्-एनान् । ३. एतेन-एनेन, एताभ्याम्, एतैः । ४. एतस्मै, एताभ्याम्, एतेभ्यः । ५. एतस्मात्, एताभ्याम्, एतेभ्यः। ६. एतस्य, एतयोः -एनयोः, एतेषाम् । ७. एतस्मिन्, एतयोः-एनयोः, एतेषु ।

### ಏತತ್ - ನಪುಂಸಕಲಿಂಗ

१. एतत्, एते, एतानि। २. एतत्, एते, एतानि। ಮಿಕ್ಕದ್ದು ಪುಲ್ಲಿಂಗದಂತೆ.

**ವಿಶೇಷ :** ಇಲ್ಲಿ ಕೆಲವು ಸರ್ವನಾಮಗಳನ್ನು ಮಾತ್ರ ಕೊಟ್ಟಿದೆ. ಇವುಗಳಿಗೆ ಕೆಲವು ವಿಭಕ್ತಿ ರೂಪಗಳು ಎರಡೆರಡನ್ನು ಕೊಟ್ಟಿದೆಯಷ್ಟೆ? ಇವುಗಳ ವಿಷಯವನ್ನು ಎರಡನೆಯ ಪುಸ್ತಕದಲ್ಲಿ ವಿವರಿಸುತ್ತೇವೆ.

### ಕ್ರಿಯಾಪದಗಳು

ವರ್ತಮಾನಕಾಲದ ಕ್ರಿಯಾಪದಗಳ ರೂಪಗಳನ್ನು ಇಪ್ಪತ್ತೇಳನೆಯ ಪಾಠದಲ್ಲಿ ಆಗಲೇ ತೋರಿಸಿಕೊಟ್ಟಿರುತ್ತೇವೆ. ನೆನಪಿಡುವದಕ್ಕೆ ಅಕೂಲವಾಗಲೆಂದು ಇಲ್ಲಿ ಮತ್ತೊಮ್ಮೆ **ಪಶ್ಯತಿ, ತಿಷ್ಠತಿ** - ಎಂಬ ಕ್ರಿಯಾಪದಗಳ ರೂಪಗಳನ್ನು ಸಂಗ್ರಹಿಸಿ ತೋರಿಸುವೆವು :

| ವರ್ತಮಾನ | | | ವರ್ತಮಾನ | | |
|---|---|---|---|---|---|
| पश्यति | पश्यतः | पश्यन्ति | तिष्ठति | तिष्ठतः | तिष्ठन्ति |
| पश्यसि | पश्यथः | पश्यथ | तिष्ठसि | तिष्ठथः | तिष्ठथ |
| पश्यामि | पश्यावः | पश्यामः | तिष्ठामि | तिष्ठावः | तिष्ठामः |

**ವಿಶೇಷ :** ಪಶ್ಯಾಮಿ-ನೋಡುತ್ತೇನೆ, ನೋಡುತ್ತಿದೇನೆ ; ತಿಷ್ಠತಿ - ನಿಲ್ಲುತ್ತಾನೆ, ನಿಲ್ಲುತ್ತಿದಾನೆ, ನಿಂತಿರುತ್ತಾನೆ. ಹೀಗೆ ವರ್ತಮಾನ ಕ್ರಿಯಾಪದಗಳಿಗೆ ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆಯ ಅರ್ಥವನ್ನು ಮಾಡಿಕೊಳ್ಳಬೇಕು. ಇವಕ್ಕೆ ಲಿಂಗಭೇದವಿಲ್ಲ. ಹತ್ತನೆಯ ಪಾಠವನ್ನು ನೋಡಿರಿ.

## ಮೂವತ್ತೆರಡನೆಯ ಪಾಠ

ಈ ಕೆಳಗೆ ಈ-ಕಾರಾಂತ ಶಬ್ದದ ರೂಪಗಳನ್ನು ತಿಳಿಸುವ ಪದಗಳನ್ನು ಬಳಸಿದ ವಾಕ್ಯಗಳಿವೆ :

कैकेयी दशरथस्य प्रिया भार्या । - ಕೈಕೇಯಿಯು ದಶರಥನ ಪ್ರಿಯಳಾದ ಹೆಂಡತಿ.

दशरथः भार्यां कैकेयीम् आह्वयति। -ದಶರಥನು ಹೆಂಡತಿಯಾದ ಕೈಕೇಯಿಯನ್ನು ಕರೆಯುತ್ತಾನೆ.

कैकेय्यै दशरथेन पुरा द्वौ वरौ दत्तौ । - ಕೈಕೇಯಿಗೆ ದಶರಥನಿಂದ ಪೂರ್ವದಲ್ಲಿ ಎರಡು ವರಗಳು ಕೊಡಲ್ಪಟ್ಟವು.

भार्यया कैकेय्या किं कृतम् ? -ಹೆಂಡತಿಯಾದ ಕೈಕೇಯಿಯಿಂದ ಏನು ಮಾಡಲ್ಪಟ್ಟಿತು ?

मन्थरा कैकेयीम् आगता । -ಮಂಥರೆಯು ಕೈಕೇಯಿಯ ಬಳಿಗೆ ಬಂದಳು.

कैकेय्या मन्थरायै रत्नमाला दत्ता । -ಕೈಕೇಯಿಯಿಂದ ಮಂಥರೆಗೆ ರತ್ನಮಾಲೆಯು ಕೊಡಲ್ಪಟ್ಟಿತು.

अयोध्यायां प्रजाः क्रन्दन्ति । - ಅಯೋಧ್ಯೆಯಲ್ಲಿ ಪ್ರಜೆಗಳು ಅಳುತ್ತಿದ್ದಾರೆ.

रामः अयोध्यायाः निर्गतः । - ರಾಮನು ಅಯೋಧ್ಯೆಯಿಂದ ಹೊರಹೊರಟನು.

**ವಿಶೇಷ :** ಸಂಸ್ಕೃತದಲ್ಲಿ ಆಕಾರಾಂತ - ಈಕಾರಾಂತಶಬ್ದಗಳು ಬಲುಮಟ್ಟಿಗೆ ಸ್ತ್ರೀಲಿಂಗವಾಗಿರುತ್ತವೆ. ಅವುಗಳು ಕನ್ನಡದಲ್ಲಿ ಬಳಸಲ್ಪಡುವಾಗ ಆಕಾರಾಂತ ಸ್ತ್ರೀಲಿಂಗಗಳು ಎಕಾರಾಂತವಾಗುತ್ತವೆ. ಈಕಾರಾಂತಗಳು ಇಕಾರಾಂತವಾಗುವವು. ಉದಾ. : ಭಾರ್ಯೆ, ಕೌಸಲ್ಯೆ, ರಮೆ, ಮಾಲೆ, ಶಾಲೆ, ಕೈಕೇಯಿ, ನದಿ, ನಾರಿ, ಸಖಿ.

**ಆಕಾರಾಂತ ಮತ್ತು ಈಕಾರಾಂತದ ಶಬ್ದಗಳ ಏಕವಚನರೂಪಗಳಿವು :**

१. सेना, सेने, सेनाम्, सेनाया, सेनायै, सेनायाः, सेनायाः, सेनायाम् ।

२. नदी, नदि, नदीम्, नद्या, नद्यै, नद्याः, नद्याः, नद्याम् ।

### ಅಭ್ಯಾಸ ೩೦

**ಕನ್ನಡಿಸಿರಿ :** १. अस्मित कोसलेषु[1] अयोध्या नाम (ಎಂಬ) नगरी । २. तत्र दशरथो नाम भूपः प्रतिवसति । ३. कौसल्या दशरथस्य ज्येष्ठा भार्या । ४. तस्याः पुत्रो रामः । ५. सुमित्रायाः पुत्रौ लक्ष्मणः शत्रुघ्नश्च इति । ६. दशरथः प्रियां भार्यां वदति - अरे, कैकेयि, किं इच्छसि ?

1. ದೇಶಗಳ ಹೆಸರು ಸಂಸ್ಕೃತದಲ್ಲಿ ಬಹುವಚನದಲ್ಲಿರುವದೇ ಹೆಚ್ಚು. ಅವು ಅಲ್ಲಿಯ ಜನರನ್ನು ಹೇಳುತ್ತವೆ. ಉದಾ. : **ಅಙ್ಗಾಃ, ವಙ್ಗಾಃ, ಕಲಿಙ್ಗಾಃ.**

## ಮೂವತ್ತಮೂರನೆಯ ಪಾಠ

ಇಲ್ಲಿ ಕೆಲವು ಸಂಖ್ಯಾವಾಚಕಗಳನ್ನು ಕೊಟ್ಟಿದೆ :

१. एकः, एकम्, एकेन, एकस्मै, एकस्मात्, एकस्य, एकस्मिन्

२. एका, एकाम्, एकया, एकस्यै, एकस्याः, एकस्याः, एकस्याम्

१. द्वौ, द्वौ, द्वाभ्याम्, द्वाभ्याम्, द्वाभ्याम्, द्वयोः, द्वयोः

२. द्वे, द्वे, द्वाभ्याम्, द्वाभ्याम्, द्वाभ्याम्, द्वयोः, द्वयोः

१. त्रयः, त्रीन्, त्रिभिः, त्रिभ्यः, त्रिभ्यः, त्रयाणाम्, त्रिषु

२. तिस्रः, तिस्रः, तिसृभिः, तिसृभ्यः, तिसृभ्यः, तिसृणाम्, तिसृषु

१. चत्वारः, चतुरः, चतुर्भिः, चतुर्भ्यः, चतुर्भ्यः, चतुर्णाम्, चतुर्षु

२. चतस्रः, चतस्रः, चतसृभिः, चतुसृभ्यः, चतसृभ्यः, चतुसृणाम्, चतसृषु

೧. ಮೇಲೆ ಕೊಟ್ಟಿರುವ ಶಬ್ದಗಳಲ್ಲಿ (१)ಎಂದು ಗುರುತುಮಾಡಿರುವವು ಪುಲ್ಲಿಂಗ, (२) ಎಂದು ಗುರುತುಮಾಡಿರುವವು ಸ್ತ್ರೀಲಿಂಗ. **'ಏಕ'** ಶಬ್ದವು ಏಕವಚನ, **'ದ್ವಿ'**ಶಬ್ದವು ದ್ವಿವಚನ, ಮಿಕ್ಕವು ಯಾವಾಗಲೂ ಬಹುವಚನ - ಎಂಬುದು ಅವುಗಳ ಅರ್ಥದಿಂದಲೇ ಗೊತ್ತಾಗುತ್ತದೆ. ೨. ನಪುಂಸಕಲಿಂಗದಲ್ಲಿ ಪ್ರಥಮಾದ್ವಿತೀಯಾ ವಿಭಕ್ತಿಗಳೆರಡಕ್ಕೂ ಒಂದೇ ರೂಪ ; ಏಕಮ್ (ಒಂದು, ಒಂದನ್ನು), ದ್ವೇ (ಎರಡು, ಎರಡನ್ನು), ತ್ರೀಣಿ (ಮೂರು, ಮೂರನ್ನ), ಚತ್ವಾರಿ (ನಾಲ್ಕು, ನಾಲ್ಕನ್ನು). ಮಿಕ್ಕ ವಿಭಕ್ತಿಗಳು ಆಯಾ ಶಬ್ದಗಳ ಪುಲ್ಲಿಂಗದಂತೆ.

### ಅಭ್ಯಾಸ ೩೧

**ಇವುಗಳನ್ನು ಕನ್ನಡಿಸಿರಿ :**

**१.** चत्वारो वेदाः सन्ति ; ऋग्वेदः, यजुर्वेदः, सामवेदः, अथर्व वेदश्च इति । **२.** शाण्डिल्यः चतुर्षु वेदेषु निपुणः । **३.** दशरथस्य कति (ಎಷ್ಟು ಜನ) भार्याः ? तिस्रः । **४.** मनुष्यस्य द्वौ हस्तौ स्तः (ಇರುತ್ತವೆ) । **५.** याज्ञवल्क्यस्य द्वे भार्ये, कात्यायिनी, मैत्रेयी च इति । **६.** द्वाभ्यां पक्षाभ्यां[1] एको मासो भवति । **७.** तिसृषु भार्यासु का (ಯಾವಳು) ज्येष्ठा ? **८.** सीतायाः द्वौ पुत्रौ कौ ? **९.** तत्र त्रीणि फलानि सन्ति । **१०.** त्रिषु लोकेषु सर्वज्ञः कोऽस्ति ?

---

1. ಪಕ್ಷಾಭ್ಯಾಮ್ - 'ಪಕ್ಷಗಳಿಂದ' ಎಂದು ಅಕ್ಷರಾರ್ಥ; ಇಲ್ಲಿ 'ಪಕ್ಷಗಳಿಗೆ' ಎಂದು ಕನ್ನಡಿಸಬೇಕು.

**ಸಂಸ್ಕೃತಕ್ಕೆ ತಿರುಗಿಸಿ :** ೧. ನನ್ನ ಹತ್ತಿರ ನಾಲ್ಕು ಹಣ್ಣುಗಳು ಇವೆ. ೨. ಹುಲಿಗೆ (೬)* ನಾಲ್ಕು ಕಾಲುಗಳು. ೩. ಇಲ್ಲಿ ನಾಲ್ವರು ಹುಡುಗಿಯರು ಬರುತ್ತಿದ್ದಾರೆ. ೪. ನದಿಯಲ್ಲಿ ಎಷ್ಟು ಮೀನುಗಳು ಓಡಾಡುತ್ತಿವೆ? ೫. ಅವನು ಹೆಂಡತಿಗೆ (೪) ಒಡವೆಗಳನ್ನು (भूषणानि) ತರುತ್ತಾನೆ.

[*ಇಲ್ಲಿ ಕಂಸದಲ್ಲಿ ಹಾಕಿರುವ ಸಂಖ್ಯೆಗಳು ಆಯಾ ವಿಭಕ್ತಿರೂಪವು ಬೇಕೆಂದು ಸೂಚಿಸುತ್ತದೆ. (೬) ಎಂದರೆ ಷಷ್ಠೀವಿಭಕ್ತಿ ಎಂದರ್ಥ. ]

## ಮೂವತ್ತನಾಲ್ಕನೆಯ ಪಾಠ

ಇಲ್ಲಿ ಆಕಾರಾಂತ ಮತ್ತು ಈಕಾರಾಂತ ಸ್ತ್ರೀಲಿಂಗ ಶಬ್ದಗಳ ರೂಪಗಳನ್ನು ಒಳಗೊಂಡಿರುವ ವಾಕ್ಯಗಳನ್ನು ಕೊಟ್ಟಿದೆ. **ಕಿಮ್, ತತ್** ಶಬ್ದಗಳ ಸ್ತ್ರೀಲಿಂಗ ರೂಪಗಳೂ ಅವುಗಳಲ್ಲಿವೆ.

ಈ ವಾಕ್ಯಗಳ ಅರ್ಥವನ್ನು ಕೆಳಗಡೆಯಲ್ಲಿ ಕನ್ನಡದಲ್ಲಿಟ್ಟಿದೆ. ಮುಂದೆ ಸಂಸ್ಕೃತ ವಾಕ್ಯಗಳನ್ನು ಬರೆಯುವಾಗ ಈ ರೂಪಗಳನ್ನು ಮಾದರಿಯಾಗಿಟ್ಟುಕೊಳ್ಳಿರಿ :

**१.** का सा तस्य जननी ? **२.** के ते बालिके ? **३.** ता बालिकाः काः ? **४.**कां नदीं गतः सः ? **५.** तस्मिन् देशे के नद्यौ पश्यामः ? **६.** मह्यं तिस्रो लेखनीः प्रयच्छ । **७** का मालाः आनयति दासी ? **८** कया लेखिन्या (काभ्यां लेखिनीभ्याम्, काभिः लेखिनीभिः) लिखसि त्वम् ? **९.** काभ्यः काभ्यः भार्याभ्यः कथं दत्तं पायसम् ? **१०.** काभ्यो नगरीभ्यो आगच्छन्ति ते ? **११.** तासां नारीणां सकाशात्[1] का दासी आगता ? **१२.** कस्यै बालिकायै (काभ्यो बालिकाभ्यो) यच्छसि मालाः ? **१३.** कस्याः नद्याः स्वच्छं जलम् ? कस्यां नद्यां नक्राः सन्ति ? **१४.** कासु नगरीषु वाप्यः सन्ति ? **१५.** तिसृषु भार्यासु का ज्येष्ठा ? का कनिष्ठा ?

೧. ಅವನ (ಹಡೆದ) ತಾಯಿ ಯಾರು ? ೨. ಆ (ಇಬ್ಬರು) ಹುಡುಗಿಯರು ಯಾರು? ೩. ಆ ಹುಡುಗಿಯರು ಯಾರು ? ೪. ಅವನು ಯಾವ ನದಿಗೆ ಹೋದನು ? ೫. ಆ ದೇಶದಲ್ಲಿ ಯಾವ (ಎರಡು) ನದಿಗಳನ್ನು ಕಾಣುತ್ತೇವೆ. ೬. ನನಗೆ ಮೂರು ಲೇಖನಿಗಳನ್ನು ಕೊಡು. ೭ ಯಾವ ಮಾಲೆಗಳನ್ನು ದಾಸಿಯು ತರುತ್ತಾಳೆ ? ೮ ಯಾವ ಲೇಖನಿಯಿಂದ (ಯಾವ ಎರಡು ಲೇಖನಿಗಳಿಂದ, ಯಾವ ಲೇಖನಿಗಳಿಂದ) ನೀನು ಬರೆಯುತ್ತೀಯೆ? ೯. ಪಾಯಸವು ಯಾವ ಯಾವ

1. ಷಷ್ಠೀವಿಭಕ್ತಿಗೆ ಸಕಾಶಾತ್ (ಸಮೀಪದಿಂದ) ಎಂಬ ಮಾತನ್ನು ಸೇರಿಸಿದರೆ ಪಂಚಮೀ ವಿಭಕ್ತಿಯ ಅರ್ಥ. ನಾರೀಣಾಂ ಸಕಾಶಾತ್ - ನಾರೀಭ್ಯಃ.

ಹೆಂಡತಿಯರಿಗೆ ಹೇಗೆ ಕೊಡಲ್ಪಟ್ಟಿತು ? ೧೦ ಯಾವ ನಗರಿಗಳಿಂದವರು ಬರುತ್ತಿದಾರೆ ? ೧೧. ಆ ನಾರಿ(ಸ್ತ್ರೀ)ಯರ ಕಡೆಯಿಂದ ಯಾವ ದಾಸಿಯು ಬಂದಳು? ೧೨. ಮಾಲೆಗಳನ್ನು ಯಾವ ಹುಡುಗಿಗೆ (ಯಾವ ಹುಡುಗಿಯರಿಗೆ) ಕೊಡುತ್ತೀಯೆ? ೧೩. ಯಾವ ನದಿಯ ನೀರು ನಿರ್ಮಲ ? ೧೪. ಯಾವ ನದಿಯಲ್ಲಿ ಮೊಸಳೆಗಳಿವೆ ? ೧೫ ದಶರಥನ ಮೂವರು ಹೆಂಡಿರಲ್ಲಿ ಯಾವಳು ಹಿರಿಯವಳು? ಯಾವಳು ಕಿರಿಯವಳು ?

## ಅಭ್ಯಾಸ ೩೨

ಇಲ್ಲಿರುವ ದ್ವಿವಚನಗಳನ್ನು **ಕನ್ನಡಿಸುವಾಗ** 'ಎರಡು' ಎಂಬ ಮಾತನ್ನು ನೇರಿಸಿಕೊಳ್ಳಿರಿ :

१. भूपः काभ्यां भार्याभ्यां सह आगतः ?

२. काभ्यां नदीभ्यां जलम् आनयन्ति ?

३. कयोः नगर्योः स्तः तौ भूपौ ?

४. के ते वाप्यौ ?

**ಸಂಸ್ಕೃತಕ್ಕೆ ತಿರುಗಿಸಿರಿ :** ೧. ಆ (ಎರಡು) ಸೇನೆಗಳ ನಾಯಕರುಗಳು ಯಾರು ಯಾರು? ೨ ಆ (ಎರಡು) ಲೇಖನಿಗಳಿಂದ ಸುಖವಾಗಿ (सुखेन) ಬರೆಯುತ್ತೇನೆ. ೩ ಆ ಎರಡು ಪಾಠಶಾಲೆಗಳಲ್ಲಿ ಸಂಸ್ಕೃತವನ್ನೇ ಕಲಿಸುತ್ತಾರೆ (बोधयन्ति). ೪. ಆ (ಇಬ್ಬರು) ಹೆಂಗಸರೂ ಹೂದೋಟದಲ್ಲಿ ಆಡ್ಡಾಡುತ್ತಿದಾರೆ.

## ಮೂವತ್ತೈದನೆಯ ಪಾಠ

| | |
|---|---|
| को भवान् ? अत्र किं करोति ? | - ನೀನು ಯಾರು ? ಇಲ್ಲಿ ಏನು ಮಾಡುತ್ತಿದ್ದೀಯೆ? |
| अहं एकश्छात्रः, भगवद्गीतां पठामि | - ನಾನೊಬ್ಬ ವಿದ್ಯಾರ್ಥಿ, ಭಗವದ್ಗೀತೆಯನ್ನು ಓದುತ್ತಿದ್ದೇನೆ. |
| भगवद्गीता केन रचिता ? | - ಭಗವದ್ಗೀತೆಯು ಯಾರಿಂದ ರಚಿಸಲ್ಪಟ್ಟಿತು? |
| सा भगवता व्यासेन रचिता । | - ಅದು ಪೂಜ್ಯನಾದ ವ್ಯಾಸನಿಂದ ರಚಿತವಾಯಿತು. |

| | |
|---|---|
| भगवान् कृष्णः अर्जुनाय ताम् उपदिष्टवान् । | - ಭಗವಂತನಾದ ಕೃಷ್ಣನು ಅದನ್ನು ಅರ್ಜುನನಿಗೆ ಉಪದೇಶಿಸಿದನು. |
| अर्जुनो भगवन्तं किं पृष्टवान् ? | - ಅರ್ಜುನನು ಭಗವಂತನನ್ನು ಏನನ್ನು ಕೇಳಿದನು? |
| अर्जुनेन भगवान् एवं पृष्टः । | - ಅರ್ಜುನನಿಂದ ಭಗವಂತನು ಹೀಗೆ ಕೇಳಲ್ಪಟ್ಟನು. |

ಮೇಲಿನ ವಾಕ್ಯಗಳಲ್ಲಿ **'ವತ್'** ಪ್ರತ್ಯಯವುಳ್ಳ ಕೆಲವು ಶಬ್ದರೂಪಗಳನ್ನು ಪ್ರಯೋಗಿಸಿದೆ **'ಭಗವಾನ್'** ಎಂಬ ವಿಶೇಷಣವನ್ನು ದೇವರಿಗೂ ಪೂಜ್ಯರಾದ ಜನರಿಗೂ ಉಪಯೋಗಿಸುವರು. **'ಭವಾನ್'** ಎಂಬುದನ್ನು 'ನೀನು' ಎಂಬರ್ಥವಿರುವಾಗ ಉಪಯೋಗಿಸುವರು. ಇದಕ್ಕೆ ಪ್ರಥಮಪುರುಷದ ಕ್ರಿಯಾಪದವೇ ಬೇಕು. ಉದಾ : 'ನೀನು ಹೋಗುತ್ತೀಯೆ' ಎಂಬುದನ್ನು ಸಂಸ್ಕೃತದಲ್ಲಿ **'ತ್ವಂ ಗಚ್ಛಸಿ'** ಎಂದಾಗಲಿ, **'ಭವಾನ್ ಗಚ್ಛತಿ'** ಎಂದಾಗಲಿ ಹೇಳಬಹುದು. ಆದರೆ **'ಭವಾನ್ ಗಚ್ಛಸಿ'** ಎಂಬುದು ತಪ್ಪು. ಇದು ಗೌರವವನ್ನು ತೋರಿಸುವದು ; ಇದನ್ನು ಕನ್ನಡಿಸುವಾಗ 'ತಾವು' ಎಂಬ ಶಬ್ದವನ್ನು ಬಳಸುವದು ಉತ್ತಮ. **'ವತ್'** ಪ್ರತ್ಯಯಾಂತಶಬ್ದಗಳ ರೂಪಗಳನ್ನು ಈ ಕೆಳಗೆ ಕೊಟ್ಟಿದೆ :

### ಭಗವತ್ (ಪುಲ್ಲಿಂಗ)

| | | | |
|---|---|---|---|
| **१.** | भगवान् | भगवन्तौ | भगवन्तः |
| **सं** | भगवान् | भगवन्तौ | भगवन्तः |
| **२.** | भगवन्तम् | भगवन्तौ | भगवतः |
| **३.** | भगवता | भगवद्भ्याम् | भगवद्भिः |
| **४.** | भगवते | भगवद्भ्याम् | भगवद्भ्यः |
| **५.** | भगवतः | भगवद्भ्याम् | भगवद्भ्यः |
| **६.** | भगवतः | भगवतोः | भगवताम् |
| **७.** | भगवति | भगवतोः | भगवत्सु |

## ಪೃಷ್ಟವತ್ (ಪುಲ್ಲಿಂಗ)

| | | |
|---|---|---|
| १. पृष्टवान् | पृष्टवन्तौ | पृष्टवन्तः |
| स पृष्टवन् | पृष्टवन्तौ | पृष्टवन्तः |
| २. पृष्टवन्तम् | पृष्टवन्तौ | पृष्टवतः |
| ३. पृष्टवता | पृष्टवद्भ्याम् | पृष्टवद्भिः |
| ४. पृष्टवते | पृष्टवद्भ्याम् | पृष्टवद्भ्यः |
| ५. पृष्टवतः | पृष्टवद्भ्याम् | पृष्टवद्भ्यः |
| ६. पृष्टवतः | पृष्टवतोः | पृष्टवताम् |
| ७. पृष्टवति | पृष्टवतोः | पृष्टवत्सु |

### ಇದು ನಪುಂಸಕವಾದರೆ

| | | |
|---|---|---|
| १. पृष्टवत् | पृष्टवती | पृष्टवन्ति |

ಮಿಕ್ಕದ್ದೆಲ್ಲ ಪುಲ್ಲಿಂಗದಂತೆ.

**ವಿಶೇಷ :** ಧಾತು ಸಕರ್ಮಕವಾದರೂ **'ವತ್'** ಭೂತಕೃದಂತಕ್ಕೆ ಸೇರಿಸಿದರೆ ಕರ್ತ್ರರ್ಥವೇ (active, not passive). ಉದಾ : **ಕೃತಮ್** - ಮಾಡಲ್ಪಟ್ಟಿತು, **ಕೃತವಾನ್** - ಮಾಡಿದನು.

### ಅಭ್ಯಾಸ ೩೩

**ಕನ್ನಡಿಸಿರಿ :**

१. स देवालयं गतः ।  २. स देवालयं गतवान् ।

३. मया पुस्तकं पठितम् ।  ४. अहं पुस्तकं पठितवान् ।

५. एषः वृत्तान्तः मया पत्रे लिखितः ।

६. अहम् एतं वृत्तान्तं पत्रे लिखितवान् ।

७. अहं गृहे स्थितः ।

८. त्वं कुत्र स्थितवान् ?

## ಮೂವತ್ತಾರನೆಯ ಪಾಠ

ಭೂತಕೃದಂತಗಳನ್ನು ಭೂತಕಾಲದ ಕ್ರಿಯಾಪದಗಳಿಗೆ ಬದಲಾಗಿ ಉಪಯೋಗಿಸಬಹುದೆಂಬುದನ್ನು ಹಿಂದೆ (ಇಪ್ಪತ್ತನೆಯ ಮತ್ತು ಮೂವತ್ತೆರಡನೆಯ ಪಾಠಗಳಲ್ಲಿ) ತಿಳಿಸಿಕೊಟ್ಟಿದೆ. ಈ ಕೃದಂತಗಳು ವಿಶೇಷಣಗಳಾದ್ದರಿಂದ ವಿಶೇಷ್ಯಕ್ಕೆ ತಕ್ಕ ಲಿಂಗ ವಚನವಿಭಕ್ತಿಗಳಲ್ಲಿರುವವು.

| | |
|---|---|
| ರಾಮನು ಎಲ್ಲಿಗೆ ಹೋದನು ? | - रामः कुत्र गतः । |
| ರಾಮನು ದಂಡಕಾರಣ್ಯಕ್ಕೆ ಹೋದನು. | - रामः दण्डकारण्यं गतवान् । |
| ಸೀತೆ ಎಲ್ಲಿಗೆ ಹೋದಳು ? | - सीता कुत्र गता ? |
| ಆಕೆ ರಾಮನನ್ನೇ ಹಿಂಬಾಲಿಸಿದಳು. | - सा राममेव अनुसृतवती । |
| ಹನುಮಂತನಿಂದ ಸೀತೆ ಎಲ್ಲಿ ನೋಡಲ್ಪಟ್ಟಳು? | - हनुमंता सीता कुत्र दृष्टा ? |
| ಹನುಮಂತನು ಆಕೆಯನ್ನು ಅಶೋಕವನದಲ್ಲಿ ಕಂಡನು. | -हनूमान् ताम् अशोकवने दृष्टवान् । |
| ಈ ಕಾಗದವು ಯಾರಿಂದ ಬರೆಯಲ್ಪಟ್ಟಿತು? | -एतत् पत्रं केन लिखितम् ? |
| ಅದನ್ನು ನನ್ನ ಮಗಳು ಬರೆದಳು. | - तत् मम पुत्री लिखितवती । |
| ಹಣ್ಣು ಎಲ್ಲಿ ಬಿದ್ದಿತು? | - फलं कुत्र पतितवत् ? |

ಹೀಗೆಯೇ ಪತಿತ, ಗತ, ಪಠಿತ, ದೃಷ್ಟ, ಆಗತ, ಉತ್ಥಿತ, ಧಾವಿತ, ಕೃತ - ಮುಂತಾಗಿ ಎಲ್ಲ ಕೃದಂತಗಳಿಗೂ ಪತಿತಃ, ಪತಿತಾ, ಪತಿತಮ್ ; ಗತಃ, ಗತಾ, ಗತಮ್ ಎಂದು ಮುಂತಾಗಿಯೂ, ಪತಿತವಾನ್, ಪತಿತವತೀ, ಪತಿತವತ್; ಗತವಾನ್, ಗತವತೀ, ಗತವತ್ - ಎಂದು ಮುಂತಾಗಿಯೂ ರೂಪಗಳನ್ನು ಮಾಡಿಕೊಳ್ಳಬಹುದು. ಮೊದಲನೆಯ ರೂಪದಲ್ಲಿ (ಬರಿಯ 'ತ' ಸೇರಿರುವಾಗ) ಸಕರ್ಮಕಧಾತುಗಳಿಗೆ 'ಅಲ್ಪಡು' ಎಂಬುದನ್ನು ಸೇರಿಸಿಕೊಂಡು ಅರ್ಥಮಾಡಬೇಕು. ಉದಾ : ದೃಷ್ಟಃ - ನೋಡಲ್ಪಟ್ಟನು, ದೃಷ್ಟಾಃ - ನೋಡಲ್ಪಟ್ಟರು, ದೃಷ್ಟೌ - (ಇಬ್ಬರು) ನೋಡಲ್ಪಟ್ಟರು- ಇತ್ಯಾದಿ. ಆದರೆ 'ವತ್' ಸೇರಿದವುಗಳಿಗೆ ಬರಿಯ ಕರ್ತ್ರರ್ಥವೇ ಇರುತ್ತದೆ. ದೃಷ್ಟವಾನ್ - ನೋಡಿದನು, ದೃಷ್ಟವನ್ತಃ - ನೋಡಿದರು, ದೃಷ್ಟವತೀ - ನೋಡಿದಳು, ದೃಷ್ಟವತ್ - ನೋಡಿತು- ಇತ್ಯಾದಿ.

### ಅಭ್ಯಾಸ ೩೪

**ಸಂಸ್ಕೃತಕ್ಕೆ ತಿರುಗಿಸಿರಿ :** ೧. ಹಾವು ಬಿಲವನ್ನು ಹೊಕ್ಕಿತು. ೨ ಹಾವುಗಳು ದೇವಾಲಯವನ್ನು ಹೊಕ್ಕವು. ೩ (ಇಬ್ಬರು) ಹುಡುಗರು ಆಸನಗಳಲ್ಲಿ ಕುಳಿತುಕೊಂಡರು. ೪. ಹೆಂಡತಿಯು ನದಿಗೆ ಹೋದಳು. ೫. ವ್ಯಾಸರಿಂದ ಮಹಾಭಾರತವು ರಚಿಸಲ್ಪಟ್ಟಿತು. ೬. ಕೋತಿಯು ಹಣ್ಣನ್ನು ತಿಂದಿತು. ೭. ಕಳ್ಳನಿಂದ ಹಣವು ಕದಿಯಲ್ಪಟ್ಟಿತು (हृत). ೮. ಹೆಂಡತಿ ಏನು ಹೇಳಿದಳು? ೯. ನಿನ್ನಿಂದ ಮುಖವು ತೊಳೆಯಲ್ಪಟ್ಟಿತೇನು?

# ಮೂವತ್ತೇಳನೆಯ ಪಾಠ

ಈ ಕೆಳಗಿನ ವಾಕ್ಯಗಳಲ್ಲಿ **'ಉಳ್ಳ'** ಎಂಬ ಪ್ರತ್ಯಯವನ್ನು ಸೇರಿಸಿದ ಶಬ್ದಗಳಿವೆ :

धनवान् बलवान् लोके । - ಲೋಕದಲ್ಲಿ ಹಣವಂತನು ಬಲವಂತನು.

तव शिष्यो धीमान् । - ನಿನ್ನ ಶಿಷ್ಯನು ಬುದ್ಧಿವಂತನು.

बुद्धिमतां बुद्धिः ईश्वरात् । - ಬುದ್ಧಿವಂತರ ಬುದ್ಧಿಯು ಈಶ್ವರನಿಂದ.

तपस्विनाम् आश्रमाः रम्याः । - ತಪಸ್ವಿಗಳ ಆಶ್ರಮಗಳು ಸೊಗಸಾಗಿರುತ್ತವೆ.

गुणिनः सदा सुखिनः किम् ? - ಗುಣವಂತರು ಯಾವಾಗಲೂ ಸುಖಿಗಳಾಗಿರುತ್ತಾರೆಯೆ?

धनवति दारिद्र्यं कुतो भवति । - ಹಣವಂತನಲ್ಲಿ ಬಡತನವು ಎಲ್ಲಿಂದ ಬರುತ್ತದೆ?

**ವಿಶೇಷ : (೧) ಧನವಾನ್, ಬುದ್ಧಿಮಾನ್, ಧೀಮಾನ್** - ಈ ಶಬ್ದಗಳನ್ನು 'ಭಗವತ್' ಶಬ್ದದಂತೆ ನಡೆಯಿಸಿಕೊಳ್ಳಬೇಕು. ಉದಾ : **ಧನವಾನ್, ಧನವನ್ತೌ, ಧನವನ್ತಃ ; ಬುದ್ಧಿಮಾನ್, ಬುದ್ಧಿಮನ್ತೌ, ಬುದ್ಧಿಮನ್ತಃ, ಧೀಮಾನ್, ಧೀಮನ್ತೌ, ಧೀಮನ್ತಃ ।**

**(೨) 'ಇನ್', 'ವಿನ್'** - ಎಂಬ ಪ್ರತ್ಯಯಗಳು ಕೊನೆಯಲ್ಲಿರುವ ಶಬ್ದಗಳನ್ನು ಹೀಗೆ ನಡೆಯಿಸಿರಿ :

**१.** गुणी, गुणिनौ, गुणिनः । **सं** गुणिन्, गुणिनौ, गुणिनः ।
**२.** गुणिनम्, गुणिनौ, गुणिनः । **३.** गुणिना, गुणिभ्याम्, गुणिभिः ।
**४.** गुणिने, गुणिभ्यां, गुणिभ्यः । **५.** गुणिनः, गुणिभ्याम्, गुणिभ्यः ।
**६.** गुणिनः, गुणिनोः, गुणिनाम् । **७.** गुणिनि, गुणिनोः, गुणिषु ।

**१.** तपस्वी, तपस्विनौ, तपस्विनः। सं तपस्विन्, तपस्विनौ, तपस्विनः

ಇತ್ಯಾದಿ.

### ಅಭ್ಯಾಸ ೩೫

**ಕನ್ನಡಿಸಿರಿ : १.** धीमतां कालः एवं गच्छति । **२.** ते काव्यं शास्त्रं वा पठन्ति, विनोदेन कालं नयन्ति । **३.** भो तपस्विन्, भवता रक्षिता वयम् । **४.** मायावी पदार्थान् मायया करोति । **५.** भगवन्, इदानीं मम गृहम् आगच्छ । **६.** लोके धनवन्तं पुरुषं पूजयन्ति, गुणिनमपि दरिद्रं त्यजन्ति । **७.** तस्य विशालस्य गृहस्य स्वामी कः ? **८.** योगिनः भगवन्तं नारायणं शरणं गच्छन्ति । **९.** लोके केचित् धनिनः, केचित् दरिद्राः, केचित् सुखिनः, केचित् दुःखिनः ।

## ಮೂವತ್ತೆಂಟನೆಯ ಪಾಠ

ಈ ಕಥೆಯನ್ನು ಓದಿರಿ. ಹೊಸ ಶಬ್ದಗಳನ್ನು ಗುರುತುಮಾಡಿರಿ. ಕಥೆಗೆ ಅರ್ಥವನ್ನು ಕೆಳಗೆ ಬರೆದಿದೆ. ಮೊದಲು ನೀವೇ **ಅರ್ಥವನ್ನು ಊಹಿಸಿರಿ :**

एकस्मिन् नगरे वसुगुप्तो नाम श्रेष्ठी अस्ति । तस्य प्रभूतं धनं पेटिकायां रक्षितम् अस्ति । एकदा अर्धरात्रे कश्चन चोरः तस्य गृहम् आगतवान् । तेन कुड्ये रन्ध्रं कृतम्, धनं च अपहृतम् ।

ततः प्रभाते प्रभूता जनाः तत्र मिलिताः । चोरोऽपि तेषां मध्ये स्थितः । तत्र जना एवं वदन्ति 'कथम् अल्पे रन्ध्रे चोरः प्रविष्टः ?' इति । 'कथं पेटिकया सह निर्गतः ?' इत्येके । 'पेटिका न आनीता' इति, केचित् । तदा चोरेण उक्तम् 'स एवं प्रविष्टः, एवं च निर्गतः । स्वल्पमेव धनं नीतं तेन, न सर्वम्' इति ।

ततः सर्वे हसन्ति । तदा चोरो रक्षापुरुषैः गृहीतः ।

ಒಂದು ನಗರದಲ್ಲಿ ವಸುಗುಪ್ತನೆಂಬ ಶೆಟ್ಟಿಯು ಇರುತ್ತಾನೆ(=ಇದ್ದನು). ಅವನ ಬಹಳ ಹಣವು ಪೆಟ್ಟಿಗೆಯಲ್ಲಿ ಇಡಲ್ಪಟ್ಟಿದೆ (=ಇಡಲ್ಪಟ್ಟಿತ್ತು). ಒಮ್ಮೆ ಅರ್ಧರಾತ್ರಿಯಲ್ಲಿ ಒಬ್ಬಾನೊಬ್ಬ ಕಳ್ಳನು ಅವನ ಮನೆಯನ್ನು ಕುರಿತು (=ಮನೆಗೆ) ಬಂದನು. ಅವನಿಂದ ಗೋಡೆಯಲ್ಲಿ ಕನ್ನವು ಮಾಡಲ್ಪಟ್ಟಿತು ; ಹಣವೂ ಕಳವು ಮಾಡಲ್ಪಟ್ಟಿತು.

ಆಮೇಲೆ ಬೆಳಗ್ಗೆ ಬಹಳ ಜನರು ಅಲ್ಲಿ ಸೇರಿದರು. ಕಳ್ಳನೂ ಅವರ ನಡುವೆ ನಿಂತಿದ್ದನು. ಅಲ್ಲಿ ಜನರು ಹೀಗೆ ಹೇಳುತ್ತಾರೆ (=ಹೇಳುತ್ತಿದ್ದರು) : 'ಸಣ್ಣ ಕನ್ನದಲ್ಲಿ ಕಳ್ಳನು ಹೇಗೆಹೊಕ್ಕನು?' 'ಪೆಟ್ಟಿಗೆಯೊಡನೆ ಹೇಗೆ ಹೊರಕ್ಕೆ ಬಂದನು?' ಎಂದು ಕೆಲವರು. 'ಪೆಟ್ಟಿಗೆಯು ತರಲ್ಪಡಲಿಲ್ಲ' ಎಂದು ಕೆಲವರು. ಆಗ ಕಳ್ಳನಿಂದ ಹೇಳಲ್ಪಟ್ಟಿತು: 'ಅವನು ಹೀಗೆ ಹೊಕ್ಕನು, ಮತ್ತು ಹೀಗೆ ಹೊರಕ್ಕೆ ಬಂದನು. ಸ್ವಲ್ಪವೇ ಧನವು ಅವನಿಂದ ಒಯ್ಯಲ್ಪಟ್ಟಿತು ಎಲ್ಲವೂ ಅಲ್ಲ' ಎಂದು.

ಆಮೇಲೆ ಎಲ್ಲರೂ ನಗುತ್ತಾರೆ (=ನಕ್ಕರು). ಆಗ ಕಳ್ಳನು ಕಾವಲುಗಾರರಿಂದ ಹಿಡಿಯಲ್ಪಟ್ಟನು.

ಮೇಲಿನ ಕಥೆಯಲ್ಲಿ ಕರ್ಮಣಿ ಪ್ರಯೋಗಗಳನ್ನು ಬದಲಾಯಿಸಿ **ಕನ್ನಡದ ಪದ್ಧತಿಗೆ ತಕ್ಕಂತೆ ಬರೆಯಿರಿ.**

ಸಂಸ್ಕೃತದ ಕಥಾಭಾಗದಲ್ಲಿರುವ ಕೆಲವು ವಿಶೇಷಣಗಳನ್ನು ವಿಮರ್ಶಿಸೋಣ.

**೧. ಏಕಸ್ಮಿನ್ ನಗರೇ -** ಒಂದಾನೊಂದು (a certain, some) ನಗರದಲ್ಲಿ. ಏಕ ಶಬ್ದವು ಇಲ್ಲಿ ಸಂಖ್ಯಾವಾಚಕವಲ್ಲ, ಅನಿರ್ದಿಷ್ಟಾರ್ಥಕ ಸರ್ವನಾಮ (Indefinite Demonstrative Pronoun).

೨. **ಕಶ್ಚನ ಚೋರಃ** - ಒಬ್ಬಾನೊಬ್ಬ ಕಳ್ಳನು. ಇದು ಅನಿರ್ದಿಷ್ಟಾರ್ಥಕ ಸರ್ವನಾಮ. 'ಕಿಮ್' ಶಬ್ದಕ್ಕೆ ಚನ, ಚಿತ್ ಎಂಬ ಅವ್ಯಯಗಳನ್ನು ಸೇರಿಸಿದರೆ ಈ ಅರ್ಥದ ಸರ್ವನಾಮಗಳಾಗುವವು ; ಕಶ್ಚನ, ಕೌಚನ, ಕೇಚನ -ಎಂದು ಮುಂತಾಗಿ ರೂಪಗಳು. ಹೀಗೆಯೇ ಕಶ್ಚಿತ್, ಕೌಚಿತ್, ಕೇಚಿತ್ - ಮುಂತಾದ ರೂಪಗಳೂ ಎಲ್ಲಾ ವಿಭಕ್ತಿಗಳಲ್ಲಿಯೂ ಆಗುತ್ತವೆ. ಇದಕ್ಕೆ ಸ್ತ್ರೀಲಿಂಗ, ನಪುಂಸಕಲಿಂಗ ರೂಪಗಳೂ ಉಂಟು. ಉದಾ : ಕಯಾಚಿತ್ ನಾರ್ಯಾ - ಯಾವಳೋ ಒಬ್ಬ ಹೆಂಗಸಿನಿಂದ ; ಕಸ್ಮಿಂಶ್ಚಿತ್ ಗೃಹೇ - ಒಂದಾನೊಂದು ಮನೆಯಲ್ಲಿ.

೩. **ಇತ್ಯೇಕೇ** - ಎಂದು ಕೆಲವರು. ಇದು ಅನಿರ್ದಿಷ್ಟ ಸಂಖ್ಯಾವಾಚಕ. 'ಏಕ' ಶಬ್ದಕ್ಕೆ ಒಂದು, ಒಂದಾನೊಂದು ಎಂಬರ್ಥವಲ್ಲದೆ ಬಹುವಚನದಲ್ಲಿ 'ಕೆಲವರು' ಎಂದೂ ಅರ್ಥವುಂಟು. ಈ ಶಬ್ದವನ್ನು ಏಕಃ, ಏಕೌ, ಏಕೇ - ಎಂದು 'ಕಿಂ' ಶಬ್ದದಂತೆ ನಡೆಯಿಸಬೇಕು.

೪. **ಕೇಚಿತ್** - ಕೆಲವರು. ಇದಕ್ಕೆ ಬದಲಾಗಿ ಮೇಲೆ ಇರುವಂತೆ 'ಏಕೇ' ಎಂದೂ ಪ್ರಯೋಗಿಸಬಹುದಾಗಿತ್ತು.

೫. **ಸ್ವಲ್ಪಮ್** - ಸ್ವಲ್ಪ (a little), ಪ್ರಭೂತಮ್ - ಬಹಳ (much), ಸರ್ವಮ್ - ಎಲ್ಲಾ (the whole) - ಇವು ಪರಿಮಾಣ (quantity) ವಾಚಕಗಳು. **ಸ್ವಲ್ಪಂ ಘೃತಮ್, ಪ್ರಭೂತಮ್ ಘೃತಮ್, ಸರ್ವಂ ಘೃತಮ್** - ಹೀಗೆ ಏಕವಚನದಲ್ಲಿ ಪ್ರಯೋಗ. ಬಹುವಚನವಾದರೆ ಇವು ಸಂಖ್ಯಾವಾಚಕ : **ಸ್ವಲ್ಪಾ ಜನಾಃ** - ಕೆಲವರೇ ಜನರು, **ಪ್ರಭೂತಾ ಜನಾಃ** - ಬಹಳ ಜನರು, **ಸರ್ವೇ ಜನಾಃ** - ಎಲ್ಲಾ ಜನರೂ .

೬ 'ಸರ್ವ' ಶಬ್ದವನ್ನು ಸರ್ವಃ, ಸರ್ವೌ, ಸರ್ವೇ, ಸರ್ವಮ್, ಸರ್ವೌ, ಸರ್ವಾನ್ ಎಂದು ಮುಂತಾಗಿ ಮೂರು ಲಿಂಗಗಳಲ್ಲಿಯೂ 'ಕಿಮ್' ಶಬ್ದದಂತೆ ನಡೆಯಿಸಿರಿ. ಬರಿಯ ಏಕವಚನದಲ್ಲಿ ಸರ್ವಃ- ಪ್ರತಿಯೊಬ್ಬನೂ (every one), ಸರ್ವಾ- ಪ್ರತಿಯೊಬ್ಬಳೂ (every woman), ಸರ್ವಮ್ - ಪ್ರತಿಯೊಂದೂ (everything).

## ಅಭ್ಯಾಸ ೩೬

೧. ಮಧ್ಯಾಹ್ನದಲ್ಲಿ ನಮ್ಮ ಮನೆಗೆ ಒಬ್ಬ ಬ್ರಾಹ್ಮಣನು ಬಂದನು. ೨. ಅವನೊಡನೆ ಒಬ್ಬಾನೊಬ್ಬ ಹುಡುಗನೂ ಇದ್ದನು (अस्ति). ೩. ವಿದ್ಯಾವಂತನಾದ ಆ ಬ್ರಾಹ್ಮಣನನ್ನು ಕುರಿತು ನಾವೆಲ್ಲರೂ ಹೀಗೆಂದು ಕೇಳಿದೆವು. ೪. ಎಲೈ (भोः) ಬ್ರಾಹ್ಮಣನೆ, ನೀನು (भवान्) ಯಾವ ಊರಿನಿಂದ ಬಂದಿದೀಯೆ ? ೫. ನಿನಗೆ ಎಷ್ಟು ಮಕ್ಕಳು ಇದಾರೆ ? ೬. ಯಾವ ಕಾರಣದಿಂದ (केन कारणेन, कस्मात् कारणात्) ಈ ಊರಿಗೆ ಬಂದಿದೀಯೆ? ೭. ನಿಮ್ಮ ಊರಿನಲ್ಲಿ ಎಲ್ಲರೂ ವಿದ್ಯಾವಂತರೋ ?

# ಮೂವತ್ತೊಂಬತ್ತನೆಯ ಪಾಠ

ಈಗ इदम् ಶಬ್ದದ ಪುಲ್ಲಿಂಗನಪುಂಸಕಲಿಂಗದ ರೂಪಗಳುಳ್ಳ ವಾಕ್ಯಗಳನ್ನು ಕೊಡಲಾಗುತ್ತದೆ. ಸಂಸ್ಕೃತದಲ್ಲಿ **'ಇದು'** ಎಂಬರ್ಥದಲ್ಲಿ एतत्, इदम् - ಎಂಬ ಎರಡು ಶಬ್ದಗಳನ್ನು ಉಪಯೋಗಿಸುವರು. एतत् ಎಂಬುದನ್ನು ಇನ್ನೂ ಹತ್ತಿರವಿರುವ ಪದಾರ್ಥಕ್ಕೆ ಅಥವಾ ಮನುಷ್ಯರಿಗೆ ಉಪಯೋಗಿಸುತ್ತಾರೆ. ಉದಾ. : अयं वृक्षः - ಈ ಮರ, एष वृक्षः (ಇನ್ನೂ ಹತ್ತಿರವಿರುವ) ಈ ಮರ.

**ಕನ್ನಡಿಸಿರಿ :**

**१.** अयं मम सहोदरः । **२.** इमौ बालकौ दशरथस्य पुत्रौ । **३.** इमे कस्य अश्वाः ? **४.** इमं घटं कः कृतवान् ? **५.** भूपः इमौ बालकौ विश्वामित्राय समर्पयति । **६.** बालौ इमान् देशान् इदानीमेव दृष्टवन्तौ । **७.** इदं कस्य पुस्तकम् ? **८.** इमे फले केन आनीते ? **९.** इमानि रम्याणि गृहाणि । **१०.** इदं सुन्दरं चित्रं पश्य । **११.** इमानि कोमलानि कमलानि गौर्यै यच्छामि । **१२.** अनेन प्रातःकाले किं पठितम् ? **१३.** आभ्यां ग्रामाभ्यां मम किं प्रयोजनम् ? **१४.** एभिः सर्वं घृतं पीतम् (ಕುಡಿಯಲ್ಪಟ್ಟಿತು) । **१५.** इदं सुवर्णम् (ಚಿನ್ನ) अस्मै ब्राह्मणाय दत्तम् । तत् इदानीं न मम । **१६.** आभ्यां बालकाभ्यां किं यच्छसि ? **१७.** एभ्यः उपविष्टेभ्यो ब्राह्मणेभ्यः मधुरं क्षीरम् आनय । **१८.** अस्मात् वृक्षात् फलानि कदा पतन्ति ? **१९.** आभ्यां ग्रामाभ्यां गोप्यः (ಗೊಲ್ಲತಿಯರು) क्षीरम् आनयन्ति । **२०.** एभ्यः क्रूरेभ्यः सर्वे भीताः (ಹೆದರಿದರು) । **२१.** अस्य भूपस्य कति पुत्राः सन्ति ? **२२.** अनयोः का जननी ? **१३.** एषां वस्त्राणि कुत्र ? **१४.** अस्मिन् घटे स्वच्छं जलम् अस्ति किम् ? **१५.** अनयोः को रामः ? **२६.** एषु पत्तनेषु प्रभूता धनिनः सन्ति ।

### ಅಭ್ಯಾಸ ३८

೪೩ನೆಯ ಪುಟದಲ್ಲಿ ಕೊಟ್ಟಿರುವ 'एतत्' ಶಬ್ದದ ರೂಪಗಳನ್ನು ಮೇಲಿನ ವಾಕ್ಯಗಳಲ್ಲಿರುವ 'इदम्' ಶಬ್ದದ ರೂಪಗಳ **ಸ್ಥಾನದಲ್ಲಿ ಪ್ರಯೋಗಿಸಿರಿ.**

# ನಲವತ್ತನೆಯ ಪಾಠ

ವಿಶೇಷ್ಯಕ್ಕೆ ತಕ್ಕಂತೆ ವಿಶೇಷಣಗಳ ಲಿಂಗವಿಭಕ್ತಿವಚನಗಳು ಇರಬೇಕೆಂಬುದು ಈವರೆಗೆ ನಿಮಗೆ ಗೊತ್ತೇ ಆಗಿದೆ. ವಿಶೇಷಣಕ್ಕೆ ಯಾವ ವರ್ಣವು ಅಂತದಲ್ಲಿರುತ್ತದೆಯೋ ಲಕ್ಷ್ಯದಲ್ಲಿಟ್ಟುಕೊಂಡು ಅದರ ರೂಪಗಳನ್ನು ನಿರ್ಮಿಸಿಕೊಳ್ಳಬೇಕು.

ब्राह्मणस्य बुद्धिमती भार्या किं कृतवती ? - ಇಲ್ಲಿ 'बुद्धिमती' ಎಂಬುದು ಈಕಾರಾಂತ
बुद्धिमान् ब्राह्मणः किं करोति ? - ಇಲ್ಲಿ 'बुद्धिमान्' ಎಂಬುದು ತಕಾರಾಂತ
अस्ति तत्र नर्मदा नाम गभीरा नदी - ಇಲ್ಲಿ 'गभीरा' (ಆಳವಾದ) ಎಂಬುದು ಆಕಾರಾಂತ.

ಈ ಕೆಳಗೆ **'बुद्धिमती भार्या'** ಎಂಬ ವಿಶೇಷಣ - ವಿಶೇಷ್ಯಗಳನ್ನು ಬೇರೆಬೇರೆ ವಿಭಕ್ತಿರೂಪಗಳಲ್ಲಿ ನಡೆಯಿಸಿ ವಾಕ್ಯಗಳನ್ನು ನಿರ್ಮಿಸಿರುವದನ್ನು ನೋಡಿರಿ. **ಅರ್ಥವನ್ನು ಊಹಿಸಿರಿ.**

**१.** बुद्धिमती भार्या ब्राह्मणम् एवं वदति । **२.** वृद्धस्य द्वे बुद्धिमत्यौ भार्ये स्तः । **३** दशरथस्य भार्याः बुद्धिमत्यः । **४** बुद्धिमति भार्ये, अत्र आगच्छ । **५** बुद्धिमत्यौ भार्ये, अत्र आगच्छतम् । **६.** बुद्धिमत्यः भार्याः किं वदथ ? **७.** बुद्धिमतीं भार्यां ब्राह्मणः किं वदति ? **८.** श्रेष्ठी बुद्धिमत्यौ भार्ये एवं वदति । **९.** भूपः तिस्रोऽपि बुद्धिमतीः भार्याः पश्यति । **१०.** तदा बुद्धिमत्या भार्यया किं कृतम् ? **११.** बुद्धिमतीभ्यां भार्याभ्यां ब्राह्मणाय किं दत्तम् ? **१२.** बुद्धिमतीभिः भार्याभिः पायसं भक्षितम् । **१३.** स बुद्धिमत्यै भार्यायै द्वौ वरौ दत्तवान् । **१४.** श्रेष्ठी बुद्धिमतीभ्यां द्वाभ्यामपि भार्याभ्यां धनं दत्तवान् । **१५.** दशरथो बुद्धिमतीभ्यो भार्याभ्यः सुन्दराणि वस्त्राणि यच्छति । **१६.** बुद्धिमत्याः भार्यायाः (बुद्धिमतीभ्यां भार्याभ्याम्, बुद्धिमतीभ्यः भार्याभ्यः) भीताः[1] सर्वे चोराः प्रधाविताः । **१७.** बुद्धिमत्याः भार्यायाः आभरणानि कुत्र रक्षितानि ? **१८.** बुद्धिमत्योः भार्ययोः कौशेयवस्त्रे (ರೇಷ್ಮೆಯ ಬಟ್ಟೆಗಳು) पेटिकयोः रक्षिते । **१९.** बुद्धिमतीनां भार्याणां दास्यः पृथक् पृथक् (ಬೇರೆ ಬೇರೆ) सन्ति । **२०.** तस्य बुद्धिमत्यां भार्यायाम् एको विशेषोऽस्ति । **२१.** बुद्धिमत्योः भार्ययोः (ಹೆಂಡತಿಯರೊಳಗೆ) एका सुन्दरी, एका विद्यावती । **२२.** बुद्धिमतीषु भार्यासु तस्य समा प्रीतिः ।

## ಅಭ್ಯಾಸ ೩೮

೧. 'ಬುದ್ಧಿಮಾನ್ ಬ್ರಾಹ್ಮಣಃ' - ಇದರ ತೃತೀಯಾ, ಷಷ್ಠೀ, ಸಪ್ತಮೀ ರೂಪಗಳನ್ನು ಬರೆಯಿರಿ. ೨. 'ಗಭೀರಾ ನದೀ' - **ಇದರ ಪ್ರಥಮಾ, ಚತುರ್ಥೀ, ಪಂಚಮೀ ರೂಪಗಳನ್ನು ಬರೆಯಿರಿ.**

1. ಯಾರಿಗೆ ಹೆದರುತ್ತಾರೋ ಅವರ ಹೆಸರನ್ನು ಪಂಚಮೀ ವಿಭಕ್ತಿಯಲ್ಲಿಡಬೇಕು.

# ನಲವತ್ತೊಂದನೆಯ ಪಾಠ

ಆಜ್ಞಾರ್ಥಕ ಕ್ರಿಯಾರೂಪಗಳನ್ನೂ **ವರ್ತಮಾನ ಕ್ರಿಯಾರೂಪಗಳನ್ನೂ** ಹೋಲಿಸಿ ನೋಡುವದಕ್ಕಾಗಿ ಇಲ್ಲಿ ಕೆಲವು ವಾಕ್ಯಗಳನ್ನುಕೊಟ್ಟಿರುತ್ತದೆ :

| | |
|---|---|
| त्वम् इदानीं किं पठसि ? | - ನೀನು ಈಗ ಏನು ಓದುತ್ತಿದೀಯೆ ? |
| एतत् पुस्तकं पठ । | - ಈ ಪುಸ್ತಕವನ್ನು ಓದು. |
| स किं पठति ? | - ಅವನು ಏನು ಓದುತ್ತಾನೆ ? |
| सोऽपि एतत् पुस्तकमेव पठतु | - ಅವನು ಈ ಪುಸ್ತಕವನ್ನೇ ಓದಲಿ. |
| सर्वेऽपि संस्कृतपुस्तकमेव पठन्तु | - ಎಲ್ಲರೂ ಸಂಸ್ಕೃತಪುಸ್ತಕವನ್ನೇ ಓದಲಿ. |
| युवां किं पठथः ? | - ನೀವಿಬ್ಬರೂ ಏನು ಓದುತ್ತಿದೀರಿ ? |
| गीतामेव पठतम् । | - ಗೀತೆಯನ್ನೇ (ಇಬ್ಬರೂ) ಓದಿರಿ. |
| सायंकाले यूयं कुत्र गच्छथ ? | - ಸಾಯಂಕಾಲದಲ್ಲಿ ನೀವು ಎಲ್ಲಿಗೆ ಹೋಗುತ್ತೀರಿ ? |
| देवालयं आगच्छथ । | - ದೇವಾಲಯಕ್ಕೆ ಬನ್ನಿರಿ. |
| तौ वार्तापत्रं पठतः । | - ಅವರು (ಇಬ್ಬರೂ) ವಾರ್ತಾಪತ್ರವನ್ನು ಓದುತ್ತಾರೆ. |
| तत् मा पठताम् । | - ಅದನ್ನು ಓದದಿರಲಿ. |
| अहं किं पठानि ?[1] | - ನಾನು ಏನು ಓದಲಿ ? |
| अहमपि स्तोत्रं पठामि । | - ನಾನೂ ಸ್ತೋತ್ರವನ್ನು ಓದುತ್ತೇನೆ (ಹೇಳುತ್ತೇನೆ). |
| आवां तत्र गच्छाव । | - ನಾವು (ಇಬ್ಬರು) ಅಲ್ಲಿಗೆ ಹೋಗೋಣ. |
| इदानीं क्रीडाम । | - ಈಗ (ನಾವು) ಆಡೋಣ. |
| ततः क्रीडामः । | - ಆಮೇಲೆ ಆಡುತ್ತೇವೆ. |

1. 'ಕಿಂ' ಶಬ್ದವನ್ನು ಸೇರಿಸುವಾಗ '**ಅಲಿ**' ಎಂದೇ ಕನ್ನಡಿಸುವರು; ಇಲ್ಲದಾಗ '**ಓಣ**' ಎಂದು ಕನ್ನಡಿಸಬೇಕು.

**ಖಾದಾಮಿ-ಖಾದಾನಿ, ಖಾದಾವಃ - ಖಾದಾವ, ಖಾದಾಮಃ - ಖಾದಾಮ ।**

ಹೀಗೆ ವರ್ತಮಾನ ಕ್ರಿಯೆಗೆ ವಿಸರ್ಗವಿರುವಲ್ಲಿ ಆಜ್ಞಾರ್ಥಕ್ಕೆ ಇರುವದಿಲ್ಲ. ಉತ್ತಮ ಪುರುಷದಲ್ಲಿ (first person- ನಾನು, ನಾವಿಬ್ಬರು, ನಾವುಗಳು) 'ಓಣ' ಎಂದು ಕನ್ನಡಿಸಬೇಕು. ಪ್ರಥಮಪುರುಷದಲ್ಲಿ ಧಾವತಿ - ಧಾವತು, ಧಾವತಃ - ಧಾವತಾಮ್, ಧಾವನ್ತಿ - ಧಾವನ್ತು ; ಹೀಗೆ ರೂಪಭೇದವಿದೆ. ಇಲ್ಲಿ (third person- ಅವನು, ಅವರಿಬ್ಬರು, ಅವರು) 'ಅಲಿ' ಎಂದು ಕನ್ನಡಿಸಬೇಕು.

## ಅಭ್ಯಾಸ ೩೯

ದ್ವಿವಚನಕ್ಕೆ 'ಇಬ್ಬರು' ಅಥವಾ 'ಎರಡು' ಎಂಬ ಪದಗಳನ್ನು ಸೇರಿಸಿಕೊಂಡು **ಕನ್ನಡಿಸಿರಿ :**

१. हे बालाः, आचार्य आगतः । युस्माकं पुस्तकानि आनयत ।

२. हे रामलक्ष्मणौ, पश्यतम् ; गङ्गायाः दक्षिणे तीरे घोरं वनम् अस्ति ।

३. दूरे तिष्ठतम् । तत्र दुष्टा ताटका आगच्छति ।

४. भगवन्, आवां किं करवाव ? शीघ्रं वद ।

५. अहं किं करवाणि ? लक्ष्मणः किं करोतु ?

६. लक्ष्मण, त्वं अत्रैव तिष्ठ ; राम एव गच्छतु ।

७. राम, पश्य पश्य, आगतैव ताटका ।

८. त्वं शीघ्रं तां मारय (ಕೊಲ್ಲು) ।

९. सर्वे जनाः सुखिनो भवन्तु ।

१०. इदानीं वयं गच्छामः ।

**ಸಂಸ್ಕೃತಕ್ಕೆ ತಿರುಗಿಸಿರಿ :**

೧. ಎಲ್ಲಾ ಜನರೂ ನಮ್ಮ ಮನೆಗೆ ಬರಲಿ.

೨. ರಾಜರು ಪ್ರಜೆಗಳನ್ನು ಕಾಪಾಡಲಿ !

೩. ಪ್ರಜೆಗಳಿಗೆ ಒಳ್ಳೆಯದು ಆಗಲಿ (अस्तु).

೪. ಎಲಾ ಹುಡುಗ, ನಿನ್ನ ಪುಸ್ತಕವನ್ನು ತೆಗೆದುಕೊಂಡು ಬಾ, ನೋಡೋಣ.

೫. ಅಲ್ಲಿಗೆ ಹೋಗಬೇಡಿರಿ, ಕರಿಯ ಹಾವು ಹರಿಯುತ್ತಿದೆ.

## ನಲವತ್ತೆರಡನೆಯ ಪಾಠ

ಭವಿಷ್ಯತ್ಕಾಲದ ಕ್ರಿಯಾರೂಪಗಳನ್ನು ಈ ವಾಕ್ಯಗಳಲ್ಲಿ **ಪ್ರಯೋಗಿಸಿದೆ.**

| | |
|---|---|
| वयं मृत्युञ्जयं भजामः। | - ನಾವು ಮೃತ್ಯುಂಜಯನನ್ನು ಭಜಿಸುತ್ತೇವೆ. |
| यमः किं वा करिष्यति ? | - ಯಮನು ಏನುತಾನೆ ಮಾಡುವನು ? |
| पाषाणखण्डान् प्रक्षिपाम। | - ಕಲ್ಲಿನ ಗುಂಡುಗಳನ್ನು ಎಸೆಯೋಣ. |
| तदा फलानि पतिष्यन्ति। | - ಆಗ ಹಣ್ಣುಗಳು ಬೀಳುವವು. |
| क्षाम आगमिष्यति, किं करिष्यथ ? | - ಕ್ಷಾಮವು ಬರುವದು; ಏನು ಮಾಡುವಿರಿ ? |

ಮುಂದೆ ಬರುವ ಕಾಲವನ್ನು ತಿಳಿಸುವದಕ್ಕೆ ಈ ರೂಪಗಳನ್ನು ಪ್ರಯೋಗಿಸುವರು. ನಾವು ಈವರೆಗೆ ಭವಿಷ್ಯತ್ಕಾಲವನ್ನು ಹೇಳುವದಕ್ಕೆ ವರ್ತಮಾನಕಾಲದ ರೂಪಗಳನ್ನೇ ಬಳಸಿರುತ್ತೇವೆ. ಹಿಂದೆ ಬಂದಿರುವ ಕ್ರಿಯಾಪದಗಳಿಗೆ ಭವಿಷ್ಯದ್ರೂಪಗಳನ್ನೂ ಹೀಗೆಯೇ ಮಾಡಿಕೊಳ್ಳಬಹುದು. **ಸ್ಮರಿಷ್ಯತಿ, ಕರಿಷ್ಯತಿ, ಭವಿಷ್ಯತಿ, ಪಠಿಷ್ಯತಿ, ಲೇಖಿಷ್ಯತಿ, ಪತಿಷ್ಯತಿ, ಕ್ಷಾಲಯಿಷ್ಯತಿ, ಹನಿಷ್ಯತಿ, ಖಾದಿಷ್ಯತಿ** - ಇತ್ಯಾದಿ. ಈ ರೂಪಗಳನ್ನು ವರ್ತಮಾನ ರೂಪಗಳಂತೆಯೇ ನಡೆಯಿಸಿಕೊಳ್ಳಬಹುದು. **ಪತಿಷ್ಯತಿ, ಪತಿಷ್ಯತಃ, ಪತಿಷ್ಯನ್ತಿ** - ಇತ್ಯಾದಿ. ಭವಿಷ್ಯತ್ಕಾಲವನ್ನು ಗುರುತಿಸುವದಕ್ಕಾಗಿ ಕೆಲವು ರೂಪಗಳನ್ನು ಇಲ್ಲಿ ಕೊಟ್ಟಿರುತ್ತೇವೆ. ಮುಂದಿನ ಪುಸ್ತಕಗಳಲ್ಲಿ ಇದರ ವಿಶೇಷಗಳನ್ನು ತಿಳಿಸಿಕೊಡುವೆವು.

### ಅಭ್ಯಾಸ ೪೦

**ಕನ್ನಡಿಸಿರಿ : १.** : (ನಿನ್ನೆಯ ದಿನ) भानुवासरा गतः। अद्य इन्दुवासरः। श्व को वासर आगमिष्यति ? **२.** अनृतं मा वदत, पापं भविष्यति। **३.** तत्र फलानि मा रक्ष, वानराः खादिष्यन्ति। **४.** बालकाः सायङ्काल क्रीडाङ्गण कन्दुकः (ಚಂಡುಗಳಿಂದ) क्रीडिष्यन्ति। **५.** अहमपि तत्र गमिष्यामि, तैः सह खेलयिष्यामि। **६.** राम आगमिष्यति, राक्षसा मारयिष्यन्ते। **७.** परश्वः किं करिष्यथ ?

**ಸಂಸ್ಕೃತಕ್ಕೆ ತಿರುಗಿಸಿರಿ : ೧.** ನನ್ನ ಆಶ್ರಮದ ಹತ್ತಿರ ಇಬ್ಬರು ರಾಕ್ಷಸರು ಇದ್ದಾರೆ, ಅವರು ನನ್ನ ಯಜ್ಞಕ್ಕೆ (೬)[1] ವಿಘ್ನವನ್ನು ಮಾಡುತ್ತಿರುತ್ತಾರೆ. **೨.** ನಿನ್ನ ಪುತ್ರನಾದ ರಾಮನನ್ನು ನನಗೆ ಕೊಡು, ಅವನು ಅವರಿಬ್ಬರನ್ನೂ ದಂಡಿಸುವನು (दण्डयिष्यति). **೩.** ರಾಮನು ಇನ್ನೂ ಹುಡುಗನೇ, ಅವನು ಆ (ಇಬ್ಬರು) ರಾಕ್ಷಸರೊಡನೆ ಹೇಗೆ ಯುದ್ಧವನ್ನು ಮಾಡುವನು ? **೪.** ನಿಮ್ಮಿಂದ ನಿನ್ನೆ ಏನು ತಿನ್ನಲ್ಪಟ್ಟಿತು, ನಾಳೆ ಏನು ತಿನ್ನುವಿರಿ, ಈಗ ಏನು ತಿನ್ನುತ್ತಿದೀರಿ ? **೫.** ರಾಮನು ಆ (ಇಬ್ಬರು) ರಾಕ್ಷಸರನ್ನು ಕೊಲ್ಲುವನು.

1. ಇಲ್ಲಿ ಷಷ್ಠೀವಿಭಕ್ತಿಯನ್ನುಪಯೋಗಿಸಿರಿ.

# ನಲವತ್ತುಮೂರನೆಯ ಪಾಠ

ಪದದ ಕೊನೆಯಲ್ಲಿರುವ ವಿಸರ್ಗವು ಲೋಪವಾಗುವ ಸ್ಥಳಗಳನ್ನು ಹಿಂದೆ (೨೯ನೆಯ ಪಾಠದಲ್ಲಿ) ತಿಳಿಸಿದೆ. ವಿಸರ್ಗಕ್ಕೆ **ಶ, ಷ, ಸ**-ಕಾರಗಳು ಆದೇಶವಾಗಿ ಬರುವ ಉದಾಹರಣೆಗಳನ್ನೂ ಹಿಂದೆ (೩೦ನೆಯ ಪಾಠದಲ್ಲಿ) ಕೊಟ್ಟಿದೆ. ಈಗ ವಿಸರ್ಗಕ್ಕೆ ರಕಾರಾದೇಶವು ಬರುವ ಸ್ಥಳಗಳನ್ನು ತೋರಿಸುತ್ತೇವೆ :

युष्माभिः अत्र किं कृतम् ? -युष्माभिरत्र किं कृतम् ?

गोपीभिः आनीतं क्षीरम् । - गोपीभिरानीतं क्षीरम् ।

नदीः अत्र न पश्यसि । - नदीरत्र न पश्यसि ।

नद्योः वेगः प्रबलः । - नद्योर्वेगः प्रबलः ।

पुत्रैः एवम् उक्तम् - पुत्रैरेवमुक्तम् ।

एभिः घटैः कोऽर्थः ? - एभिर्घटैः कोऽर्थः ?

೧. ವಿಸರ್ಗದ ಹಿಂದೆ **ಅ**-ಆಕಾರಗಳ ಹೊರತು ಮಿಕ್ಕ ಯಾವ ಸ್ವರವಿದ್ದರೂ ಮುಂದೆ ಸ್ವರವಾಗಲಿ ಮೃದುವರ್ಣವಾಗಲಿ ಬಂದರೆ ಆ ವಿಸರ್ಗಕ್ಕೆ **ರಕಾರಾದೇಶವು** ಬರುವದು.

೨. ಗದ್ಯರೂಪವಾದ ವಾಕ್ಯಗಳಲ್ಲಿ ಸಂಧಿಯನ್ನು ಮಾಡಲೇಬೇಕೆಂಬ ನಿಯಮವಿಲ್ಲ. ಪದ್ಯಗಳಲ್ಲಿ ಮಾಡಿಯೇತೀರುತ್ತಾರೆ ಆದ್ದರಿಂದ ಅವನ್ನು ಗುರುತಿಸುವದಕ್ಕಾಗಿ ಇಲ್ಲಿ ಸಂಧಿ ನಿಯಮಗಳನ್ನು ಕೊಟ್ಟಿದೆ.

## ಅಭ್ಯಾಸ ೪೧

**ಸಂಧಿ ಬಿಡಿಸಿಕೊಂಡು ಅರ್ಥವನ್ನು ಹೇಳಿ :** **१.** युष्माभिः प्रातःकाले किं खादितम् ? **२.** अस्माभिर्न खादितं किमपि । **३.** भूपश्चतुर्भिरपि पुत्रैः सह अतीव (ಬಹಳ) हृष्टोऽस्ति । **४.** अनयोर्घटयोः एकस्मिन्नपि नास्ति जलम् । **५.** तैरस्माकं नार्थः (ಪ್ರಯೋಜನವಿಲ್ಲ) । **६.** विद्यारम्भं करिष्यामि, सिद्धिर्भवतु मे सदा ।

**ಸಂಸ್ಕೃತಕ್ಕೆ ತಿರುಗಿಸಿರಿ :** ೧. ಗುಣವಂತರಾದ ಸ್ತ್ರೀಯರನ್ನು (नारी) ನಾವು ಯಾವಾಗಲೂ ನಮಸ್ಕರಿಸುತ್ತೇವೆ. ೨ ಅವುಗಳಿಂದ ಇಲ್ಲಿ ಏನು ಪ್ರಯೋಜನ (कोऽर्थः) **೩.** ಬ್ರಾಹ್ಮಣರಿಬ್ಬರಲ್ಲಿ ಒಬ್ಬನು ಜಾಣನು (कुशल) **೪.** ಕೆಲವರು ಹಣವಂತರಿಂದ (धनी) ದೇವಾಲಯವು ಪ್ರವೇಶಿಸಲ್ಪಟ್ಟಿತು (प्रविश्) . **೫.** ಕತ್ತಿಗಳಿಂದ ಹೀಗೆ ಅವರು ಕತ್ತರಿಸಲ್ಪಟ್ಟರು (खण्डित).

## ನಲವತ್ತನಾಲ್ಕನೆಯ ಪಾಠ

ಭೂತಕೃದಂತ ವಿಶೇಷಣಗಳನ್ನು (Past participles) ಉಪಯೋಗಿಸುವ ಬಗೆಯನ್ನು ಹಿಂದೆ (೨೦, ೩೨, ೩೬ - ಈ ಪಾಠಗಳಲ್ಲಿ) ತಿಳಿಸಿರುತ್ತದೆ. ಈಗ ತುಮ್ ಎಂಬ ಪ್ರತ್ಯಯವು ಕೊನೆಯಲ್ಲಿರುವ ಕೆಲವು ಅವ್ಯಯಗಳನ್ನು ಇಲ್ಲಿ ಉದಾಹರಿಸುವೆವು :

**१.** भगवन् नमस्ते (नमः ते) । **२.** के भवन्तः ? किं वाञ्छन्ति ? (ಅಥವಾ) के यूयम् ? किं वाञ्छथ ? **३.** वयं संस्कृतभाषां शिक्षितुम् इच्छामः । **४.** किमेवम् ? तर्हि, युष्मभ्यम् एकं पुस्तकं दास्यामि । इदं प्रथमं पुस्तकम् । एतत् श्रद्धया पठत । युष्मान् अहं शिक्षयामि । **५.** भगवन्, वयं संस्कृतपुस्तकं शीघ्रमेव पठितुम् इच्छामः । **६.** अत्रागच्छत । अहम् इदानीम् एकं वाक्यं पठिष्यामि । तथैव यूयमपि पठत । त्वरितमेव पुस्तकं पठितुं संस्कृतं लेखितुं संभाषितुं च शक्ता भविष्यथ । गोपाल, त्वम् एकं वाक्यं पठ, पश्यानि ।

**ಮೇಲಿನ ವಾಕ್ಯಗಳಿಗೆ ಇದು ಕನ್ನಡದ ಅನುವಾದ :** ೧. ಪೂಜ್ಯನೆ, ನಿನಗೆ ನಮಸ್ಕಾರ. ೨. ನೀವು ಯಾರು ? ಏನು ಬಯಸುತ್ತೀರಿ ? **೩** ನಾವು ಸಂಸ್ಕೃತಭಾಷೆಯನ್ನು ಕಲಿಯುವದಕ್ಕೆ ಇಚ್ಛಿಸುತ್ತೇವೆ. **೪.** ಹೀಗೇನು ? ಹಾಗಾದರೆ ನಿಮಗೆ ಒಂದು ಪುಸ್ತಕವನ್ನು ಕೊಡುವೆನು. ಇದು ಮೊದಲನೆಯ ಪುಸ್ತಕ. ಇದನ್ನು ಶ್ರದ್ಧೆಯಿಂದ ಓದಿರಿ. ನಿಮಗೆ ನಾನು ಹೇಳಿಕೊಡುವೆನು. **೫.** ಪೂಜ್ಯನೆ, ನಾವು ಬೇಗನೆಯೇ ಸಂಸ್ಕೃತಪುಸ್ತಕವನ್ನು ಓದುವದಕ್ಕೆ ಇಚ್ಛಿಸುತ್ತೇವೆ. **೬.** ಇಲ್ಲಿ ಬನ್ನಿರಿ. ನಾನು ಈಗ ಒಂದು ವಾಕ್ಯವನ್ನು ಓದುವೆನು. ಹಾಗೆಯೇ ನೀವೂ ಓದಿರಿ. ಬೇಗನೆಯೇ ಪುಸ್ತಕವನ್ನು ಓದುವದಕ್ಕೂ ಸಂಸ್ಕೃತವನ್ನು ಬರೆಯುವದಕ್ಕೂ ಮಾತನಾಡುವದಕ್ಕೂ ಶಕ್ತರಾಗುವಿರಿ. ಗೋಪಾಲ, ನೀನು ಒಂದು ವಾಕ್ಯವನ್ನು ಓದು, ನೋಡೋಣ.

ಇಲ್ಲಿ ಪ್ರಯೋಗಿಸಿರುವ ಕೆಲವು ವಾಕ್ಯಭಾಗಗಳನ್ನು ಪರಿಶೀಲಿಸೋಣ :

**೧. ನಮಸ್ತೇ** - ನಿನಗೆ ನಮಸ್ಕಾರ. 'ನಮಃ' ಎಂಬ ಶಬ್ದಕ್ಕೆ ಚತುರ್ಥಿಯೇ ಬೇಕು.

**೨. ಕೇ ಭವನ್ತಃ** - ಇದನ್ನು ದೊಡ್ಡವರೊಡನೆ ಮಾತಾಡುವಾಗ 'ತಾವುಗಳು ಯಾರು ? ಎಂದು ನಡೆಸಬೇಕು. 'ನೀವುಗಳು ಯಾರು ?' ಎಂದರೂ ಸಾಕು. **'ಕೇ ಯೂಯಮ್ ?'** ಎಂಬ ರೀತಿಗಿಂತ ಇದು ಹೆಚ್ಚು ಗೌರವವನ್ನು ತೋರಿಸುತ್ತದೆ. ಇದಕ್ಕೆ ಪ್ರಥಮಪುರುಷದ (third person) ಕ್ರಿಯಾಪದವೇ ಬೇಕು. (೪೮ನೆಯ ಪುಟವನ್ನು ನೋಡಿ)

**೩. ದಾಸ್ಯಾಮಿ** - ಇದು 'ಯಚ್ಛಾಮಿ' ಎಂಬುದರ ಭವಿಷ್ಯತ್ಕಾಲದ ರೂಪ 'ಕೊಡು' ಎಂಬರ್ಥದ ಮಾತಿಗೂ ಚತುರ್ಥಿಯೇ ಬೇಕು.

**೪. ಯುಷ್ಮಾನ್ ಶಿಕ್ಷಯಾಮಿ** - 'ನಿಮ್ಮನ್ನು' ಎಂದು ಸಂಸ್ಕೃತದಲ್ಲಿದ್ದರೂ 'ನಿಮಗೆ' ಎಂದು ಕನ್ನಡಿಸಬೇಕಾಗಿದೆ.

**೫. ಪಶ್ಯಾನಿ** - (ನಾನು) ನೋಡೋಣ- ಆಜ್ಞಾರ್ಥ. (೫೭ನೆಯ ಪುಟವನ್ನು ನೋಡಿ).

**'ತುಮ್'** ಎಂಬರ್ಥದ ಅವ್ಯಯಕ್ಕೆ ಸಾಮಾನ್ಯವಾಗಿ 'ಅದಕ್ಕೆ ' ಎಂದು ಕನ್ನಡಿಸಬೇಕಾಗುವದು. ಗನ್ತುಮ್ (ಹೋಗುವದಕ್ಕೆ), ಧಾವಿತುಮ್, ಕರ್ತುಮ್, ಕ್ಷಾಲಯಿತುಮ್, ಭವಿತುಮ್, ದ್ರಷ್ಟುಮ್, ಸ್ಥಾತುಮ್, ಕ್ರೀಡಿತುಮ್ - ಹೀಗೆ 'ತುಮ್' ಪ್ರತ್ಯಯಾಂತ ಶಬ್ದಗಳನ್ನು ಏರ್ಪಡಿಸಿಕೊಳ್ಳಬೇಕು.

## ಅಭ್ಯಾಸ ೪೨

**ಕನ್ನಡಿಸಿರಿ :**

१. हे बालाः अत्र आगच्छत । २. सर्वे बाला आगच्छन्तु । ३. अत्रोपविशतु (- अत्र उपविशतु) भवान् । ४. अहं पाठशालां गन्तुम् इच्छामि । ५. अहं संस्कृतं भाषितुं न शक्तः । ६. अहं नदीं द्रष्टुम् इदं पत्तनम् आगतवान् । ७. अहं किञ्चिदपि वदितुं नैव शक्तः । ८. इदानीं चोरा अत्र स्थातुं न शक्ताः । ९. रक्षापुरुष आगतः । अतः, ते धावितुम् उद्यताः (ಸಿದ್ಧರಾದರು) । १०. श्वानस्य कृष्णवर्णं क्षालयितुं कोऽपि न समर्थः ।

**ಸಂಸ್ಕೃತಕ್ಕೆ ತಿರುಗಿಸಿರಿ :**

೧. ನಾನು ಮಣೆಯ ಮೇಲೆ ಕುಳಿತುಕೊಳ್ಳುವದಕ್ಕೆ (उपवेष्टुम्) ಬಯಸುತ್ತೇನೆ.

೨. ಕೋತಿಯು ಆ ಹಣ್ಣುಗಳನ್ನು ತಿನ್ನುವದಕ್ಕೆ ಬಂದಿತು.

೩. ನೀನು ಬರೆಯುವದಕ್ಕೆ ಶಕ್ತನಲ್ಲವೇನು ?

೪. ಈ ಪುಸ್ತಕವನ್ನು ಯಾರಿಗೂ (कस्मैचिदपि) ಕೊಡುವದಕ್ಕೆ (दातुम्) ನನಗೆ ಇಚ್ಛೆಯಿಲ್ಲ.

೫. ಸಾಯಂಕಾಲದಲ್ಲಿ ಬಾಲಕರು ಆಡುವದಕ್ಕೆ ಆಟದ ಬಯಲಿಗೆ ಹೋಗುವರು.

# ನಲವತ್ತೈದನೆಯ ಪಾಠ

ಇದಮ್ ಶಬ್ದದ ಪುಲ್ಲಿಂಗ ನಪುಂಸಕಲಿಂಗಗಳ ರೂಪಗಳನ್ನು ಹಿಂದೆ (೩೯ನೆಯ ಪಾಠದಲ್ಲಿ) ಕೊಟ್ಟಿತ್ತು. एतत् ಶಬ್ದದ ಪುಲ್ಲಿಂಗ ನಪುಂಸಕಲಿಂಗಗಳ ರೂಪಗಳು ೪೩ನೆಯ ಪುಟದಲ್ಲಿವೆ. ಇಲ್ಲಿ 'इदम्' ಮತ್ತು 'एतत्' ಶಬ್ದದ ಸ್ತ್ರೀಲಿಂಗದ ರೂಪಗಳಿವೆ:

१. भोः आचार्य एतां (इमां) महतीं सेनां पश्य । २. एषा (इयम्) तव शिष्येण धीमता व्यूढा अस्ति । ३. हे अच्युत, एतयोः (अनयोः) सेनयोर्मध्ये मम रथं स्थापय । ४. एतासां सेनानां के के नायकाः ? ५. एतया (अनया) सेनया नाशितया किं फलं भविष्यति ? ६. एतस्यै (अस्यै) नार्यै अभयं दातुम् इच्छामि । ७. एतस्याः (अस्याः) राक्षस्याः सर्वे भीताः सन्ति । ८. एताभ्यः (आभ्यः) बालिकाभ्यः फलानि यच्छाम । ९. एतस्याः नगर्याः पालकः कः ? १०. एतस्यां (अस्यां) नद्यां प्रभूताः मीनाः सन्ति किम् ? ११. एतासु (आसु) पल्लीषु काश्चित् गोप्यो वसन्ति ।

**ವಾಕ್ಯಗಳ ಅರ್ಥವು ಹೀಗಿದೆ :** ೧. ಎಲೈ ಆಚಾರ್ಯನೆ, ಈ ದೊಡ್ಡ ಸೇನೆಯನ್ನು ನೋಡು. ೨. ಇದು ಬುದ್ಧಿವಂತನಾದ ನಿನ್ನ ಶಿಷ್ಯನಿಂದ ಒಡ್ಡಲ್ಪಟ್ಟಿದೆ. ೩. ಎಲೈ ಅಚ್ಯುತನೆ, ಈ (ಎರಡು) ಸೇನೆಗಳ ನಡುವೆ ನನ್ನ ರಥವನ್ನು ನಿಲ್ಲಿಸು. ೪. ಈ ಸೇನೆಗಳ ನಾಯಕರುಗಳು ಯಾರು ಯಾರು? ೫. ಈ ಸೇನೆಯು ನಾಶಿತವಾದ್ದರಿಂದ ಯಾವ ಫಲವು ಆಗುವದು? ೬. ಈ ಹೆಂಗಸಿಗೆ ಅಭಯವನ್ನು ಕೊಡುವದಕ್ಕೆ ಇಚ್ಛಿಸುತ್ತೇನೆ. ೭.ಈ ರಾಕ್ಷಸಿಯತ್ತಲಿಂದ ಎಲ್ಲರೂ ಅಂಜಿರುತ್ತಾರೆ. ೮. ಈ ಹುಡುಗರಿಗೆ ಹಣ್ಣುಗಳನ್ನು ಕೊಡೋಣ. ೯.ಈ ನಗರಿಯ ಪಾಲಕನು ಯಾರು ? ೧೦. ಈ ನದಿಯಲ್ಲಿ ಬಹಳ ಮೀನುಗಳು ಇವೆಯೇನು ? ೧೧. ಈ ಹಳ್ಳಿಗಳಲ್ಲಿ ಕೆಲವರು ಗೊಲ್ಲತಿಯರು ವಾಸಮಾಡುತ್ತಿದಾರೆ.

**ವಿಶೇಷ :** 'ಏತತ್', 'ಇದಮ್' ಎಂಬೀ ಶಬ್ದಗಳನ್ನು ಸ್ವತಂತ್ರವಾಗಿಯೂ ವಿಶೇಷಣವಾಗಿಯೂ ಬಳಸಬಹುದು. ಏಷಾ ಕಾ ? - ಈಕೆ ಯಾರು ? ಇಯಂ ಕುತ ಆಗತಾ - ಇವಳು ಎಲ್ಲಿಂದ ಬಂದಳು ? ಇವು ಸ್ವತಂತ್ರವಾಗಿ ಪ್ರಯೋಗಿಸಿದವು, ಮೇಲೆ ಕೊಟ್ಟಿರುವ ವಾಕ್ಯಗಳಲ್ಲಿ ಇವನ್ನು ವಿಶೇಷಣವಾಗಿಯೇ ಪ್ರಯೋಗಿಸಿದೆ.

# ನಲವತ್ತಾರನೆಯ ಪಾಠ

ಮೂವತ್ತನೆಯ ಪಾಠದಿಂದ ಈವರೆಗೆ ನಿಮಗೆ ಹೇಳಿಕೊಟ್ಟಿರುವ ಮುಖ್ಯ ಶಬ್ದ ರೂಪಗಳನ್ನು ಇಲ್ಲಿ ಕೊಟ್ಟಿದೆ. ಇವನ್ನು ಗಟ್ಟಿಮಾಡಿಕೊಳ್ಳಿ :

| ಆಕಾರಾನ್ತ ಸ್ತ್ರೀಲಿಂಗ | | | ಈಕಾರಾನ್ತ ಸ್ತ್ರೀಲಿಂಗ | | |
|---|---|---|---|---|---|
| १. माला | माले | मालाः | १. नदी | नद्यौ | नद्यः |
| सं. माले | माले | मालाः | सं. नदि | नद्यौ | नद्यः |
| २. मालाम् | माले | मालाः | २. नदीम् | नद्यौ | नदीः |
| ३. मालया | मालाभ्याम् | मालाभिः | ३. नद्या | नदीभ्याम् | नदीभिः |
| ४. मालायै | मालाभ्याम् | मालाभ्यः | ४. नद्यै | नदीभ्याम् | नदीभ्यः |
| ५. मालायाः | मालाभ्याम् | मालाभ्यः | ५. नद्याः | नदीभ्याम् | नदीभ्यः |
| ६. मालायाः | मालयोः | | ६. नद्याः | नद्योः | नदीनाम् |
| ७. मालायाम् | मालयोः | मालासु | ७. नद्याम् | नद्योः | नदीषु |

೧. ವಿಶೇಷಣಗಳು ಆಕಾರಾಂತವಾಗಿದ್ದರೆ 'ಮಾಲಾ ಶಬ್ದದಂತೆ ಈಕಾರಾಂತವಾಗಿ 'ನದೀ' ಶಬ್ದದಂತೆ ಉದಾ :

| | | | | | |
|---|---|---|---|---|---|
| १. नीला | नीले | नीलाः | १. नीली | नील्यौ | नील्यः |
| सं. नीले | नीले | नालाः | सं. नीलि | नील्यौ | नील्यः |
| २. नीलाम् | नीले | नीलाः | २. नीलीम् | नील्यौ | नीलीः |
| ३. नीलया | नीलाभ्याम् | नीलाभिः | ३. नील्या | नीलीभ्याम् | नीलीभिः |
| ४. नीलायै | नीलाभ्याम् | नीलाभ्यः | ४. नील्यै | नीलीभ्याम् | नीलीभ्यः |
| ५. नीलायाः | नीलाभ्याम् | नीलाभ्यः | ५. नील्याः | नीलीभ्याम् | नीलीभ्यः |
| ६. नीलायाः | नीलयोः | नीलानाम् | ६. नील्याः | नील्योः | नीलीनाम् |
| ७. नीलायाम् | नीलयोः | नीलासु | ७. नील्याम् | नील्योः | नीलीषु |

ನೀಲ - ಎಂದರೆ ಕಪ್ಪುಮಿಶ್ರ ನೀಲಿಯ ಬಣ್ಣದ ಎಂದರ್ಥ. ನೀಲ ಶಬ್ದಕ್ಕೆ ಪುಲ್ಲಿಂಗ ನಪುಂಸಕ ರೂಪಗಳನ್ನು ೩೧ನೇ ಪಾಠದಲ್ಲಿ ಕೊಟ್ಟಿದೆ. 'ನೀಲಾ' ಎಂಬುದನ್ನು ಬಟ್ಟೆ ಮುಂತಾದುದಕ್ಕೂ, 'ನೀಲೀ' ಎಂಬುದನ್ನು ಪ್ರಾಣಿಗಳಿಗೂ ಪ್ರಯೋಗಿಸುತ್ತಾರೆ. ನೀಲಾ ಶಾಟೀ, - ನೀಲಿಯಾದ ಪಂಚೆ ; ನೀಲೀ ಮಹಿಷೀ - ಕಪ್ಪುನೀಲಿಯ ಬಣ್ಣದ ಎಮ್ಮೆ.

ಅ) ಶ್ವೇತಾ, ಪೀತಾ, ಕೋಮಲಾ, ನವೀನಾ, ವಿಶಾಲಾ, ಅನ್ಧಾ - ಮುಂತಾದ ಸ್ತ್ರೀಲಿಂಗ ವಿಶೇಷಣಗಳನ್ನು 'ನೀಲಾ' ಶಬ್ದದಂತೆ ನಡೆಯಿಸಿರಿ.

ಆ) ಗತಾ, ಪಠಿತಾ, ಪತಿತಾ - ಮುಂತಾದ ಸ್ತ್ರೀಲಿಂಗದ ಕೃದಂತವಿಶೇಷಣಗಳನ್ನೂ 'ನೀಲಾ' ಶಬ್ದದಂತೆಯೇ ನಡೆಯಿಸಬೇಕು. ಗತವತೀ, ಪಠಿತವತೀ, ಪತಿತವತೀ - ಮುಂತಾದ **ಈ**ಕಾರಾಂತ ಕೃದಂತವಿಶೇಷಣಗಳನ್ನು 'ನೀಲೀ' ಶಬ್ದದಂತೆಯೂ ನಡೆಸಿರಿ. (ಕೃದಂತ ವಿಶೇಷಣಗಳ ವಿಷಯಕ್ಕೆ ೩೨ನೆಯ ಪುಟವನ್ನು ನೋಡಿರಿ).

**ತಕಾರಾಂತ ಪುಲ್ಲಿಂಗ** — धनवत्

| | | |
|---|---|---|
| १. धनवान् | धानवन्तौ | धनवन्तः |
| सं. धनवन् | धानवन्तौ | धनवन्तः |
| २. धनवन्तम् | धनवन्तौ | धनवतः |
| ३. धनवता | धनवद्भ्याम् | धनवद्भिः |
| ४. धनवते | धनवद्भ्याम् | धनवद्भ्यः |
| ५. धनवतः | धनवद्भ्याम् | धनवद्भ्यः |
| ६. धनवतः | धनवतोः | धनवताम् |
| ७. धनवति | धनवतोः | धनवत्सु |

**ನಕಾರಾಂತ ಪುಲ್ಲಿಂಗ** — योगिन्

| | | |
|---|---|---|
| १. योगी | योगिनौ | योगिनः |
| सं. योगिन् | योगिनौ | योगिनः |
| २. योगिनम् | योगिनौ | योगिनः |
| ३. योगिना | योगिभ्याम् | योगिभिः |
| ४. योगिने | योगिभ्याम् | योगिभ्यः |
| ५. योगिनः | योगिभ्याम् | योगिभ्यः |
| ६. योगिनः | योगिनोः | |
| ७. योगिनि | योगिनोः | योगिषु |

೧. **ವತ್, ಮತ್** - ಎಂಬಿವು ಕೊನೆಯಲ್ಲಿರುವ ಶಬ್ದಗಳು **ಧನವತ್** ಶಬ್ದದಂತೆ. ಉದಾ: **ಗುಣವತ್, ಧೈರ್ಯವತ್, ವೀರ್ಯವತ್, ಬುದ್ಧಿಮತ್, ಧೀಮತ್, ಶ್ರೀಮತ್** - ಇವುಗಳೆಲ್ಲ ಹೀಗೆಯೇ ನಡೆಯುವವು.

೨. ನೀನು ಎಂಬರ್ಥದ **ಭವತ್** ಶಬ್ದವೂ ಹೀಗೆಯೇ ನಡೆಯುವದು. ಅದಕ್ಕೆ ಪ್ರಥಮಪುರುಷದ ಕ್ರಿಯಾಪದವೇ ಬೇಕು.

೩. **ಗುಣಿನ್, ಧನಿನ್, ತಪಸ್ವಿನ್, ಮಾಯಾವಿನ್** -ಮುಂತಾದ **ಇನ್, ವಿನ್** -ಅಂತವುಳ್ಳ ಶಬ್ದಗಳನ್ನು ಯೋಗಿನ್ ಶಬ್ದದಂತೆ ನಡೆಯಿಸಿರಿ.

**किम् - ಸ್ತ್ರೀಲಿಂಗ**

| | | |
|---|---|---|
| १. का | के | काः |
| २. काम् | के | काः |
| ३. कया | काभ्याम् | काभिः |
| ४. कस्यै | काभ्याम् | काभ्यः |

**तत् - ಸ್ತ್ರೀಲಿಂಗ**

| | | |
|---|---|---|
| १. सा | ते | ताः |
| २. ताम् | ते | ताः |
| ३. तया | ताभ्याम् | ताभिः |
| ४. तस्यै | ताभ्याम् | ताभ्यः |

| | | | | | |
|---|---|---|---|---|---|
| ೫. कस्याः | काभ्याम् | काभ्यः | ೫. तस्याः | ताभ्याम् | ताभ्यः |
| ೬. कस्याः | कयोः | कासाम् | ೬. तस्याः | तयोः | तासाम् |
| ೭. कस्याम् | कयोः | कासु | ೭. तस्याम् | तयोः | तासु |

೧. 'ಕಿಮ್' ಶಬ್ದದ ಮತ್ತು 'ತತ್' ಶಬ್ದದ ಪುಲ್ಲಿಂಗ ನಪುಂಸಕಲಿಂಗಗಳ ರೂಪಗಳನ್ನು ಮೂವತ್ತೊಂದನೆಯ ಪಾಠದಲ್ಲಿ (ಪುಟ ೪೨-೪೩ರಲ್ಲಿ) ಕೊಟ್ಟಿದೆ.

೨. 'ಕಿಮ್' ಶಬ್ದಕ್ಕೆ ಚಿತ್, ಚನ - ಎಂಬ ಅವ್ಯಯಗಳು ಸೇರಿದರೆ ಒಬ್ಬಾನೊಬ್ಬ ಕೆಲವರು, ಎಂದರ್ಥವಾಗುವದೆಂದು ಮೂವತ್ತೆಂಟನೆಯ ಪಾಠ (ಪುಟ ೫೩)ದಲ್ಲಿ ತಿಳಿಸಿದೆಯಷ್ಟೆ? ಸ್ತ್ರೀಲಿಂಗದಲ್ಲಿಯೂ ಇದೇ ಅರ್ಥದ ರೂಪಗಳನ್ನು ಹೀಗೆಯೇ ಮಾಡಿಕೊಳ್ಳಬಹುದು. ಉದಾ: ಕಾಚಿತ್ ನಾರೀ - ಒಬ್ಬಾನೊಬ್ಬ ಹೆಂಗಸು. ಕಾಶ್ಚಿತ್ ನಾರ್ಯಃ - ಕೆಲವರು ಸ್ತ್ರೀಯರು. ಇಂಥವರೆಂದು ಗೊತ್ತಿಲ್ಲವೆಂಬುದನ್ನು ತಿಳಿಸಬೇಕಾದಾಗ ಈ ರೂಪಗಳನ್ನು ಬಳಸಬೇಕು.

| इदम् - ಪುಲ್ಲಿಂಗ | | | इदम् - ಸ್ತ್ರೀಲಿಂಗ | | |
|---|---|---|---|---|---|
| अयम् | इमौ | इमे | इयम् | इमे | इमाः |
| इमम् | इमौ | इमान् | इमाम् | इमे | इमाः |
| अनेन | आभ्याम् | एभिः | अनया | आभ्याम् | आभिः |
| अस्मै | आभ्याम् | एभ्यः | अस्यै | आभ्याम् | आभ्यः |
| अस्मात् | आभ्याम् | एभ्यः | अस्याः | आभ्याम् | आभ्यः |
| अस्य | अनयोः | एषाम् | अस्याः | अनयोः | आसाम् |
| अस्मिन् | अनयोः | एषु | अस्याम् | अनयोः | आसु |

**ವಿಶೇಷ : 'ಇದಮ್'** ಶಬ್ದಕ್ಕೆ ನಪುಂಸಕದಲ್ಲಿ ಪ್ರಥಮಾದ್ವಿತೀಯಾವಿಭಕ್ತಿಗಳಲ್ಲಿ **ಇದಮ್, ಇಮೇ, ಇಮಾನಿ** - ಎಂದೇ ರೂಪಗಳಾಗುವವು ; ಸಂದರ್ಭಕ್ಕೆ ತಕ್ಕಂತೆ ಅರ್ಥವನ್ನು ಊಹಿಸಿಕೊಳ್ಳಬೇಕು. ಉದಾ : ಇದಂ ನ ಮಮ - ಇದು ನನ್ನದಲ್ಲ, ಇದಂ ಪಶ್ಯ - ಇದನ್ನು ನೋಡು. ಮಿಕ್ಕ ವಿಭಕ್ತಿರೂಪಗಳು ಪುಲ್ಲಿಂಗದಂತೆ.

| सर्व - ಪುಲ್ಲಿಂಗ | | | सर्व - ಸ್ತ್ರೀಲಿಂಗ | | |
|---|---|---|---|---|---|
| सर्वः | सर्वौ | सर्वे | सर्वा | सर्वे | सर्वाः |
| सर्वम् | सर्वौ | सर्वान् | सर्वाम् | सर्वे | सर्वाः |
| सर्वेण | सर्वाभ्याम् | सर्वैः | सर्वया | सर्वाभ्याम् | सर्वाभिः |

| | | | | | |
|---|---|---|---|---|---|
| सर्वस्मै | सवर्नाभ्याम् | सर्वेभ्यः | सर्वस्यै | सर्वाभ्याम् | सर्वाभ्यः |
| सर्वस्मात् | सर्वाभ्याम् | सर्वेभ्यः | सर्वस्याः | सर्वाभ्याम् | सर्वाभ्यः |
| सर्वस्य | सर्वयोः | सर्वेषाम् | सर्वस्याः | सर्वयोः | सर्वासाम् |
| सर्वस्मिन् | सर्वयोः | सर्वेषु | सर्वस्याम् | सर्वयोः | सर्वासु |

ಇದಕ್ಕೆ ನಪುಂಸಕಲಿಂಗದಲ್ಲಿ ಪ್ರಥಮಾ ದ್ವಿತೀಯಾವಿಭಕ್ತಿಗಳು ಸರ್ವಂ, ಸರ್ವೇ, ಸರ್ವಾಣಿ. ಮಿಕ್ಕ ರೂಪಗಳು ಪುಲ್ಲಿಂಗದಂತೆ.

**ಕ್ರಿಯಾಪದಗಳ ರೂಪಗಳು**

| | ವರ್ತಮಾನ | | | ಆಜ್ಞಾರ್ಥ | | |
|---|---|---|---|---|---|---|
| ಪ್ರ. | भवति | भवतः | भवन्ति | भवतु-भवतात् | भवताम् | भवन्तु |
| ಮ. | भवसि | भवथः | भवथ | भव-भवतात् | भवतम् | भवत |
| ಉ. | भवामि | भवावः | भवामः | भवानि | भवाव | भवाम |

೧. ನಾಮಪದಗಳೂ **ಭವತ್, ಕಿಮ್, ಸರ್ವ, ಇದಮ್, ತತ್** -ಇವುಗಳೂ ಉದ್ದೇಶ (subject)ವಾಗಿರುವಾಗ ಪ್ರಥಮಪುರುಷಕ್ರಿಯಾಪದವನ್ನುಪಯೋಗಿಸಿ. ಉದಾ: **ರಾಮೋ ಗಚ್ಛತಿ । ಸೀತಾ ಉಪವಿಶತಿ । ಫಲಂ ಪತತಿ । ಕೋ ಹಸತಿ ? ಇದಂ ಭವತು । ಸರ್ವಂ ಗಚ್ಛತು । ತತ್ ತಿಷ್ಠತು । ಅಯಂ ಗಚ್ಛತಿ । ಇಮೇ ಗಚ್ಛನ್ತಿ । ಇಮಾಃ ಕಿಂ ವದನ್ತಿ ? ಇಮಾನಿ ಪತನ್ತಿ । ಸಾ ತ್ವಾಂ ವದತಿ । ತತ್ ತಿಷ್ಠತು, ಪತತು ವಾ । ಅತ್ರ ಉಪವಿಶನ್ತು ಭವನ್ತಃ ।**

**೨.** ಅಸ್ಮತ್ (ನಾನು ಎಂಬರ್ಥದ ಸರ್ವನಾಮವು) ಉದ್ದೇಶವಾಗಿದ್ದರೆ ಉತ್ತಮ ಪುರುಷದ ಕ್ರಿಯಾಪದವು ಬೇಕು. ಉದಾ : ಅಹಂ ಪಠಾಮಿ । ಆವಾಂ ಗಚ್ಛಾವಃ । ವಯಮ್ ಉಪವಿಶಾಮಃ ।

**೩.** ಯುಷ್ಮದ್ (ನೀನು ಎಂಬರ್ಥದ ಸರ್ವನಾಮವು) ಉದ್ದೇಶವಾಗಿರುವಾಗ ಮಧ್ಯಪುರುಷದ ಕ್ರಿಯಾಪದವು ಬೇಕು. ಉದಾ : ತ್ವಂ ಪತ್ರಂ ಲಿಖಸಿ । ಯುವಾಂ ತೂಷ್ಣೀಂ ತಿಷ್ಠಥ । ಯೂಯಂ ಕಿಂ ಪಠಥ ? ರಾಮ, ತ್ವಂ ತತ್ರ ಮಾ ಗಚ್ಛ । ರಾಮಲಕ್ಷ್ಮಣೌ, ಯುವಾಂ ವಿಶ್ವಾಮಿತ್ರಮ್ ಅನುಸರತಮ್ । ಹೇ ಜನಾಃ, ಸರ್ವೇ ಯೂಯಂ ಸುಖಿನೋ ಭವತ ।

**೪.** ಹಾರೈಕೆಯನ್ನು ತಿಳಿಸುವಾಗ ಆಜ್ಞಾರ್ಥಕ್ಕೆ ಪ್ರಥಮಪುರುಷದಲ್ಲಿಯೂ ಮಧ್ಯಮಪುರುಷದಲ್ಲಿಯೂ ತಾತ್ ಎಂಬ ಪ್ರತ್ಯಯವು ವಿಕಲ್ಪದಿಂದ ಬರುತ್ತದೆ. ಉದಾ: ದೇವೋ ಮಾಂ ರಕ್ಷತಾತ್, ತ್ವಂ ಚಿರಂ ಜೀವತಾತ್ ।

## ಭವಿಷ್ಯತ್ಕಾಲದ ಕ್ರಿಯಾರೂಪಗಳು

| | | | | | |
|---|---|---|---|---|---|
| भविष्यति | भविष्यतः | भविष्यन्ति | पठिष्यति | पठिष्यतः | पठिष्यन्ति |
| भविष्यसि | भविष्यथः | भविष्यथ | पठिष्यसि | पठिष्यथः | पठिष्यथ |
| भविष्यामि | भविष्यावः | भविष्यामः | पठिष्यामि | पठिष्यावः | पठिष्यामः |

೧. ಈ ರೂಪಗಳನ್ನು ವರ್ತಮಾನಕಾಲದ ರೂಪಗಳೊಡನೆ ಹೋಲಿಸಿ ನೋಡಿರಿ.

೨ ಭವಿಷ್ಯತ್ಕಾಲದ ರೂಪಗಳಲ್ಲಿರುವ ವಿಶೇಷಗಳನ್ನು ಮೂರನೆಯ ಪುಸ್ತಕದಲ್ಲಿ ವಿವರಿಸಲಾಗಿದೆ.

| | | | | | |
|---|---|---|---|---|---|
| करोति | कुरुतः | कुर्वन्ति | करोतु | कुरुताम् | कुर्वन्तु |
| करोषि | कुरुथः | कुरुथ | कुरु | कुरुतम् | कुरुत |
| करोमि | कुर्वः | कुर्मः | करवाणि | करवाव | करवाम |

೧. ಕೃ (ಮಾಡು) ಎಂಬ ಧಾತುವಿನ ವರ್ತಮಾನ ಆಜ್ಞಾರ್ಥ - ಈ ರೂಪಗಳನ್ನು ಇಲ್ಲಿ ಪೂರ್ತಿಯಾಗಿ ಕೊಟ್ಟಿದೆ. ಭವಿಷ್ಯತ್ಕಾಲವು ಹೀಗಿದೆ : ಕರಿಷ್ಯತಿ, ಕರಿಷ್ಯತಃ, ಕರಿಷ್ಯನ್ತಿ । ಕರಿಷ್ಯಸಿ, ಕರಿಷ್ಯಥಃ, ಕರಿಷ್ಯಥ । ಕರಿಷ್ಯಾಮಿ, ಕರಿಷ್ಯಾವಃ । ಕರಿಷ್ಯಾಮಃ ।

೨. ಈ ಧಾತುವಿಗೆ ಕೃತ - ಮಾಡಲ್ಪಟ್ಟ, ಕೃತವತ್ - ಮಾಡಿದ ಎಂಬ ಕೃದಂತರೂಪಗಳಿವೆ. ಹಿಂದೆ (೨೦, ೨೧ನೆಯ ಪಾಠಗಳಲ್ಲಿ) ಭೂತಕೃದಂತಗಳನ್ನು ಪ್ರಯೋಗಿಸುವ ಕ್ರಮವನ್ನು ತಿಳಿಸಿದೆಯಷ್ಟೆ? ಅದರಂತೆಯೇ ಇವುಗಳನ್ನು ಬಳಸಿರಿ. ಉದಾ : ಘಟಃ ಕೇನ ಕೃತಃ ? ಮಾಲಾ ತಯಾ ಕೃತಾ । ಪುಸ್ತಕಮ್ ಮಯಾ ಕೃತಮ್ । ಭವಾನ್ ಕಿಂ ಕೃತವಾನ್ ? ತೌ ತದಾ ಕಿಂ ಕೃತವನ್ತೌ ? ತೇ ಕಿಂ ಕೃತವನ್ತಃ ?

೩. ಕ್ರಿಯಾಪದಗಳ ವರ್ತಮಾನಕಾಲದ ರೂಪವಾಗಲಿ ಭೂತಕಾಲದ ರೂಪವಾಗಲಿ ಭವಿಷ್ಯತ್ಕಾಲದ ರೂಪವಾಗಲಿ ನಿಮಗೆ ತೋಚದೆ ಇರುವಾಗ ಈ 'ಕೃ' ಧಾತುವಿನ ರೂಪಗಳನ್ನು ಭಾವನಾಮಗಳೊಡನೆ ಪ್ರಯೋಗಿಸಿಕೊಳ್ಳಬಹುದು. ಉದಾ: ಹೋಮಂ ಕರೋತಿ । ಯುದ್ಧಂ ಕೃತವನ್ತಃ । ಭೋಜನಂ ಕರಿಷ್ಯನ್ತಿ । ವಿಕ್ರಮಂ ಕರೋಮಿ ।

# ನಲವತ್ತೇಳನೆಯ ಪಾಠ

## ಪುನರಾವೃತ್ತಿ

ಈ ಪುಸ್ತಕದಲ್ಲಿ ಬಂದಿರುವ ಶಬ್ದರೂಪಗಳನ್ನು ಮನದಟ್ಟು ಮಾಡಿಕೊಳ್ಳುವದಕ್ಕೆ ಹೀಗೆ ಅಭ್ಯಾಸವನ್ನು ಮಾಡಬೇಕು :

**1. ವಾಕ್ಯಗಳಲ್ಲಿರುವ ನಾಮಪದಗಳಿಗೂ ಸರ್ವನಾಮಗಳಿಗೂ ಲಿಂಗ ವಿಭಕ್ತಿ ವಚನಗಳನ್ನು ಕಂಡುಹಿಡಿದು ಅರ್ಥವನ್ನು ಗೊತ್ತು ಮಾಡುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು. ಉದಾ : (ಅ) पुत्र, पुरातने तस्मिन् देवालये दीर्घः सर्पः सरति।**

**ಪುತ್ರ**-ಪುತ್ರಶಬ್ದಃ, ಅಕಾರಾನ್ತಃ ಪುಲ್ಲಿಂಗಃ, ಸಮ್ಬೋಧನಪ್ರಥಮ್ಯೈಕವಚನಾನ್ತಃ । ಅರ್ಥ - ಮಗನೆ.

**ಪುರಾತನೇ** - ಪುರಾತನಶಬ್ದಃ, ಅಕಾರಾನ್ತಃ ಪುಲ್ಲಿಂಗಃ, ಸಪ್ತಮ್ಯೇಕವಚನಾನ್ತಃ । ಅರ್ಥ-ಹಳೆಯದಾದ.

**ತಸ್ಮಿನ್**-ತಚ್ಛಬ್ದಃ, ದಕಾರಾನ್ತಃ ಪುಲ್ಲಿಂಗಃ, ಸಪ್ತಮ್ಯೇಕವಚನಾನ್ತಃ । ಅರ್ಥ-ಆ.

**ದೇವಾಲಯೇ**-ದೇವಾಲಯಶಬ್ದಃ, ಅಕಾರಾನ್ತಃ ಪುಲ್ಲಿಂಗಃ, ಸಪ್ತಮ್ಯೇಕ ವಚನಾನ್ತಃ । ಅರ್ಥ-ದೇವಾಲಯದಲ್ಲಿ.

**ದೀರ್ಘಃ** - ದೀರ್ಘಶಬ್ದಃ, ಅಕಾರಾನ್ತಃ ಪುಲ್ಲಿಂಗಃ, ಪ್ರಥಮ್ಯೈಕವಚನಾನ್ತಃ । ಅರ್ಥ-ಉದ್ದನೆಯ.

**ಸರ್ಪಃ**-ಸರ್ಪಶಬ್ದಃ, ಅಕಾರಾನ್ತಃ ಪುಲ್ಲಿಂಗಃ, ಪ್ರಥಮ್ಯೈಕವಚನಾನ್ತಃ । ಅರ್ಥ-ಹಾವು.

**(ಆ) इमाः कस्य लेखिन्यः ?**

**ಇಮಾಃ** - ಇದಂ ಶಬ್ದಃ, ಮಕಾರಾನ್ತಃ ಸ್ತ್ರೀಲಿಂಗಃ, ಪ್ರಥಮಾಬಹುವಚನಾನ್ತಃ । ಅರ್ಥ - ಇವು.

**ಕಸ್ಯ** - ಕಿಂ ಶಬ್ದಃ, ಮಕಾರಾನ್ತಃ ಪುಲ್ಲಿಂಗಃ, ಷಷ್ಠ್ಯೇಕವಚನಾನ್ತಃ । ಅರ್ಥ - ಯಾವನ.

**ಲೇಖಿನ್ಯಃ** - ಲೇಖಿನೀಶಬ್ದಃ, ಈಕಾರಾನ್ತಃ ಸ್ತ್ರೀಲಿಂಗಃ, ಪ್ರಥಮಾ ಬಹುವಚನಾನ್ತಃ। ಅರ್ಥ - ಲೇಖನಿಗಳು.

**2. ಆಯಾ ಶಬ್ದದ ಆಯಾ ವಿಭಕ್ತಿಯ ರೂಪಗಳನ್ನೆಲ್ಲ ಕೂಡಲೇ ಹೇಳುವದನ್ನು ಕಲಿಯಬೇಕು. ಉದಾಹರಣೆಗೆ ಹಿಂದೆ ಕೊಟ್ಟಿರುವ ವಾಕ್ಯಗಳಲ್ಲಿ :**

ಪುತ್ರ - ಪುತ್ರಃ, ಪುತ್ರೌ, ಪುತ್ರಾಃ ।

ಪುರಾತನೇ - ಪುರಾತನೇ, ಪುರಾತನಯೋಃ, ಪುರಾತನೇಷು ।

ತಸ್ಮಿನ್ - ತಸ್ಮಿನ್, ತಯೋಃ, ತೇಷು ।

ದೀರ್ಘಃ- ದೀರ್ಘಃ, ದೀರ್ಘೌ, ದೀರ್ಘಾಃ ।

ಸರ್ಪಃ - ಸರ್ಪಃ, ಸರ್ಪೌ, ಸರ್ಪಾಃ ।

ಇಮೇ - ಇಯಮ್, ಇಮೇ, ಇಮಾಃ ।

**3. ಕ್ರಿಯಾಪದಗಳಿಗೆ ಆಯಾ ಪುರುಷದ ಮೂರು ವಚನಗಳ ರೂಪಗಳನ್ನೂ ಹೇಳುವದಕ್ಕೆ ಕಲಿಯಬೇಕು. ಉದಾಹರಣೆಗೆ :**

भगवद्गीतां पठामि । किम् इच्छसि ? बलिकाभ्यां फलानि यच्छ ।

ಈ ವಾಕ್ಯಗಳಲ್ಲಿ ಪಠಾಮಿ, ಪಠಾವಃ, ಪಠಾಮಃ । ಇಚ್ಛಸಿ, ಇಚ್ಛಥಃ, ಇಚ್ಛಥ । ಯಚ್ಛ, ಯಚ್ಛತಮ್, ಯಚ್ಛತ । ಹೀಗೆ ರೂಪಗಳನ್ನುಹೇಳುವದಕ್ಕೆ ಬರಬೇಕು.

**4. ಯಾವದಾದರೊಂದು ವಾಕ್ಯವನ್ನು ವಸ್ತುಬೋಧಕ, ನಿಷೇಧಕ, ಪ್ರಶ್ನಾರ್ಥಕ ಅಥವಾ ಆಕ್ಷೇಪಾರ್ಥಕ, ಆಜ್ಞಾರ್ಥಕ, ಆಶ್ಚರ್ಯಾದಿಭಾವಬೋಧಕ - ಈ ರೂಪಗಳಿಗೆ ತಿರುಗಿಸುವುದನ್ನು ಕಲಿಯಬೇಕು. ಉದಾಹರಣೆಗೆ :**

१. सर्वाणि नक्षत्राणि को वा गणयति ? (ಆಕ್ಷೇಪಾರ್ಥಕ)

२. सर्वाण्यपि नक्षत्राणि न कोऽपि गणयितुं शक्तः । (ನಿಷೇಧಾರ್ಥಕ)

३. सर्वाण्यपि नक्षत्राणि गणय, पश्यामि । (ಆಜ್ಞಾರ್ಥಕ)

४. अहो! कति नक्षत्राणि सन्ति ! (ಆಶ್ಚರ್ಯಬೋಧಕ)

## ಅಭ್ಯಾಸ ೪೪

**ಈ ಕೆಳಗಿನ ಪ್ರಶ್ನವಾಕ್ಯಗಳನ್ನು ಕನ್ನಡಿಸಿ, ಅವುಗಳಿಗೆ ತಕ್ಕ ಉತ್ತರವನ್ನು ಬರೆಯಿರಿ :** [ಈ ಪುಸ್ತಕದಲ್ಲಿರುವ ಯಾವದಾದರೂ ವಾಕ್ಯವನ್ನು ಬರೆಯಬಹುದು ; ಅಥವಾ ಹೊಸ ವಾಕ್ಯವನ್ನು ಮಾಡಿಯೇ ಬರೆಯಬಹುದು. ಉದಾಹರಣೆಗೆ : ಕೇ ಯೂಯಮ್ ? ನೀವು ಯಾರು ? ಈ ವಾಕ್ಯಕ್ಕೆ ವಯಂ ಕೇಚಿದ್ ದರಿದ್ರಾಃ ಬ್ರಾಹ್ಮಣಾಃ । ವಯಮ್ ಅಸ್ಯಾಂ ಪಾಠಶಾಲಾಯಾಂ ವಿದ್ಯಾರ್ಥಿನಃ । ವಯಮ್ ಈಶ್ವರಶ್ರೇಷ್ಠಿನಃ ಪುತ್ರಾಃ । ವಯಂ ದೂರಾತ್ ದೇಶಾತ್ ಆಗತಾಃ ಕೇಚಿತ್ । - ಹೀಗೆಲ್ಲ ಉತ್ತರವನ್ನು ಬರೆಯಬಹುದು].

१. को दरिद्रः ? २. तत्र केचित् किं वदन्ति ? ३. अहं किं करवाणि ? ४. भवान् केन मार्गेण आगतः ? ५. गोप्यः क्षीरं कुत्र नयन्ति ? ६. त्रीनपि लोकान् को रक्षति ? ७. स ब्राह्मणः कस्मिन् ग्रामे वसति ?८. इदानीं चतुरोऽपि वेदान् कः पठति ? ९. दशरथस्य पत्न्यः काः ? १०. भगवान् कुत्र तिष्ठति ? ११. चोरः पेटिकया सह किं नयति ?

## ಅಭ್ಯಾಸ ೪೫

ಈ ವಾಕ್ಯಗಳನ್ನು ನಿಷೇಧಾರ್ಥಕವೇ ಮುಂತಾದ ಯಾವದಾದರೊಂದು ಅರ್ಥದ ವಾಕ್ಯದ **ರೂಪದಲ್ಲಿ ಬರೆಯಿರಿ :**

१. को वा सर्वं भक्षयति ? २. सत्यमेव वदत । ३. श्वः स तत्र न गच्छतीति न । ४. अहो बालाः, मण्डूकान् (ಕಪ್ಪೆಗಳನ್ನು) वृथा किं मारयथ ?

# ಶಬ್ದಕೋಶ

ಈ ಪುಸ್ತಕದಲ್ಲಿ ಬಂದಿರುವ ಪ್ರಧಾನಶಬ್ದಗಳನ್ನು ಈ ಕೆಳಗೆ ಅರ್ಥಸಮೇತ ಬರೆದಿದೆ. ಇವುಗಳನ್ನು ನೆನಪಿಟ್ಟುಕೊಳ್ಳಿರಿ. ನಾಮಗಳಿಗೂ ನಾಮವಿಶೇಷಣಗಳಿಗೂ ಅರ್ಥವನ್ನು ಬರೆಯದೇ ಇದ್ದರೆ ಸಂಸ್ಕೃತಶಬ್ದವೇ ಕನ್ನಡದಲ್ಲಿಯೂ ಬಳಕೆಯಲ್ಲಿದೆ ಎಂದು ತಿಳಿಯಬೇಕು.

## ಅವ್ಯಯಗಳು

अत्र - ಇಲ್ಲಿ

तत्र - ಅಲ್ಲಿ

कुत्र ? - ಎಲ್ಲಿ?

सर्वत्र - ಎಲ್ಲೆಲ್ಲಿಯೂ

इदानीम् - ಈಗ

तदा - ಆಗ

कदा ? - ಯಾವಾಗ?

सदा, सर्वदा - ಯಾವಾಗಲೂ

अद्य - ಇಂದು

ह्यः - ನಿನ್ನೆ

श्वः - ನಾಳೆ

परश्वः - ನಾಡಿದ್ದು

अद्यापि - ಇಂದಿಗೂ

एकदा - ಒಂದು ಕಾಲದಲ್ಲಿ, ಒಮ್ಮೆ

पुरा - ಹಿಂದೆ

पूर्वेद्युः -ಮುನ್ನಿನ ದಿನ

शीघ्रम्, झटिति, त्वरितम् -ಬೇಗನೆ

अतः -ಇಲ್ಲಿಂದ, ಆದ್ದರಿಂದ

## ಸರ್ವನಾಮಗಳು

अहम् - ನಾನು

त्वम् - ನೀನು

भवान् - ನೀನು (ಗೌರವಾರ್ಥ)

सः - ಅವನು, ಆ

सा - ಅವಳು, ಆ

तत् - ಅದು, ಆ

इदम् - ಇದು, ಈ

एतत् - ಇದು, ಈ

असौ - ಅವನು, ಅವಳು

किम् - ಯಾವದು ?

किम् - ಏನು ?

उभौ - ಇಬ್ಬರೂ

एकः - ಒಬ್ಬನು, ಒಬ್ಬಾನೊಬ್ಬ

एका - ಒಬ್ಬಳು, ಯಾವಳೋ ಒಬ್ಬಳು

एकम् - ಒಂದು

एके -ಕೆಲವರು

कश्चित् -ಒಬ್ಬಾನೊಬ್ಬನು

केचित् -ಕೆಲವರು

## ಅವ್ಯಯಗಳು

इतः -ಇಲ್ಲಿಂದ, ಈ ಕಾರಣದಿಂದ

नमः -ನಮಸ್ಕಾರ

कुतः? -ಎಲ್ಲಿಂದ ? ಏಕೆ?

ततः -ಅಲ್ಲಿಂದ, ಆದ್ದರಿಂದ

पृथक् -ಬೇರೆಯಾಗಿ

तथा -ಹಾಗೆ

एवम् -ಹೀಗೆ

कथम् ? -ಹೇಗೆ?

कथञ्चित् -ಹೇಗೋ

न -ಇಲ್ಲ, ಅಲ್ಲ

मा (कुरु) -(ಮಾಡ) ಬೇಡ

(वनम्) इव -(ಕಾಡಿನ) ಹಾಗೆ, ಅಂತೆ

(स) एव -(ಅವ)ನೇ

(धनं) च -ಮತ್ತು (ಹಣವೂ)

अहम् (अपि)-(ನಾನು) ಕೂಡ

रे, अरे -ಎಲೆ, ಎಲಾ

हे -ಎಲೈ

भोः -ಎಲೈ, ಅಯ್ಯ

नाम -ಎಂಬ

अनु -ಅನುಸರಿಸಿ, ಹಿಂದೆ

अतीव -ಬಹಳವಾಗಿ

तूष्णीम् -ಸುಮ್ಮನೆ

वा (अथवा) किं वा -ಅಥವಾ

## ಸರ್ವನಾಮಗಳು

काचित् -ಒಬ್ಬಾನೊಬ್ಬಳು

सर्वे -ಎಲ್ಲರೂ

सर्वाः -ಪ್ರತಿಯೊಬ್ಬನೂ

सर्वा -ಪ್ರತಿಯೊಬ್ಬಳೂ

## ಧಾತುಗಳು

पत -ಬೀಳು

खाद -ತಿನ್ನು

भज -ಭಜಿಸು

अनुसर -ಹಿಂಬಾಲಿಸು

विश -ಹೊಗು

प्रविश -ಹೋಗು

स्रव -ಜಿನುಗು

हस -ನಗು

नय -ಒಯ್ಯು

आनय -ತಾ, ತೆಗೆದುಕೊಂಡು ಬಾ

सञ्चर -ಓಡಾಡು

दश -ಕಡಿ

इच्छ -ಬಯಸು

पाठय -ಓದಿಸು

आह्वय-ಕರೆ

प्रतिवस -ವಾಸಮಾಡು

सर -ಹರಿದಾಡು

आगच्छ -ಬಾ

उत्तिष्ठ-ಏಳು

## 'ತುಮುನ್' ಪ್ರತ್ಯಯಾಂತ ಅವ್ಯಯಗಳು

- ತೊಳೆಯುವದಕ್ಕೆ
भवितुम् - ಆಗುವದಕ್ಕೆ
द्रष्टुम् - ನೋಡುವದಕ್ಕೆ
स्थातुम् - ನಿಲ್ಲುವದಕ್ಕೆ
क्रीडितुम् - ಆಡುವದಕ್ಕೆ
दातुम् - ಕೊಡುವದಕ್ಕೆ
शिक्षितुम् - ಕಲಿಸುವದಕ್ಕೆ
पठितुम् - ಓದುವದಕ್ಕೆ
लेखितुम् - ಬರೆಯುವದಕ್ಕೆ
सम्भाषितुम् - ಮಾತಾಡುವದಕ್ಕೆ
गन्तुम् - ಹೋಗುವದಕ್ಕೆ
धावितुम् - ಓಡುವದಕ್ಕೆ
कर्तुम् - ಮಾಡುವದಕ್ಕೆ

## ಧಾತುಗಳು

उपविश - ಕುಳಿತುಕೊ
नम - ನಮಸ್ಕರಿಸು
प्रक्षिप - ಎಸೆ
उद्घाटय - ತೆರೆ
क्षालय - ತೊಳೆ
चर - ಆಚರಿಸು, ನಡೆ
पश्य - ನೋಡು
तिष्ठ - ನಿಂತಿರು
धाव - ಓಡು
यच्छ - ಕೊಡು
बोधय - ಕಲಿಸು
पठ - ಓದು
लिख - ಬರೆ
वद - ಹೇಳು
पूजय - ಪೂಜಿಸು
गच्छ - ಹೋಗು
चल - ನಡೆ
पृच्छ - ಕೇಳು
जप - ಜಪಿಸು
स्मर - ಸ್ಮರಿಸು

## ಭೂತಕೃದಂತಗಳು

आगत - ಬಂದ

उपविष्ट - ಕುಳಿತ

स्थित - ನಿಂತ

गत - ಹೋದ

प्रविष्ट - ಒಳಹೊಕ್ಕ

निर्गत - ಹೊರಕ್ಕೆ ಬಂದ

पूजित - ಪೂಜಿಸಲ್ಪಟ್ಟ

कृत - ಮಾಡಲ್ಪಟ್ಟ

दत्त - ಕೊಡಲ್ಪಟ್ಟ

स्पृष्ट - ಮುಟ್ಟಲ್ಪಟ್ಟ

प्रत्यागत - ಹಿಂತಿರುಗಿ ಬಂದ

दृष्ट - ನೋಡಲ್ಪಟ್ಟ

रचित - ರಚಿಸಲ ಟ

उपदिष्ट- ಉಪದೇಶಿಸಲ್ಪಟ್ಟ

पृष्ट - ಕೇಳಲ್ಪಟ್ಟ

अनुसृत - ಅನುಸರಿಸಲ್ಪಟ್ಟ

रक्षित - ಕಾಪಾಡಲ್ಪಟ್ಟ, ಇಡಲ್ಪಟ್ಟ

अपहृत - ಕದಿಯಲ್ಪಟ್ಟ

मिलित - ಸೇರಿದ

गृहीत - ಹಿಡಿಯಲ್ಪಟ್ಟ

रुग्ण - ರೋಗಿಯಾದ

व्यूढ - ಒಡ್ಡಲ್ಪಟ್ಟ

उद्यत - ಸಿದ್ಧನಾದ

भीत - ಹೆದರಿದ

हृष्ट - ಹರ್ಷಗೊಂಡ

नाशित - ಹಾಳುಮಾಡಲ ಟ

## ಸೂಚನೆ

**೧. ಅವ್ಯಯಗಳಿಗೆ ಲಿಂಗವಚನವಿಭಕ್ತಿ** - ಇವುಗಳ ರೂಪಭೇದವಿರುವದಿಲ್ಲ. ಅವುಗಳನ್ನು ವಾಕ್ಯದಲ್ಲಿ ಹಾಗೆಯೇ ಉಪಯೋಗಿಸಬಹುದು.

**೨. ಕ್ರಿಯಾಪದಗಳ ಆಜ್ಞಾರ್ಥದ ಮಧ್ಯಮಪುರುಷದ ಏಕವಚನಗಳ ರೂಪವನ್ನು ಪಟ್ಟಿಯಲ್ಲಿ ಕೊಟ್ಟಿರುತ್ತದೆ.**

ಇವುಗಳಿಗೆ (೬೪ನೆಯ ಪುಟದಲ್ಲಿರುವಂತೆ) 'ಆಗಚ್ಛತಿ, ಆಗಚ್ಛತಃ ಆಗಚ್ಛನ್ತಿ' ಎಂದು ಮುಂತಾಗಿ ರೂಪಗಳನ್ನು ಮಾಡಿಕೊಳ್ಳಬೇಕು ; 'ಆಗಚ್ಛತು, ಆಗಚ್ಛತಾಮ್ ಆಗಚ್ಛನ್ತು' ಎಂದು ಮುಂತಾದ ರೂಪಗಳನ್ನು ಮಾಡಿಕೊಳ್ಳಬೇಕು. 'ಭೂತಕೃದಂತ' ಗಳನ್ನು (೪೮ನೆಯ ಪುಟಗಳಲ್ಲಿರುವಂತೆ) ಭೂತಕಾಲದ ಕ್ರಿಯಾಪದಗಳ ಸ್ಥಾನದಲ್ಲಿ ಪ್ರಯೋಗಿಸುವುದನ್ನು ಕಲಿಯಬೇಕು. ಉಪವಿಷ್ಟಃ, ಉಪವಿಷ್ಟವಾನ್ (ಕುಳಿತನು); ವಿಶೇಷಣವಾಗಿ ಪ್ರಯೋಗಿಸುವುದನ್ನೂ ಕಲಿಯಬೇಕ. ಆಗ 'ಉಪವಿಷ್ಟಃ' ಎಂದರೆ 'ಕುಳಿತ' ಎಂದರ್ಥ. ಈ ಕೃದಂತಗಳಿಗೆ (೪೯ನೆಯ ಪುಟದಲ್ಲಿರುವಂತೆ) ದೃಷ್ಟಃ, ದೃಷ್ಟಾ, ದೃಷ್ಟಮ್ - ಎಂದು ಮೂರು ಲಿಂಗಗಳಲ್ಲಿಯೂ ರೂಪಗಳಿರುತ್ತವೆ.

## ನಾಮಗಳು

ಅರ್ಥವನ್ನು ಬರೆಯದೆ ಇದ್ದರೆ ಅದೇ ಮಾತನ್ನು ಕನ್ನಡದಲ್ಲಿಯೂ ಹೇಳಿಕೊಳ್ಳಿರಿ.

| | | |
|---|---|---|
| नारायणः | तपस्वी (ನ.ಪು.) | पुस्तकम् |
| भगवान् (ತ.ಪು.) | योगी (ನ.ಪು.) | वार्तापत्रम् - ವೃತ್ತಾಂತಪತ್ರಿಕೆ |
| परमेश्वरः | सिद्धिः | कलमः - ಬರೆಯುವ ಕಡ್ಡಿ |
| नर - ಒಬ್ಬ ಋಷಿ, ಮನುಷ್ಯ | यक्षः | आचार्यः - ಗುರು |
| देवः - ದೇವನು, ದೇವತೆ | राक्षसः | शिष्यः, छात्रः - ಶಿಷ್ಯ |
| देवी | परोपकारः | पण्डितः |
| सरस्वती | परपीडनम् - ಮತ್ತೊಬ್ಬರಿಗೆ ಕೇಡುಮಾಡುವದು | वचनम् - ಮಾತು |
| ब्राह्मणः | कालः | विश्वासः - ನಂಬಿಕೆ |
| देवालयः | भानुवासरः | पाठः |
| भक्तः | इन्दुवासरः - ಸೋಮವಾರ | ग्रन्थः |
| अनुग्रहः | कुजवासरः - ಮಂಗಳವಾರ | चित्रम् - ಚಿತ್ರ |
| इतिहासः | बुधवासरः | टीका - ಟೀಕೆ |
| भारतम् | गुरुवासरः | वृत्तान्तः - ಸುದ್ದಿ |
| रामायणम् | भृगुवासरः - ಶುಕ್ರವಾರ | पत्रम् - ಬರೆದ ಕಾಗದ |
| भगवद्गीता - ಭಗವದ್ಗೀತೆ | स्थिरवासरः - ಶನಿವಾರ | लेखिनी |
| धर्मः | प्रातः कालः - ಬೆಳಿಗ್ಗೆ | कन्दुकः - ಚೆಂಡು |
| पुण्यम् | प्रभातम् - ಬೆಳಿಗ್ಗೆ | विनोदः |
| पापम् | सायंकालः - ಸಂಜೆ | पाषाणखण्डः - ಕಲ್ಲುತುಂಡು |
| श्रद्धा | पक्षः | क्रीडाङ्गणम् - ಆಟದ ಬಯಲು |
| सत्यम् | मासः - ತಿಂಗಳು | श्रमणः - ಜೈನಸಂನ್ಯಾಸಿ |

अनृतम् - ಸುಳ್ಳು
ज्ञानम्
जपः
मन्त्रः
स्तोत्रम्
पुरोहितः
गृहम् - ಮನೆ
तातः - ತಂದೆ
जननी - ತಾಯಿ
भार्याः, पत्नी-ಹೆಂಡತಿ
दासी - ಹೆಣ್ಣಾಳು
नारी - ಹೆಂಗಸು
पुत्री - ಮಗಳು
सहोदरः-ಒಡಹುಟ್ಟಿದವ
पुत्रः - ಮಗ
बालकः - ಹುಡುಗ
बालिका - ಹುಡುಗಿ
पाचकः - ಅಡಿಗೆ ಮಾಡುವವ
सूदः - ಅಡಿಗೆಯವರು
हस्तः - ಕೈ
पादः - ಕಾಲು
दीपः
पीठम् -ಮಣೆ

आकाशः
सूर्यः
चन्द्रः
कारणम्
आतपः - ಬಿಸಿಲು
क्षामः - ಬರಗಾಲ
ग्रामः - ಊರು
पल्ली - ಹಳ್ಳಿ
नगरी, नगरम् - ನಗರ
जनः
पत्तनम् - ಪಟ್ಟಣ
भूपः - ದೊರೆ
देशः
क्षेमः
श्रेष्ठी (ನ.ಪು.)- ಶೆಟ್ಟಿ
दानम्
ऐश्वर्यम्
सुवर्णम् -ಚಿನ್ನ
आभरणम् - ಒಡವೆ
अर्थः - ಹಣ, ಪ್ರಯೋಜನ
पेटिका - ಪೆಟ್ಟಿಗೆ
अम्बरम् - ಬಟ್ಟೆ
कौशेयवस्त्रम् -ರೇಷ್ಮೆಯ ಬಟ್ಟೆ

यज्ञः
आश्रमः
दुःखम्
सुखम्
स्वर्गः
नरकः
रत्नमाला - ರತ್ನಮಾಲೆ
गर्वः
प्रयोजनम्
सकाशः - ಹತ್ತಿರ
काव्यम्
शास्त्रम्
वाक्यम्
वनम् - ಕಾಡು
उद्यानम् ಹೂದೋಟ
मार्गः - ದಾರಿ
वृक्षः - ದಾರಿ
फलम् -ಹಣ್ಣು
पुष्पम् - ಹೂ
वानरः - ಕೋತಿ
नदी
तीरम् - ದಡ
सरोवर - ಕೆರೆ

| | | |
|---|---|---|
| अङ्गणम् - ಅಂಗಳ | रन्ध्रः - ಕನ್ನ | जलम् - ನೀರು |
| सेवकः, दासः - ಆಳು | चोरः - ಕಳ್ಳ | मीनः - ಮೀನು |
| भिक्षुकः - ತಿರುಕ | रक्षापुरुषः - ಕಾವಲುಗಾರ | मण्डूक - ಕಪ್ಪೆ |
| कुडयम् - ಗೋಡೆ | भटः - ಶೀಪಾಯಿ | सर्पः - ಹಾವು |
| भोजनम् - ಊಟ | प्रजाः - ಪ್ರಜೆಗಳು | बिलम् - ಬಿಲ |
| औदनः - ಅನ್ನ | पालकः - ಕಾಪಾಡುವವನು | मार्जारः - ಬೆಕ್ಕು |
| तक्रम् - ಮಜ್ಜಿಗೆ | सेना - ಸೇನೆ | मूषकः - ಇಲಿ |
| क्षीरम् - ಹಾಲು | खड्गः-ಕತ್ತಿ | श्वानः - ನಾಯಿ |
| घृतम् - ತುಪ್ಪ | अश्वः - ಕುದುರೆ | नक्रः - ಮೊಸಳೆ |
| कूपः - ಬಾವಿ | रथः - ಗಾಡಿ | गोपी - ಗೊಲ್ಲತಿ |
| वापी-ಇಳಿಯುವ ಬಾವಿ | वेगः | स्वप्नः - ಕನಸು |
| घटः - ಗಡಿಗೆ | चारः - ಓಡಾಡುವ ಸೇವಕ | औषधम् |
| आसनम्- ಕುಳಿತು ಕೊಳ್ಳುವ (ಆಸನ) ; | स्वामी (न.पु.)-ಒಡೆಯ | अपराधः - ತಪ್ಪು |
| | पुरुष, मनुष्य - ಮನುಷ್ಯ | पलायनम् - ಓಟ |

ಇಲ್ಲಿ ಕೊಟ್ಟಿರುವ ನಾಮಗಳ ಕೊನೆಯಲ್ಲಿ ವಿಸರ್ಗವಿದ್ದರೆ ನರಃ, ನರೌ, ನರಾಃ - ಎಂದು ಮುಂತಾಗಿಯೂ, ಕೊನೆಯಲ್ಲಿ 'ಮ್' ಇದ್ದರೆ ಚಿತ್ರಮ್, ಚಿತ್ರೇ, ಚಿತ್ರಾಣಿ - ಎಂದು ಮುಂತಾಗಿಯೂ (೪೧ನೇ ಪುಟದಲ್ಲಿರುವ **'ದೇವ'** ಶಬ್ದ, **'ಅಮ್ಬರ'** ಶಬ್ದಗಳ ರೂಪಗಳಂತೆ) ರೂಪಗಳಾಗುವವು. ಆಕಾರಾಂತ ಶಬ್ದಗಳಿಗೆ ಟೀಕಾ, ಟೀಕೆ, ಟೀಕಾಃ ಎಂದು ಮುಂತಾಗಿ (೬೩ನೆಯ ಪುಟದಲ್ಲಿರುವ **'ಮಾಲಾ'** ಶಬ್ದದಂತೆ)ಯೂ, ಈಕಾರಾಂತ ಶಬ್ದಗಳಿಗೆ ದೇವೀ, ದೇವ್ಯೌ, ದೇವ್ಯಃ- ಎಂದು ಮುಂತಾಗಿ (೬೩ನೆಯ ಪುಟದಲ್ಲಿರುವ 'ನದೀ' ಶಬ್ದದಂತೆ)ಯೂ ರೂಪಗಳು. ತ.ಪು. ಎಂದಿರುವ ತಕಾರಾಂತ ಪುಲ್ಲಿಂಗಗಳಿಗೆ ...ನೆಯ ಪುಟದಲ್ಲಿರುವ 'ಭಗವತ್' ಶಬ್ದದಂತೆ ರೂಪಗಳು ; ನ.ಪು. ಎಂದಿರುವ ನಕಾರಾಂತ ಪುಲ್ಲಿಂಗಗಳಿಗೆ (೫೧ನೆಯ ಪುಟದಲ್ಲಿರುವ 'ಗುಣಿನ್' ಶಬ್ದದಂತೆ) ಸುಖೀ, ಸುಖಿನೌ, ಸುಖಿನಃ- ಹೀಗೆ ರೂಪಗಳು.

## ನಾಮ ವಿಶೇಷಣಗಳು

| | | |
|---|---|---|
| पूज्य | कृपण - ಜಿಪುಣ | निपुण |
| मूढ | प्राज्ञ - ಬಲ್ಲವನಾದ | कुशल - ಜಾಣನಾದ |
| दुष्ट | सर्वज्ञ - ಎಲ್ಲವನ್ನೂ ಬಲ್ಲ | स्वस्थ |
| श्वेत - ಬಿಳಿಯ | धनी-(ನ.ಪು.)ಹಣವಂತನಾದ | धीमान्, बुद्धिमान् (ತ.ಪು.) ಬುದ್ಧಿವಂತ |
| नील - ನೀಲಿಯ, ಕಪ್ಪಾದ | दरिद्र | |
| कृष्ण - ಕರಿಯ | सुन्दर, रम्य | गुणी -(ನ.ಪು.) ಗುಣವಂತ |
| पीत -ಹಳದಿಯ ಬಣ್ಣದ | विशाल | |
| रक्त - ಕೆಂಪುಬಣ್ಣದ | नवीन -ಹೊಸ | सुखी-(ನ.ಪು.) ಸುಖಿ |
| उष्ण - ಬಿಸಿಯ | पुरातन -ಹಳೆಯ | दुःखी-ದುಃಖಿ(ನ.ಪು.) |
| शीत -ತಣ್ಣನೆಯ | स्वच्छ -ನಿರ್ಮಲವಾದ | दानी -(ನ.ಪು.) |
| मधुर - ಸಿಹಿಯಾದ | प्रबल -ಕೊಡುಗೈತನದ | सम |
| अम्ल - ಹುಳಿಯಾದ | समर्थ | मायावी - (ನ.ಪು.) |
| कोमल | शूर | प्रिय |
| मूकः | प्रभूत - ಬಹಳ | ज्येष्ठ -ಹಿರಿಯ |
| महती - (ಈ.ಸ್ತ್ರೀ) ದೊಡ್ಡದಾದ | अल्प | कनिष्ठ - ಕಿರಿಯ |
| | स्वल्प | गभीर - ಆಳವಾದ |

೧. ಇಲ್ಲಿರುವ ವಿಶೇಷಣಗಳನ್ನು ಮೂರು ಲಿಂಗಗಳಲ್ಲಿಯೂ ನಡೆಯಿಸಿಕೊಳ್ಳಬಹುದು. ಉದಾಹರಣೆಗೆ : ಪೂಜ್ಯಃ (ಪು.), ಪೂಜ್ಯಾ (ಸ್ತ್ರೀ.), ಪೂಜ್ಯಮ್ (ನ.); ದುಃಖೀ (ಪು.), ದುಃಖಿನೀ (ಸ್ತ್ರೀ.), ದುಃಖಿ (ನ.).

೨. ಶಬ್ದಕೋಶದಲ್ಲಿ ಸಂಕೇತನಾಮಗಳನ್ನು ಕೊಟ್ಟಿಲ್ಲ ; ಅವುಗಳಲ್ಲಿ ಗಂಡಸರ ಹೆಸರುಗಳನ್ನು ಪುಲ್ಲಿಂಗದಲ್ಲಿಯೂ ಹೆಂಗಸರ ಹೆಸರುಗಳನ್ನು ಸ್ತ್ರೀಲಿಂಗದಲ್ಲಿಯೂ

ನಿರ್ಜೀವ ವಸ್ತುಗಳ ಹೆಸರುಗಳನ್ನು ನಪುಂಸಕಲಿಂಗದಲ್ಲಿಯೂ ನಡೆಯಿಸಿರಿ. ಉದಾ: **ಕೃಷ್ಣಃ, ದಶರಥಃ, ರಾಮಃ, ಲಕ್ಷ್ಮಣಃ, ಭರತಃ, ಶತ್ರುಘ್ನಃ, ರಾವಣಃ, ವಿಶ್ವಾಮಿತ್ರಃ, ವಸಿಷ್ಠಃ, ಇನ್ದ್ರಃ,** ಇವುಗಳೆಲ್ಲ ಅಕಾರಾಂತ ಪುಲ್ಲಿಂಗ. **ಸೀತಾ, ಊರ್ಮಿಲಾ, ಮನ್ಥರಾ-** ಇವು ಆಕಾರಾಂತ ಸ್ತ್ರೀಲಿಂಗ ; **ಕೈಕೇಯೀ, ಲೇಖಿನೀ** - ಇವು ಈಕಾರಾಂತ ಸ್ತ್ರೀಲಿಂಗ. **ದಣ್ಡಕಾರಣ್ಯಮ್** ಇದು ಅಕಾರಾಂತ ನಪುಂಸಕಲಿಂಗ. ಇದು ಸಾಮಾನ್ಯ ನಿಯಮ. ಶಬ್ದಗಳ ಅಂತದಿಂದಲೂ ಲಿಂಗವನ್ನು ಊಹಿಸಬಹುದು. ಉದಾ : ಅಯೋಧ್ಯಾ (ಸ್ತ್ರೀ.), ರಾಮನವಮೀ (ಸ್ತ್ರೀ.), ಹನೂಮಾನ್ (ತ.ಪು.)

# ಸಂಸ್ಕೃತಭಾಷಾಭ್ಯಾಸ

ಸಂಸ್ಕೃತವನ್ನು ಯಾವ ಆಯಾಸವೂ ಇಲ್ಲದೆ ಸುಲಭವಾಗಿ ಕಲಿಯುವದಕ್ಕೆಂದು ಹೊಸ ಗ್ರಂಥಾವಳಿಯನ್ನು ಏರ್ಪಡಿಸಿದೆ. ಕನ್ನಡಭಾಷೆಯ ಪರಿಚಯವಿರುವವರಿಗೆಲ್ಲ ಇದು ಅತ್ಯುತ್ತಮ ಸಾಧನವಾಗಿರುತ್ತದೆ.

**ಒಂದನೆಯ ಭಾಗ** - ಇದರಲ್ಲಿ ಅಕ್ಷರಗಳ ಪರಿಚಯ, ಅ, ಆಕಾರಾಂತ ನಾಮಗಳು, ವಿಶೇಷಣಗಳು, ತಕಾರಾಂತ ನಕಾರಾಂತ ನಾಮಗಳು, ಅಸ್ಮದ್, ಯುಷ್ಮದ್, ತತ್ - ಈ ಸರ್ವನಾಮಗಳು, ಭೂತಕೃದಂತಗಳು, ಇವು ಮನದಟ್ಟಾಗುವಂತೆ ಸಣ್ಣಸಣ್ಣ ವಾಕ್ಯಗಳನ್ನು ಕನ್ನಡದ ಅರ್ಥದೊಡನೆ ಕೊಟ್ಟು, ಅದೇ ಪದಗಳಿರುವ ಬೇರೆ ಬೇರೆಯ ವಾಕ್ಯಗಳನ್ನು ಏರ್ಪಡಿಸುವದನ್ನು ಕಲಿಸಿರುತ್ತದೆ. ಕನ್ನಡವಾಕ್ಯಗಳ ಅಭ್ಯಾಸಗಳಿಗೆಲ್ಲ ಸಂಸ್ಕೃತದ ಅನುವಾದವು ಪುಸ್ತಕದಲ್ಲೇ ಸಿಕ್ಕುತ್ತಿದ್ದರೂ ವಿದ್ಯಾರ್ಥಿಗಳು ಸ್ವಬುದ್ಧಿಯನ್ನು ಉಪಯೋಗಿಸುವದಕ್ಕೆ ಅವಕಾಶವನ್ನೂ ಕಲ್ಪಿಸಿರುತ್ತದೆ. **ಈಗ ಇದು ನಿಮ್ಮ ಕೈಯ್ಯಲ್ಲಿದೆ. (ಆರನೆಯ ಮುದ್ರಣ : 2004) ಡೆಮ್ಮಿ ಪುಟ 4 + 78**

**ಎರಡನೆಯ ಭಾಗ** - ಒಂದನೆಯ ಭಾಗದ ವಿಷಯಗಳನ್ನು ಹಿಗ್ಗಿಸಿ ಮುಖ್ಯವಾದ ಸ್ವರಾಂತ ಮತ್ತು ವ್ಯಂಜನಾಂತಶಬ್ದದ ರೂಪಗಳನ್ನೂ ಕ್ರಿಯಾಪದದ ವರ್ತಮಾನಕಾಲ, ಅನದ್ಯತನಭೂತ, ಆಜ್ಞಾರ್ಥ, ವಿಧ್ಯಾದ್ಯರ್ಥ- ಈ ರೂಪಗಳನ್ನೂ ಕೃದಂತಗಳ ಮತ್ತು ಮುಖ್ಯವಾದ ಅವ್ಯಯಗಳ ರೂಪಗಳನ್ನೂ ಬಳಸಿಕೊಂಡು ವಾಕ್ಯಗಳ ಮತ್ತು (ಕಥೆಗಳ) ವಾಕ್ಯಬೃಂದಗಳ ರೂಪದಲ್ಲಿ ಬಹು ಸುಲಭವಾದ ಮಾರ್ಗದಲ್ಲಿ ಭಾಷಾಭ್ಯಾಸವನ್ನು ಮಾಡುವಂತೆ ಏರ್ಪಡಿಸಿದೆ. ಅವ್ಯಯಗಳನ್ನು ಉಪಯೋಗಿಸುವ ವಿಧಾನಗಳನ್ನೂ ತಿಳಿಸಿದೆ. **(ನಾಲ್ಕನೆಯ ಮುದ್ರಣ : 1997) ಡೆಮ್ಮಿ ಪುಟ 5 + 151**

**ಮೂರನೆಯ ಭಾಗ** - ಇದರಲ್ಲಿ ಪಂಚತಂತ್ರದ ಮಿತ್ರಭೇದದ ಕಥೆಯನ್ನು (ಉಪಕಥೆಗಳನ್ನು ಬಿಟ್ಟು) ಸಂಗ್ರಹಿಸಿಕೊಡಲಾಗಿದೆ. ಇದನ್ನು ಚಿಂತನೆಮಾಡುವ ಕ್ರಮವನ್ನು ತಿಳಿಸಿದೆ. ಹತ್ತು ಗಣಗಳ ಕೆಲವು ಮುಖ್ಯವಾದ ಧಾತುಗಳಿಗೆ ವರ್ತಮಾನ, ಅನದ್ಯತನ, ಆಜ್ಞಾರ್ಥ, ವಿಧ್ಯಾದ್ಯರ್ಥ, ಪರೋಕ್ಷಭೂತ, ಭವಿಷ್ಯತ್ಕಾಲಗಳು - ಇಷ್ಟು ರೂಪಗಳನ್ನು ಬಳಸುವ ಕ್ರಮವನ್ನು ಕೊಟ್ಟಿದೆ. ಕೃದಂತಗಳ ಉಪಯೋಗವನ್ನೂ ತಿಳಿಸಿದೆ. ಮುಖ್ಯ ಸಮಾಸಗಳಿಗೆ ವಿಗ್ರಹವಾಕ್ಯಗಳನ್ನು ಹೇಳುವ ಕ್ರಮವನ್ನೂ ವಿವರಿಸಲಾಗಿದೆ. **(ನಾಲ್ಕನೆಯ ಮುದ್ರಣ : 2001) ಡೆಮ್ಮಿ ಪುಟ 8+ 176**

**ಪುಸ್ತಕಗಳ ಪೂರ ಬೆಲೆಪಟ್ಟಿಗೆ ಸಂಪರ್ಕಿಸಿ.**

**ಅಧ್ಯಾತ್ಮ ಪ್ರಕಾಶ ಕಾರ್ಯಾಲಯ**

ನಂ.68, 2ನೇ ಬ್ಲಾಕ್
ತ್ಯಾಗರಾಜನಗರ, ಬೆಂಗಳೂರು-560 028
ದೂ. : 080-26765548

ಹೊಳೆನರಸೀಪುರ - 573 211
ದೂ. : 08175-573820